RNI.KAR/KAN/2009/31934 ಬೆಂಗಳೂರು ಸಂಪುಟ: 16 ಸಂಚಿಕೆ: 82 ಪುಟ: 06 ಶುಕ್ರವಾರ 21-02-2025

Mail:mussanje2010@gmail.com www.mussanjenews.com

# ಮುಸ್ಸಂಜೆ

ಪ್ರಭಾವಶಾಲಿ ಕನ್ನಡ ಸಂಜೆ ದಿನ ಪತ್ರಿಕೆ

Managing Editor: N.Veerendra Babu (MBA, LLB)
Executive Editor: L P Babu
Honourary Editor: Venkatesh



ಹೊಸ ಲುಕ್‌ಗೆ ಬದಲಾದ ಚಂದನ್

ಗ್ಲಾಮರಸ್ ಲುಕ್... ಕ್ಲಿಯೋಪಾತ್ರ

ಲೇಡಿ ಖಿಲ್ಜಿ ರೂಪದಲ್ಲಿ ಉರ್ಫಿ

ಪುಟ 6

# ಒಂದೇ ಕುಟುಂಬದ ಐವರು ದುರ್ಮರಣ

## ಕುಂಭಮೇಳಕ್ಕೆ ತೆರಳುತ್ತಿದ್ದ ಕರ್ನಾಟಕದ ಐದು ಮಂದಿ ದಾರುಣ ಸಾವು

**ವಾರಾಣಸಿ** (ಉತ್ತರ ಪ್ರದೇಶ): ಪ್ರಯಾಗ್‌ರಾಜ್ ಮಹಾ ಕುಂಭಮೇಳಕ್ಕೆ ತೆರಳಿದ್ದ ಕರ್ನಾಟಕದವರಿದ್ದ ಕ್ರೂಸರ್ ವಾಹನವೊಂದು ನಿಂತಿದ್ದ ಟ್ರಕ್‌ಗೆ ಹಿಂದಿನಿಂದ ಡಿಕ್ಕಿ ಹೊಡೆದ ಪರಿಣಾಮ ಐವರು ಮೃತಪಟ್ಟು, ಹಲವರು ಗಂಭೀರವಾಗಿ ಗಾಯಗೊಂಡ ಘಟನೆ ಮಿರ್ಜಾಮುರಾದ್ ಪ್ರದೇಶದ ರೂಪಾಪುರ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಶುಕ್ರವಾರ ಬೆಳಗ್ಗೆ ನಡೆದಿದೆ.

ಮೃತ ಐವರಲ್ಲಿ ಪತಿ, ಪತ್ನಿ ಮತ್ತು ಇಬ್ಬರು ಮಕ್ಕಳು ಸೇರಿದ್ದಾರೆ. ಅಪಘಾತದ ಸುದ್ದಿ ತಿಳಿದು ಸ್ಥಳಕ್ಕೆ ಬಂದ ಪೊಲೀಸರು, ಸ್ಥಳೀಯರ ಸಹಾಯದಿಂದ ಗಾಯಾಳುಗಳನ್ನು ತಕ್ಷಣ ಸ್ಥಳೀಯ ಆಸ್ಪತ್ರೆಗೆ ದಾಖಲು ಮಾಡಿರುವುದಾಗಿ ಮಿರ್ಜಾಮುರಾದ್ ಠಾಣಾ ಪೊಲೀಸರು ಮಾಹಿತಿ ತಿಳಿಸಿದ್ದಾರೆ.

ಸಂತೋಷ್ ಕುಮಾರ್(43), ಸುನೀತಾ(35), ನೀಲಮ್ಮ(60) ಗಣೇಶ್ ಮತ್ತು ಶಿವಕುಮಾರ್ ಮೃತ ದುರ್ದೈವಿಗಳು. ಕವಿತಾ, ಅನಿತಾ, ಲೀಲಾವತಿ, ಸಾಯಿನಾಥ್, ಭಗವಾನ್ ಮತ್ತು ಸುಲೋಚನಾ ಗಾಯಗೊಂಡಿದ್ದು, ಗಾಯಾಳುಗಳನ್ನು ಹತ್ತಿರದ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮೃತ ಐವರು ಒಂದೇ ಕುಟುಂಬದವರು ಎಂದು ಹೇಳಲಾಗುತ್ತಿದೆ. ಮಹಾಕುಂಭಮೇಳಕ್ಕೆ ತೆರಳಿದ್ದ ಕರ್ನಾಟಕದವರಿದ್ದ ಕ್ರೂಸರ್ ವಾಹನವು ನಿಂತಿದ್ದ ಟ್ರಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಐವರು ಸಾವನಪ್ಪಿ ಹಲವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಅಪಘಾತದ ತೀವ್ರತೆಯಿಂದ ನಾಲ್ವರು ಸ್ಥಳದಲ್ಲೇ ಸಾವನ್ನಪ್ಪಿದರೆ, ಒಬ್ಬರು ಆಸ್ಪತ್ರೆಗೆ ಸಾಗಿಸುವಾಗ ದಾರಿ ಮಧ್ಯೆ ಅಸುನೀಗಿದ್ದಾರೆ. ಆರು ಜನ ಗಾಯಗೊಂಡಿದ್ದು, ಅವರನ್ನು ಹತ್ತಿರದ ಆಸ್ಪತ್ರೆಗೆ ಸಾಗಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಕುಂಭಮೇಳಕ್ಕೆ ತೆರಳಿ ವಾಪಸ್ ಆಗುತ್ತಿದ್ದ ಬೀದರ್‌ನ ಲಾಡಗೇರಿ ಬಡಾವಣೆಯ 12 ಮಂದಿ ಪ್ರಯಾಣಿಸುತ್ತಿದ್ದ ಕ್ರೂಸರ್ ವಾಹನ ಇದಾಗಿದೆ ಎಂದು ಹೇಳಲಾಗುತ್ತಿದೆ. ಅಯೋಧ್ಯೆ ಕಡೆಗೆ ತೆರಳುತ್ತಿದ್ದ ವೇಳೆ ಈ ಅಪಘಾತ ಸಂಭವಿಸಿದೆ.

**ಪ್ರತ್ಯೇಕ ಅಪಘಾತ**

**ಪುಣ್ಯಸ್ನಾನ ಮಾಡಲು ತೆರಳಿದ್ದ ಆರು ಮಂದಿ ಸಾವು( ಭೋಜ್‌ಪುರ-ಬಿಹಾರ)**: ಮತ್ತೊಂದೆಡೆ ಬಿಹಾರದ ಭೋಜ್‌ಪುರದಲ್ಲಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಆರು ಭಕ್ತರು ಮೃತಪಟ್ಟ ಘಟನೆ ನಡೆದಿದೆ.

ಸಂಜಯ್ ಕುಮಾರ್(62), ಕರುಣಾ ದೇವಿ(58), ಲಾಲ್ ಬಾಬು ಸಿಂಗ್(25), ಪ್ರಿಯಾ ಕುಮಾರ್(20), ಆಶಾ ಕಿರಣ್(28) ಮತ್ತು ಜೂಹಿ ರಾಣಿ(25) ಮೃತರು.



ನಿಯಂತ್ರಣ ಕಳೆದುಕೊಂಡ ಕಾರು ಟ್ರಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಈ ಅಪಘಾತ ಸಂಭವಿಸಿದೆ. ಭೋಜ್‌ಪುರದ ಜಗದೀಶಪುರ ಪೊಲೀಸ್ ಠಾಣೆ ಪ್ರದೇಶದ ದುಲ್ಹಿಂಗಂಜ್ ಪೆಟ್ರೋಲ್ ಪಂಪ್ ಬಳಿ ಬೆಳಗ್ಗೆ ಈ ಅಪಘಾತ ಸಂಭವಿಸಿದ್ದು, ಮೃತರೆಲ್ಲರೂ ಪಾಟ್ನಾ ನಿವಾಸಿಗಳೆಂದು ಹೇಳಲಾಗುತ್ತಿದೆ.

ಮೃತರಲ್ಲಿ ನಾಲ್ವರು ಮಹಿಳೆಯರು ಮತ್ತು ಇಬ್ಬರು ಪುರುಷರು ಸೇರಿದ್ದಾರೆ. ಮೃತರೆಲ್ಲರೂ ಒಂದೇ ಕುಟುಂಬದವರಾಗಿದ್ದು, ಮಹಾಕುಂಭದಲ್ಲಿ ಪುಣ್ಯಸ್ನಾನ ಮಾಡಲು ತೆರಳಿದ್ದರು. ಅಲ್ಲಿಂದ ಹಿಂತಿರುಗುತ್ತಿದ್ದಾಗ ಈ ಅಪಘಾತ ಸಂಭವಿಸಿದೆ.

**ನಾಲ್ವರ ಸಾವು( ಇಟಾ)**: ಮತ್ತೊಂದೊಡೆ ಅಪರಿಚಿತ ವಾಹನವೊಂದು ಮೋಟಾರ್ ಸೈಕಲ್‌ಗೆ ಡಿಕ್ಕಿ ಹೊಡೆದ ಪರಿಣಾಮ ನಾಲ್ವರು ಮೃತಪಟ್ಟ ಘಟನೆ ಇಟಾವಾದಲ್ಲಿ ನಡೆದಿದೆ. ಗುರುವಾರ ರಾತ್ರಿ ಉಸ್ರಹರ್ ಪೊಲೀಸ್ ಠಾಣೆ ವ್ಯಾಪ್ತಿಯ ರುದ್ರಪುರ ಗ್ರಾಮದ ಬಳಿ ಈ ಅಪಘಾತ ಸಂಭವಿಸಿದೆ. ಆಶಿಶ್ (17), ಹಿಮಾಂಶು (15), ರಾಹುಲ್ (22), ಪ್ರಾಂಶು (15) ಮತ್ತು ರೋಹಿತ್ (18) ಮೃತರು.

ದೌಲತ್‌ಪುರ ಗ್ರಾಮದ ಐವರು ಉಸ್ರಹರ್ ಪಟ್ಟಣದ ಬಳಿಯ ಅತಿಥಿ ಗೃಹದಲ್ಲಿ ನಡೆದ ಮದುವೆ ಆರತಕ್ಷತೆಯಲ್ಲಿ ಭಾಗವಹಿಸಿ ಮೋಟಾರ್ ಪುಟ 2



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಾಣಿಜ್ಯ ಸಂಘ ಸಂಸ್ಥೆಗಳ ಪ್ರತಿನಿಧಿಗಳ ಜೊತೆಗೆ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಬಜೆಟ್ ಪೂರ್ವ ಸಭೆ ನಡೆಸಿ ಅವರ ಬೇಡಿಕೆ ಮತ್ತು ಅಹವಾಲುಗಳನ್ನು ಆಲಿಸಿದರು.

## ದೇಶದ ವೇಗ ಹೆಚ್ಚಳಕ್ಕೆ ವಿಶ್ವ ನಾಯಕರ ಅಗತ್ಯ

**ನವದೆಹಲಿ:** ಭಾರತ ಜಾಗತಿಕ ಶಕ್ತಿಯಾಗಿ ಹೊರಹೊಮ್ಮುತ್ತಿದೆ. ಈ ಹಿನ್ನೆಲೆಯಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ವೇಗಹೆಚ್ಚಿಸಲು, ವಿಶ್ವ ದರ್ಜೆಯ ನಾಯಕರ ಅಗತ್ಯವಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಭಾರತಕ್ಕೆ ಜಾಗತಿಕ ಸಂಕೀರ್ಣತೆಗಳಿಗೆ ಪರಿಹಾರ ಕಂಡುಕೊಳ್ಳುವ ಮತ್ತು ಸಮಸ್ಯೆಗಳನ್ನು ಪರಿಹರಿಸುವಾಗ ರಾಷ್ಟ್ರೀಯ ಹಿತಾಸಕ್ತಿ



ಮುಂಚೂಣಿಯಲ್ಲಿಡುವ ಎಲ್ಲಾ ಕ್ಷೇತ್ರಗಳಲ್ಲಿ ಕ್ರಿಯಾತ್ಮಕ ನಾಯಕರ ಅಗತ್ಯ ಮತ್ತು ಅನಿವಾರ್ಯವಾಗಿದೆ ಎಂದು ತಿಳಿಸಿದ್ದಾರೆ. ಭಾರತ್ ಮಂಟಪದಲ್ಲಿ ನಡೆದ ಎರಡು ದಿನಗಳ ಸ್ಕೂಲ್ ಆಫ್ ಅಲ್ಟಿಮೇಟ್ ಲೀಡರ್‌ಶಿಪ್ -ಲೀಡರ್‌ಶಿಪ್ ಕಾನ್ಕ್ಲೇವ್‌ನ ಮೊದಲ ಆವೃತ್ತಿಯನ್ನು ಉದ್ಘಾಟಿಸಿ ಮಾತನಾಡಿದ ಪುಟ 2

## ರಾಜಕೀಯ ಲಾಭಕ್ಕಾಗಿ ಗ್ಯಾರೆಂಟಿ ಯೋಜನೆ ಜಾರಿ

**ಗದಗ:** ರಾಜಕೀಯ ಲಾಭಕ್ಕಾಗಿ ಗ್ಯಾರೆಂಟಿ ಯೋಜನೆಗಳನ್ನು ಜಾರಿಗೆ ತಂದು, ಹೆಣ್ಣು ಮಕ್ಕಳಿಗೆ ಗೌರವಕೊಡುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ್ ಬೊಮ್ಮಾಯಿ ಆರೋಪಿಸಿದ್ದಾರೆ.



ಗದಗನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, 'ಗ್ಯಾರಂಟಿ' ಯೋಜನೆಗಳು ರಾಜಕೀಯ ಲಾಭಕ್ಕಾಗಿ, ಮತಕ್ಕಾಗಿ ಮಾಡಿದ ಯೋಜನೆಗಳಾಗಿವೆ. ಜನರಿಗೆ, ತಾಯಂದಿರಿಗೆ ಕಣ್ಣಲ್ಲಿ ಮಣ್ಣುಹಾಕುವ ಯೋಜನೆ. ಗೃಹ ಲಕ್ಷ್ಮೀ ಹಣ ಸರಿಯಾಗಿ ಯಾವ ತಿಂಗಳೂ ಬಂದಿಲ್ಲ. ಗೃಹ ಲಕ್ಷ್ಮೀ ಯೋಜನೆ ಹಣ ಸಂಬಳವೆ ಅಂತಾ ಕೇಳುತ್ತಾರೆ. ಅದು ಗೌರವ ಧನ. ಪ್ರತಿ ತಿಂಗಳು ಕೊಟ್ಟಿಲ್ಲ ಅಂದರೆ ಹೆಣ್ಣು ಮಕ್ಕಳಿಗೆ ಗೌರವಕೊಡುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ ಎಂದು ದೂರಿದರು.

ರಾಜ್ಯದಲ್ಲಿ ಹಣ ಕಾಸಿನ ವ್ಯವಸ್ಥೆ ಸಂಪೂರ್ಣ ನೆಲಕಚ್ಚಿದೆ. ಮುಖ್ಯಮಂತ್ರಿಗಳು ಭಂಡತನದಿಂದ ಒಪ್ಪಿಕೊಳ್ಳುತ್ತಿಲ್ಲ. ಕೇವಲ ಗ್ಯಾರಂಟಿಗೆ ಅಷ್ಟೆ ಅಲ್ಲ, ಯಾವುದೇ ಅಭಿವೃದ್ಧಿಗೂ ಹಣ ಇಲ್ಲ. ಸಾಲದ ರೂಪದ ಯೋಜನೆಗಳನ್ನು ಬಿಟ್ಟರೆ ಯಾವುದು ಇಲ್ಲ. ಕುಡಿಯುವ ನೀರಿನ ಯೋಜನೆಗೆ ಹಣ ಕೊಡದೇ ಕುಂಠಿತವಾಗಿದೆ. ರಾಜ್ಯ ಸರ್ಕಾರ ಜನರನ್ನ ಸಂಕಷ್ಟಕ್ಕೆ ದೂಡುತ್ತಿದೆ. ಜನ ಸಾಮಾನ್ಯರು ಬಳಸುವ ಎಲ್ಲ ವಸ್ತುಗಳ ಬೆಲೆಯೂ ಏರಿಕೆಯಾಗಿದೆ. ತೆರಿಗೆ ಪಡೆದು ಪುಟ 2

## 'ತ್ರಿಭಾಷಾ ಸೂತ್ರ ಒಪ್ಪಲ್ಲ, ತಮಿಳು ನಮ್ಮ ಹಕ್ಕು'

**ಚೆನ್ನೈ:** ಎನ್‌ಇಪಿ ಬಗ್ಗೆ ಆರೋಪ, ಪ್ರತ್ಯಾರೋಪಗಳ ಸರಣಿ ಮುಂದುವರೆದಿದ್ದು, ತಮಿಳುನಾಡು ತ್ರಿಭಾಷಾ ಸೂತ್ರವನ್ನು ಒಪ್ಪುವುದಿಲ್ಲ ಹಾಗೂ ದ್ವಿಭಾಷಾ ನೀತಿಯನ್ನೇ ಅಳವಡಿಸಿಕೊಳ್ಳಲಿದೆ ಎಂದು ತಮಿಳುನಾಡು ಉಪ ಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ಹೇಳಿದ್ದಾರೆ. ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ವಿರುದ್ಧ ವಾಗ್ದಾಳಿ ನಡೆಸಿದ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರಿಗೆ ಉದಯನಿಧಿ ಈ ಮೂಲಕ ತಿರುಗೇಟು ನೀಡಿದ್ದಾರೆ. ಪುಟ 2

## ಚಾಮುಂಡಿ ಬೆಟ್ಟಕ್ಕೆ ಯತ್ನಾಳ್ ಭೇಟಿ

**ಮೈಸೂರು:** ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ಬಿಜೆಪಿ ಬಂಡಾಯ ನಾಯಕ ಹಾಗೂ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಭೇಟಿ ನೀಡಿ ನಾಡಅಧಿದೇವತೆಗೆ ಪೂಜೆ ಸಲ್ಲಿಸಿದ್ದಾರೆ. ಕೇಂದ್ರ ಬಿಜೆಪಿ ಶಿಸ್ತು ಸಮಿತಿ ನೋಟಿಸ್ ಜಾರಿ ಮಾಡಿದ ಹಿನ್ನೆಲೆಯಲ್ಲಿ ಶಾಸಕ ಯತ್ನಾಳ್ ಚಾಮುಂಡಿ ಪುಟ 2

## ಮಹಾಶಿವರಾತ್ರಿ ವಿಶೇಷ ಬಸ್ ವ್ಯವಸ್ಥೆ

ಹುಬ್ಬಳ್ಳಿ: ಸಾರ್ವಜನಿಕರ ಬೇಡಿಕೆಯ ಮೇರೆಗೆ ಮಹಾಶಿವರಾತ್ರಿ ಆಚರಣೆಗೆ ತೆರಳುವ ಭಕ್ತರು ಹಾಗೂ ಇತರ ಪ್ರಯಾಣಿಕರ ಅನುಕೂಲಕ್ಕಾಗಿ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಿಂದ ಗೋಕರ್ಣ ಹಾಗೂ ಮುರುಡೇಶ್ವರಕ್ಕೆ ವಿಶೇಷ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ ಎಂದು ವಿಭಾಗೀಯ ನಿಯಂತ್ರಣಾಧಿಕಾರಿ ಹೆಚ್. ರಾಮನಗೌಡರ ತಿಳಿಸಿದ್ದಾರೆ. ಮಹಾಶಿವರಾತ್ರಿ ಆಚರಣೆಯ ಪುಟ 2

## ಅಮೆರಿಕ ಎಫ್‌ಬಿಐ ನಿರ್ದೇಶಕರಾಗಿ ಭಾರತೀಯ ಮೂಲದ ಪಟೇಲ್ ಆಯ್ಕೆ

**ವಾಷಿಂಗ್ಟನ್:** ಅಮೆರಿಕದಲ್ಲಿ ಟ್ರಂಪ್ ಅಧಿಕಾರ ವಹಿಸಿಕೊಂಡ ಬಳಿಕ ಸಂಪುಟದಲ್ಲಿ ಭಾರತೀಯರಿಗೆ ಹೆಚ್ಚಿನ ಸ್ಥಾನ ಲಭಿಸುತ್ತಿದೆ. ಇದೀಗ ಅಮೆರಿಕದ ತನಿಖಾ ಸಂಸ್ಥೆ ಫೆಡರಲ್ ಬ್ಯುರೋ ಆಫ್ ಇನ್‌ವೆಸ್ಟಿಗೇಷನ್ ನಿರ್ದೇಶಕರಾಗಿ ಭಾರತೀಯ ಮೂಲದ ಕಾಶ್ ಪಟೇಲ್ ನೇಮಕಗೊಂಡಿದ್ದಾರೆ.

ಪಟೇಲ್ ಮೊದಲಿನಿಂದಲೂ ಟ್ರಂಪ್ ಅವರ ಜೊತೆ ಗುರುತಿಸಿಕೊಂಡಿದ್ದಾರೆ. ಸೆನೆಟ್‌ನಲ್ಲಿ ನಿರ್ದೇಶಕರ ಪ್ರಕ್ರಿಯೆಗೆ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ಪಟೇಲ್



ಅವರ ನಾಮನಿರ್ದೇಶನದ ಪರವಾಗಿ 51 ಮತಗಳು ಬಂದರೆ, ವಿರೋಧವಾಗಿ 49 ಮತಗಳು ಚಲಾವಣೆಯಾಗಿವೆ.

ಎಫ್‌ಬಿಐನ 9 ನೇ ನಿರ್ದೇಶಕರಾಗಿ ಕಾಶ್ ಪಟೇಲ್ ಅವರನ್ನು ನೇಮಕಗೊಳಿಸಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಹಿ ಹಾಕಿದ್ದಾರೆ ಎಂದು ಅಮೆರಿಕ ಸೆನೆಟ್ ತಿಳಿಸಿದೆ.

ವೃತ್ತಿ ಜೀವನದ ಆರಂಭದಲ್ಲಿ ಉನ್ನತ ಕಾನೂನು ಸಂಸ್ಥೆಗಳಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸುವಲ್ಲಿ ಅನೇಕ ಸವಾಲುಗಳನ್ನು ಎದುರಿಸಿದ ಕಾಶ್, ಸುಮಾರು ಒಂಬತ್ತು ವರ್ಷಗಳ ಕಾಲ ಮಿಯಾಮಿ ನ್ಯಾಯಾಲಯುಗಳಲ್ಲಿ ವಕೀಲರಾಗಿ ಕಾರ್ಯನಿರ್ವಹಿಸಿದ್ದಾರೆ.

## ಶೀಘ್ರವೇ ಗೃಹಲಕ್ಷ್ಮಿ ಹಣ ಬಿಡುಗಡೆ

**ಬೆಳಗಾವಿ:** ಇನ್ನು 8-10 ದಿನಗಳಲ್ಲಿ ಗೃಹಲಕ್ಷ್ಮಿ ಯೋಜನೆಯ 3 ತಿಂಗಳ ಹಣ ಬಿಡುಗಡೆಯಾಗಲಿದೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಗೃಹ ಲಕ್ಷ್ಮೀಯರಿಗೆ ಸಂತಸದ ಸುದ್ದಿ ನೀಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂದಿನ 8-10 ದಿನಗಳಲ್ಲಿ ಗೃಹ ಲಕ್ಷ್ಮೀ ಯೋಜನೆಯ ಹಣ ಬಿಡುಗಡೆಯಾಗಲಿದೆ. ಅಪಘಾತದಿಂದ 40 ದಿನಗಳಿಂದ ಆಸ್ಪತ್ರೆಗೆ ದಾಖಲಾಗಿದ್ದರಿಂದ ಖಾತೆಗೆ ಗೃಹಲಕ್ಷ್ಮಿ ಹಣ ಜಮಾ ಮಾಡುವ ಪ್ರಕ್ರಿಯೆ ವಿಳಂಬವಾಗಿದೆ. ಇಷ್ಟು ದಿನ ಬಾಕಿ ಇರುವ ಹಣವನ್ನು 8-10 ದಿನದೊಳಗೆ ಪುಟ 2



## ವಂಚನೆ ಆರೋಪ: ದಂಪತಿ ಬಂಧನ

**ಬೆಂಗಳೂರು:** ವಿದೇಶದಲ್ಲಿ ಉದ್ಯೋಗದ ವೀಸಾ ಮಾಡಿಸಿಕೊಡುವುದಾಗಿ ನಂಬಿಸಿ ಹಣ ಪಡೆದು ವಂಚಿಸಿದ್ದರು ಎಂಬ ಆರೋಪದ ಮೇಲೆ ದಂಪತಿಯನ್ನು ಬೆಂಗಳೂರು ಆಗ್ನೇಯ ವಿಭಾಗದ ಸಿಇಎನ್ ಠಾಣೆ ಪೊಲೀಸರು ಬಂಧಿಸಿದ್ದಾರೆ. ಸಕ್ಲೇನ್ ಸುಲ್ತಾನ್ ಹಾಗೂ ನಿಖಾತ್ ಸುಲ್ತಾನ್ ಬಂಧಿತ ಆರೋಪಿಗಳಾಗಿದ್ದಾರೆ. 51 ಜನರಿಗೆ ಕೋಟ್ಯಂತರ ರೂ. ವಂಚಿಸಿದ್ದ ಆರೋಪ ಎದುರಿಸುತ್ತಿರುವವರಿಂದ 66 ಲಕ್ಷ ರೂ. ನಗದು, ತಲಾ 2 ಕಾರು ಹಾಗೂ ದ್ವಿಚಕ್ರ ವಾಹನಗಳು, 24 ಗ್ರಾಂ ಚಿನ್ನಾಭರಣಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಇದೇ ವೇಳೆ ಮಾಹಿತಿ ನೀಡಿದ್ದಾರೆ.

ಏನಿದು ಘಟನೆ?; ಆರೋಪಿ ನಿಖಾತ್ ಸುಲ್ತಾನ್‌ಗೆ ಈ ಹಿಂದೆ ಬೆಂಗಳೂರಿನ ರೇಸ್ ಕೋರ್ಸ್‌ನಲ್ಲಿ ಹಾರ್ಸ್ ರೈಡಿಂಗ್ ಕಲಿಯುತ್ತಿದ್ದಾಗ ವಿದೇಶಿ ಪುಟ 2

## ಮುಡಾ ಕೇಸ್: ಲೋಕಾಯುಕ್ತ ವರದಿ ಸಮರ್ಥಿಸಿ ಬಿಜೆಪಿಗೆ ತಿರುಗೇಟು

**ಮೈಸೂರು:** ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತದಲ್ಲಿ ಸಿಎಂ ಸಿದ್ದರಾಮಯ್ಯಗೆ ಕ್ಲೀನ್ ಚಿಟ್ ನೀಡಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಟೀಕಿಸಿರುವ ಬಿಜೆಪಿ ನಾಯಕರಿಗೆ ನಗರಾಭಿವೃದ್ಧಿ ಇಲಾಖೆ ಸಚಿವ ಭೈರತಿ ಸುರೇಶ್ ತಿರುಗೇಟು ನೀಡಿದ್ದಾರೆ.

ಮೈಸೂರು ಪ್ರವಾಸ ಕೈಗೊಂಡಿರುವ ಸಚಿವ ಭೈರತಿ ಸುರೇಶ್ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿ ದರ್ಶನ ಪಡೆದಿದ್ದಾರೆ. ತಾಯಿ, ಪತ್ನಿ, ಮಗಳು ಹಾಗೂ ಬೀಗ ಎಸ್ ಆರ್ ವಿಶ್ವನಾಥ್ ಸೇರಿದಂತೆ ಸಚಿವರ ಕುಟುಂಬ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿದೆ.

ಬಳಿಕ ಮಾಧ್ಯಮಗಳ ಜೊತ ಮಾತನಾಡಿದ ಸಚಿವ ಭೈರತಿ ಸುರೇಶ್, ನಾನು ಅವತ್ತೇ ಹೇಳಿದ್ದೆ.



ಬಿಜೆಪಿ ಜೆಡಿಎಸ್ ಅವರಿಗೆ ಮಾನ ಮರ್ಯಾದೆ ಇಲ್ಲ. ಚಾಮುಂಡಿ ತಾಯಿಯ ಮುಂದೆ ಪ್ರಮಾಣ ಮಾಡಿ ಅಂತ ಕರೆದಿದ್ದೆ. ಶ್ರೀವತ್ಸ ಸೇರಿ ಯಾರು ಬರಲಿಲ್ಲ. ಲೋಕಾಯುಕ್ತಕ್ಕಿಂತ ಬಲವಾದ ಸಂಸ್ಥೆ ಯಾವುದಿದೆ ? ಲೋಕಾಯುಕ್ತಕ್ಕೆ ಎಷ್ಟೋ ಕೇಸ್ ಗಳಲ್ಲಿ ಶಿಕ್ಷೆ ಕೊಡಿಸಿದ್ದಾರೆ. ಈಗ ಕೊಟ್ಟಿರುವ ವರದಿ ಕೂಡ ಸರಿಯಾಗಿದೆ ಎಂದು ಲೋಕಾಯುಕ್ತ ವರದಿ ಸಮರ್ಥಿಸಿಕೊಂಡರು.

ಎರಡು ಉದ್ದೇಶದಿಂದ ನಾನು ಮೈಸೂರಿಗೆ ಭೇಟಿ ನೀಡಿದ್ದೇನೆ. ಒಂದು ಚಾಮುಂಡಿ ತಾಯಿಯ ದರ್ಶನ ಮಾಡಿ ನಂಜನಗೂಡು ನಂಜುಂಡಸ್ವಾಮಿಯ ದರ್ಶನ ಮಾಡೋದು. ಇನ್ನೊಂದು ಮೈಸೂರು ಅಭಿವೃದ್ಧಿ ಸಂಬಂಧ ಅಧಿಕಾರಿಗಳ ಜೊತೆ ಸಭೆ ಮಾಡುತ್ತೇನೆ. ಯುಜಿಡಿ ವರ್ಕ್ ಸಂಬಂಧ 750 ಕೋಟಿ ಹಣ ಬಿಡುಗಡೆ ಆಗಿದೆ.

ಡೀ ಮೈಸೂರು ನಗರದಲ್ಲಿ 55ಕಿಲೋ ಮೀಟರ್ ವೈಟ್ ಟ್ಯಾಪಿಂಗ್ ಮಾಡೋಕೆ ಆದೇಶ ಮಾಡಿದ್ದೇನೆ. ನಾಳೆ ನಾಳಿದ್ದು ಅಷ್ಟರಲ್ಲಿ ಡಿಪಿಆರ್ ಆಗತ್ತೆ. ಇನ್ನು ಮಾರ್ಕೆಟ್ ಒಡೆದು ಹೊಸದಾಗಿ ಕಟ್ಟೋದು . ಇವೆಲ್ಲ ಇನ್ನೂ ಮೂರು ನಾಲ್ಕು ತಿಂಗಳಲ್ಲಿ ಕೆಲಸ ಶುರು ಆಗತ್ತೆ. ಬೆಂಗಳೂರಿನ ರೀತಿ ರಸ್ತೆ ಪುಟ 2

## ಬಿಜೆಪಿ ವಿರುದ್ಧ ಪರಂ ವಾಗ್ದಾಳಿ

**ಬೆಂಗಳೂರು:** ಯಾವುದೇ ಸಾಕ್ಷಿ ಪುರಾವೆಗಳಿಲ್ಲದ ಕಾರಣ ಲೋಕಾಯುಕ್ತರು ತನಿಖೆ ನಡೆಸಿ ಮುಖ್ಯಮಂತ್ರಿ ಸಿದ್ದರಾಮಯ್ಯರವರಿಗೆ ಮುಡಾ ಪ್ರಕರಣದಲ್ಲಿ ಕ್ಲೀನ್‌ಚಿಟ್ ನೀಡಿದ್ದಾರೆ. ಇದರ ಬಗ್ಗೆ ವ್ಯರ್ಥ ಹೇಳಿಕೆ ನೀಡುವ ಬಸಲು ಬೇಖಿದ್ದರೆ ಬಿಜೆಪಿಯವರು ಕೋರ್ಟ್ ಹೋಗಲಿ ಎಂದು ಪ್ರತಿಪಕ್ಷ ಬಿಜೆಪಿ ವಿರುದ್ಧ ಪರಮೇಶ್ವರ್ ವಾಗ್ದಾಳಿ ನಡೆಸಿದ್ದಾರೆ.



ಸದಾಶಿವ ನಗರದ ತಮ್ಮ ನಿವಾಸದ ಬಳಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ಸಿಬಿಐ ತನಿಖೆ ನಡೆಸುವುದು ಬೇಡ ಎಂದು ಹೇಳಿದೆ. ಒಂದೇ ಪ್ರಕರಣವನ್ನು ಎರಡು ತನಿಖಾ ಸಂಸ್ಥೆಗಳು ಬೇಡ ಎಂದು ಹೇಳಿದೆ.

ಆದರೆ, ಲೋಕಾಯುಕ್ತ ನೀಡಿರುವ ತೀರ್ಪನ್ನೇ ಬಿಜೆಪಿ ಪ್ರಶ್ನಿಸುವುದಾದರೆ ಮತ್ತೆ ಸಿಬಿಐ ತನಿಖೆ ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಿ ಎಂದು ತಿರುಗೇಟು ನೀಡಿದರು.

ಮುಡಾ ಹಗರಣ ಕುರಿತು ಸ್ವತಂತ್ರ ಸಂಸ್ಥೆಯಾಗಿರುವ ಲೋಕಾಯುಕ್ತ ತನಿಖೆ ನಡೆಸಿ ಹಗರಣಕ್ಕೆ ಸಂಬಂಧಿಸಿದಂತೆ ಯಾವುದೇ ಸಾಕ್ಷಿ ಪುರಾವೆಗಳಿಲ್ಲದ ಕಾರಣ ಮುಖ್ಯಮಂತ್ರಿಗಳಿಗೆ ಕ್ಲೀನ್‌ಚಿಟ್ ನೀಡಿದೆ. ಇದನ್ನು ವಿರೋಧಿಸುವುದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಿದರು.

ಮಾ. 7 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ 16ನೇ ಬಾರಿಗೆ ಮುಂಗಡಪತ್ರ ಮಂಡಿಸಲಿದ್ದಾರೆ. ರಾಜ್ಯಕ್ಕೆ ಹಲವು ಕೊಡುಗೆಗಳನ್ನು ನೀಡುತ್ತಾರೆ ಎಂದು ಸುಳಿವು ನೀಡಿದರು.

ಚುನಾವಣಾ ಸಂದರ್ಭದಲ್ಲಿ ಘೋಷಿಸಲಾದ 5 ಗ್ಯಾರೆಂಟಿ ಯೋಜನೆ ಅನುಷ್ಠಾನಗೊಳಿಸುವುದರ ಜತೆಗೆ ಹಣಕಾಸು ಅಕ್ರಮಗಳನ್ನು ಸರಿಪಡಿಸಿ ರಾಜ್ಯದ ಪುಟ 2

# ಪಾಲಿಕೆಯ ಜೊತೆಗೆ ಸರ್ಕಾರ ಹಾಗೂ ನಾಗರಿಕರು ಎಲ್ಲರೂ ಒಟ್ಟಾಗಿ ಸೇರಿ ರಸ್ತೆ ಅಭಿವೃದ್ಧಿಗೆ ಸಹಕರಿಸೋಣ

**ಬೆಂಗಳೂರು:** ಬೆಂಗಳೂರಿನಲ್ಲಿರುವ ರಸ್ತೆಗಳನ್ನು ಬಿಬಿಎಂಪಿಯ ಜೊತೆಗೆ ಸರ್ಕಾರದ ವಿವಿಧ ಇಲಾಖೆಗಳು ಹಾಗೂ ಪ್ರಮುಖವಾಗಿ ನಗರದ ಎಲ್ಲಾ ನಾಗರೀಕರು ಎಲ್ಲರೂ ಒಟ್ಟಾಗಿ ಕೈಜೋಡಿಸಿದರೆ ನಗರದ ರಸ್ತೆಗಳನ್ನು ಅಭಿವೃದ್ಧಿಗೊಳಿಸಲು ಹಾಗು ಸುಸ್ಥಿತಿಯಲ್ಲಿಡಲು ಸಾಧ್ಯವಿದೆಯೆಂದು ಮುಖ್ಯ ಕಾರ್ಯದರ್ಶಿಯಾದ ಶ್ರೀಮತಿ ಶಾಲಿನಿ ರಜನೀಶ್ ರವರು ಅಭಿಪ್ರಾಯಪಟ್ಟರು.

"ನಮ್ಮ ರಸ್ತೆ 2025"ರ 2ನೇ ದಿನ "ಪಾಲಿಕೆಯ ಇಂಜಿನಿಯರ್ ಗಳ ಸಾಮರ್ಥ್ಯ ವೃದ್ಧಿ" ಕಾರ್ಯಾಗಾರವನ್ನು ಉದ್ದೇಶಿಸಿ ಮಾತನಾಡಿದ ಅವರು, 'ನಮ್ಮ ರಸ್ತೆ' ಕಾರ್ಯಗಾರ ಏರ್ಪಡಿಸಿರುವುದು ಬಹಳ ಪ್ರಮುಖವಾದ ವಿಷಯವಾಗಿದ್ದು, ಅಭಿನಂದನೆಯನ್ನು ತಿಳಿಸುತ್ತಾ ಸರ್ಕಾರದ ಜೊತೆಗೆ ನಾಗರೀಕರು ಕೈಜೋಡಿಸಿದರೆ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು ಸಾಧ್ಯವೆಂದು ತಿಳಿಸಿದರು.

ಬೆಂಗಳೂರಿನ ಹವಾಮಾನದ ಕುರಿತು ನಾಗರೀಕರು ಎಷ್ಟು ಸಂತಸ ವ್ಯಕ್ತಪಡಿಸುತ್ತಾರೋ, ಅಷ್ಟೇ ಪ್ರಮಾಣದಲ್ಲಿ ನಗರದ ರಸ್ತೆಗಳ ಕುರಿತು ಬೇಸರ ಕೂಡಾ ವ್ಯಕ್ತಪಡಿಸುತ್ತಾರೆ. ನಗರದ ರಸ್ತೆಗಳ ಕುರಿತು ಸವಿವರವಾದ ಚಿತ್ರಣವನ್ನು ಇಲ್ಲಿ ಪ್ರಸ್ತಾಪಿಸಿದ್ದು, ಅದರಿಂದ ಸಮಸ್ಯೆಯ ಗಾತ್ರ ಹಾಗೂ ಅದಕ್ಕೆ ಪರಿಹಾರಗಳೇನು ಎಂಬುದನ್ನು ನಿಖರವಾಗಿ ನೋಡಲು ಸಾಧ್ಯವಾಗುತ್ತಿದೆ ಎಂದು ಹೇಳಿದರು.




ಬೆಂಗಳೂರು ದಿನೇ ದಿನೇ ಬೆಳೆಯುತ್ತಿದ್ದು, ಎಲ್ಲ ಜನರೂ ನಗರದೆಡೆಗೆ ಬರಲು ಹೆಚ್ಚು ಆಸಕ್ತಿ ಹೊಂದಿದ್ದಾರೆ. ನಾವು ಜನಸಂಖ್ಯೆಗೆ ಅನುಗುಣವಾಗಿ ಯೋಜನೆ ರೂಪಿಸಿದರೆ ಅದಕ್ಕಿಂತ ಹೆಚ್ಚಾಗಿ ಜನಸಂಖ್ಯೆ ಹಾಗೂ ಸಂಚಾರ ದಟ್ಟಣೆ ನಿಯಂತ್ರಣ ಮೀರಿ ಹೆಚ್ಚುತ್ತಲೇ ಇದೆ. ಅದನ್ನು ನಾವು ಹೇಗೆ ನಿಯಂತ್ರಣ ಮಾಡಬೇಕೆಂಬುದರ ಬಗ್ಗೆ ಕೂಲಂಕುಷವಾಗಿ ಅಧ್ಯಯನ ನಡೆಸಬೇಕಿದೆ ಎಂದು ತಿಳಿಸಿದರು.

"ನಮ್ಮದೇ ಸಮಸ್ಯೆ – ನಮ್ಮದೇ ಪರಿಹಾರ": ನಗರದಲ್ಲಿ ಸಂಚಾರ ದಟ್ಟಣೆಯನ್ನು ನಿಯಂತ್ರಿಸುವ ಸಲುವಾಗಿ ನಾಗರೀಕರಾದವರು ಏನು ಮಾಡಬಹುದು. ಎಲ್ಲಾ ನಾಗರೀಕರು ಇದು "ನಮ್ಮ ಬೆಂಗಳೂರು – ನಮ್ಮ ರಸ್ತೆ, ನಮ್ಮದೇ ಸಮಸ್ಯೆ – ನಮ್ಮದೇ ಪರಿಹಾರ" ಆ ನಿಟ್ಟಿನಲ್ಲಿ ಯೋಚಿಸಿ ಎಲ್ಲರೂ ಒಟ್ಟಾಗಿ ಶ್ರಮಿಸಿದರೆ ಮಾತ್ರ ಇರುವ ಸಮಸ್ಯೆಗೆ ಪರಿಹಾರ ಕಂಡುಕೊಂಡು ಉತ್ತಮ ಫಲಿತಾಂಶ ಯಶಸ್ವಿಯಾಗಲು ಸಾಧ್ಯ.

ಲಾಸ್ಟ್ ಮೈಲ್ ಕನೆಕ್ಟಿವಿಟಿಗೆ ವ್ಯವಸ್ಥೆ ಮಾಡಬೇಕಿದೆ: ಬೆಂಗಳೂರಿನ ನಾಗರೀಕನಾದವನು ಸಾರ್ವಜನಿಕ ಸಾರಿಗೆಯನ್ನು ಬಳಸಬೇಕಿದ್ದರೂ, ಲಾಸ್ಟ್ ಮೈಲ್ ಕನೆಕ್ಟಿವಿಟಿ ಸಮಸ್ಯೆ ಇದೆ.

ಈ ನಿಟ್ಟಿನಲ್ಲಿ ಸಾರ್ವಜನಿಕ ಸಾರಿಗೆ ಸಂಪರ್ಕ ಕಲ್ಪಿಸುವ ಸಲುವಾಗಿ ಖಾಸಗಿ ಸಂಸ್ಥೆಗಳ ಸಹಯೋಗದಲ್ಲಿ ಎಲೆಕ್ಟ್ರಿಕ್ ವಾಹನಗಳು, ಶೇರ್ ಟ್ರಾನ್ಸ್ಪೋರ್ಟ್ ಸೇರಿದಂತೆ ಇನ್ನಿತರೆ ವಾಹನಗಳನ್ನು ಸಂಪರ್ಕಕೊಂಡಿಯು ವ್ಯವಸ್ಥೆ ಮಾಡಿದರೆ ಇರುವ ಸಮಸ್ಯೆ ಬಗೆಹರಿಸಬಹುದಾಗಿದೆ.

ಮುಖ್ಯ ಆಯುಕ್ತರಾದ ಶ್ರೀ ತುಷಾರ್ ಗಿರಿ ನಾಥ್ ರವರು ಮಾತನಾಡಿ, ಪಾಲಿಕೆ ವ್ಯಾಪ್ತಿಯಲ್ಲಿ ಯಾವುದೇ ಕಾಮಗಾರಿ ನಡೆಸಿದರೂ ಒಂದೇ ಮಾದರಿಯ ವಿನ್ಯಾಸವಿರುವಂತೆ ನೋಡಿಕೊಳ್ಳಬೇಕು. ಈ ನಿಟ್ಟಿನಲ್ಲಿ ಬಿಡುಗಡೆಗೊಳಿಸಿರುವ ನಮ್ಮ ರಸ್ತೆ ಕೈಪಿಡಿಯಲ್ಲಿರುವ ಪ್ರಮಾಣಿತ ಕಾರ್ಯವಿಧಾನವನ್ನು ಸರಿಯಾಗಿ ಅನುಸರಿಸಬೇಕೆಂದು ತಿಳಿಸಿದರು.

ನಮ್ಮ ರಸ್ತೆ ಕೈಪಿಡಿಯಲ್ಲಿರುವ ಎಲ್ಲಾ ಅಂಶಗಳನ್ನು ಇಂಜಿನಿಯರ್‌ಗಳು ಸರಿಯಾಗಿ ಅಳವಡಿಸಿಕೊಳ್ಳಬೇಕು. ಪಾಲಿಕೆ ಕೈಗೆತ್ತಿಕೊಳ್ಳುವ ಕಾಮಗಾರಿಗಳು, ಜಲಮಂಡಳಿಯ ನೀರಿನ ಲೈನ್, ಒಳಚರಂಡಿ ವ್ಯವಸ್ಥೆ, ಬೆಸ್ಕಾಂ/ಕೆ.ಪಿ.ಟಿ.ಸಿ.ಎಲ್ ಕೇಬಲ್‌ಗಳು, ಓಎಫ್‌ಸಿ ಕೇಬಲ್‌ಗಳಿಗೆ ಅಳವಡಿಸುವ ಡಕ್ಟ್‌ಳು ಯಾವ ರೀತಿ ಇರಬೇಕು,

ಯಾವ ಕಡೆ ನಿರ್ಮಿಸಬೇಕು ಎಂಬುದನ್ನು ತಪ್ಪದೆ ಪಾಲಿಸಬೇಕು. ಮಾಡುವ ಕೆಲಸ ಸಾಕಷ್ಟು ವರ್ಷಗಳ ಕಾಲ ಬಾಳಿಕೆಯಿರುವಂತೆ ಮಾಡುವುದು ನಮ್ಮ ಕರ್ತವ್ಯವಾಗಿರುತ್ತದೆ ಎಂದು ಹೇಳಿದರು.

ಈ ವೇಳೆ ಪ್ರಧಾನ ಅಭಿಯಂತರರಾದ ಪ್ರಹ್ಲಾದ್, ಮುಖ್ಯ ಅಭಿಯಂತರರಾದ ಶಶಿಕುಮಾರ್, ಲೋಕೇಶ್, ರಾಜೇಶ್ ಸೇರಿದಂತೆ ಇನ್ನಿತರೆ ಸಂಬಂಧಪಟ್ಟ ಅಧಿಕಾರಿಗಳು ಉಪಸ್ಥಿತರಿದ್ದರು.



ದಲಿತ ಉದ್ಯಮಿಗಳ ಮತ್ತು ಕೈಗಾರಿಕೋದ್ಯಮಿಗಳ ಸಂಘದ ಅಧ್ಯಕ್ಷ ಶ್ರೀನಿವಾಸ್ ಮತ್ತು ಮುಖಂಡರಾದ ಆದರ್ಶ್ ಯಲ್ಲಪ್ಪ ಅವರು ತಮ್ಮ ಸಮುದಾಯದ ಬೇಡಿಕೆಗಳ ಬಗ್ಗೆ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.



ಬಿಜೆಪಿ ನಾಯಕರಾದ ಛಲವಾದಿ ನಾರಾಯಣ ಸ್ವಾಮಿ ಅವರು ವಿಧಾನಸೌಧದ ತಮ್ಮ ಕಚೇರಿಯಲ್ಲಿ ಮುಂಬರುವ ಬಜೆಟ್ ಅಧಿವೇಶನ ಕುರಿತು ಚರ್ಚೆ ನಡೆಸಿದರು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಸಿ.ಟಿ. ರವಿ, ಎನ್. ರವಿಕುಮಾರ್, ಎಸ್.ವಿ. ಸಂಕನೂರ, ಕೆ.ಎಸ್ ನವೀನ್, ಡಿ.ಎಸ್. ಅರುಣ್, ವೈ.ಎಂ. ಸತೀಶ್, ಹೇಮಲತಾ ನಾಯಕ್, ಗೋಪಿನಾಥ್ ರೆಡ್ಡಿ, ಕೇಶವ್ ಪ್ರಸಾದ್ ಮತ್ತು ಶಾಂತಾರಾಮ್ ಸಿದ್ದಿ ಅವರು ಉಪಸ್ಥಿತರಿದ್ದರು.

## ಪುರುಷರಿಗೆ ಮೀಸಲಿಟ್ಟ ಆಸನ ಬಿಟ್ಟುಕೊಡಿ

**ಮೈಸೂರು:** ಈ ಹಿಂದೆ ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮಹಿಳೆಯರಿಗೆ ಸೀಟು ಬಿಟ್ಟುಕೊಡುವಂತೆ ಆದೇಶ ಹೊರ ಬಿದ್ದಿತ್ತು. ಆದರೆ, ಈಗ ಸರ್ಕಾರ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ಮಾಡಿಕೊಟ್ಟ ನಂತರ ಪರಿಸ್ಥಿತಿ ಬದಲಾಗಿದೆ. ಪುರುಷ ಪ್ರಯಾಣಿಕರಿಗೆ ಸೀಟುಗಳನ್ನು ಬಿಟ್ಟುಕೊಡುವಂತೆ ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗದಿಂದ ಆದೇಶ ಹೊರ ಬಿದ್ದಿದೆ. ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ ಅವಕಾಶವಿದೆ. ಹೀಗಾಗಿ ಮಹಿಳೆಯರು ಪುರುಷರಿಗೆ ಮೀಸಲಿಟ್ಟ ಆಸನಗಳಲ್ಲಿಯೂ ಕುಳಿತು ಕೊಳ್ಳುತ್ತಿದ್ದಾರೆ.

ಆದರೆ, ಹಣ ಕೊಟ್ಟು ಪ್ರಯಾಣ ಮಾಡುವ ಪುರುಷರಿಗೆ ಆಸನಗಳೇ ಸಿಗುತ್ತಿಲ್ಲ. ಈ ಬಗ್ಗೆ ಸಾರ್ವಜನಿಕವಾಗಿ ಆರೋಪಗಳು ಕೇಳಿ ಬಂದಿವೆ.

ಈ ಹಿನ್ನೆಲೆಯಲ್ಲಿ ಪುರುಷರಿಗೆ ಮೀಸಲಿಟ್ಟಿರುವ ಸೀಟುಗಳನ್ನು ಅವರಿಗೇ ಬಿಟ್ಟುಕೊಡಬೇಕು. ಈ ಬಗ್ಗೆ ಗಮನ ಹರಿಸುವಂತೆ ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ ಚಾಲಕರು ಮತ್ತು ಸಿಬ್ಬಂದಿಗೆ ಆದೇಶ ಹೊರಡಿಸಿದ್ದಾರೆ.

## ತೆರೆ ಮೇಲೆ ಬರಲಿದೆ ಗಂಗೂಲಿ ಬಯೋಪಿಕ್

**ನವದೆಹಲಿ:** ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಸೌರವ್ ಗಂಗೂಲಿ ತಮ್ಮ ಜೀವನಚರಿತ್ರೆ ಚಲನಚಿತ್ರವಾಗುತ್ತಿದೆ. ಬಾಲಿವುಡ್ ನಟ ರಾಜ್ ಕುಮಾರ್ ರಾವ್ ಅವರು ಈ ಚಿತ್ರದಲ್ಲಿ ಸೌರವ್ ಗಂಗೂಲಿಯಾಗಿ ನಟಿಸಲಿದ್ದಾರೆ.

ಈ ಕುರಿತಂತೆ ಮಾಧ್ಯಮಗಳೊಂದಿಗೆ ಮಾತನಾಡಿದ ಗಂಗೂಲಿ, ನಾನು ಕೇಳಿದ ಪ್ರಕಾರ, ರಾಜ್ ಕುಮಾರ್ ರಾವ್ ನನ್ನ ಪಾತ್ರ ಮಾಡುತ್ತಿದ್ದಅರೆ. ಆದರೆ ದಿನಾಂಕಗಳ ಸಮಸ್ಯೆಗಳಿವೆ ಆದ್ದರಿಂದ ಚಲನ ಚಿತ್ರ ತೆರೆಗೆ ಬರಲು ಒಂದು ವರ್ಷಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳಬಹುದು ಎಂದಿದ್ದಾರೆ.

ಭಾರತದ ಪರ 113 ಟೆಸ್ಟ್ ಮತ್ತು 311 ಏಕದಿನ ಪಂದ್ಯಗಳನ್ನು ಆಡಿರುವ ಎಡಗೈ ಬ್ಯಾಟ್ಸಮನ್ ಗಂಗೂಳಿ ಅಂತರರಾಷ್ಟ್ರೀಯ ವೃತ್ತಿಜೀವನದಲ್ಲಿ ಎಲ್ಲಾ ಸ್ವರೂಪಗಳಲ್ಲಿ 18,575 ರನ್ ಗಳಿಸಿದ್ದಾರೆ.

ಕೋಲ್ಕತಾದ ರಾಜಕುಮಾರ ನಂತರ ಕ್ರಿಕೆಟ್ ಅಸೋಸಿಯೇಷನ್ ಆಫ್ ಬಂಗಾಳದ (ಸಿಎಬಿ) ಅಧ್ಯಕ್ಷರಾಗಿದ್ದರು ಮತ್ತು ನಂತರ ಕಳೆದ ವರ್ಷ ಅಕ್ಟೋಬರ್‌ನಲ್ಲಿ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಅಧ್ಯಕ್ಷರಾಗಿ ನೇಮಕಗೊಂಡರು. 2003ರ ವಿಶ್ವಕಪ್ ಹಾಗೂ 21 ಟೆಸ್ಟ್ ಪಂದ್ಯಗಳಲ್ಲಿ ಭಾರತವನ್ನು ಮುನ್ನಡೆಸಿದ್ದರು. ಸಚಿನ್ ತೆಂಡೂಲ್ಕರ್ ಮತ್ತು ವಿವಿಎಸ್ ಲಕ್ಷ್ಮಣ್. ಅವರೊಂದಿಗೆ ಬಿಸಿಸಿಐನ ತಾಂತ್ರಿಕ ಸಮಿತಿಯಲ್ಲಿಯೂ ಸೇವೆ ಸಲ್ಲಿಸಿದ್ದರು ಮತ್ತು ಕ್ರಿಕೆಟ್ ಸಲಹಾ ಸಮಿತಿಯ ಸದಸ್ಯರಾಗಿದ್ದರು.

## ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸುವ ಸಂಬಂಧ ಸಮೀಕ್ಷೆ

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಸಮೀಕ್ಷೆ ನಡೆಸಲು ಎಲ್ಲಾ 8 ವಲಯಗಳ ಜಂಟಿ ಆಯುಕ್ತರನ್ನು ನೋಡಲ್ ಅಧಿಕಾರಿಗಳನ್ನಾಗಿ ನಿಯೋಜಿಸಲಾಗಿದೆ ಎಂದು ಶಿಕ್ಷಣ ವಿಭಾಗದ ವಿಶೇಷ ಆಯುಕ್ತ ಪ್ರೀತಿ ಗೆಹ್ಲೋಟ್ ರವರು ತಿಳಿಸಿದ್ದಾರೆ.

ಸಂವಿಧಾನದ ಕಲಂ 21(ಎ) ಪ್ರಕಾರ 6 ರಿಂದ 14 ವರ್ಷದ ಪ್ರತಿ ಮಗು 8 ವರ್ಷಗಳ ಶಾಲಾ ಶಿಕ್ಷಣವನ್ನು ಪಡೆಯುವುದು ಮೂಲಭೂತ ಹಕ್ಕಾಗಿರುತ್ತದೆ. ಶಾಲೆಯಿಂದ ಹೊರಗುಳಿದ The Karnataka Right of Childern to Free and Compulsory Education Rules, 2012 ರನ್ವಯ ಸ್ಥಳೀಯ ಸಂಸ್ಥೆಗಳು ಶಿಕ್ಷಣ ರಿಜಿಸ್ಟನ್ನು ನಿರ್ವಹಿಸಬೇಕಾಗಿರುತ್ತದೆ. The Karnataka Right of Childern to Free and Compulsory Education Rules, 2014 ರನ್ವಯ ಮಕ್ಕಳ ಹಾಜರಾತಿಗೆ ಸಂಬಂಧಿಸಿದಂತೆ ಸ್ಥಳೀಯ ಸಂಸ್ಥೆಗಳು ನಿರ್ವಹಿಸಬೇಕಾದ ಜವಾಬ್ದಾರಿಗಳ ಬಗ್ಗೆ ತಿಳಿಸಲಾಗಿದೆ.

ಮೊದಲ ಪುಟದಿಂದ

## ಐವರು ದುರ್ಮರಣ

ಸೈಕಲ್‌ನಲ್ಲಿ ಮನೆಗೆ ಹಿಂತಿರುಗುತ್ತಿದ್ದರು. ರುದ್ರಪುರ ಗ್ರಾಮದ ಬಳಿ, ಅಪರಿಚಿತ ವಾಹನವೊಂದು ವೇಗವಾಗಿ ಬಂದು ಅವರ ಮೋಟಾರ್ ಸೈಕಲ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ನಾಲ್ವರು ಸಾವನ್ನಪ್ಪಿದ್ದಾರೆ ಎಂದು ಹಿರಿಯ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಎಸ್‌ಪಿ) ಸಂಜಯ್ ಕುಮಾರ್ ವರ್ಮಾ ಹೇಳಿದ್ದಾರೆ.

ಆಶಿಶ್ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸಾವನ್ನಪ್ಪಿದರೆ, ಹಿಮಾಂಶು, ರಾಹುಲ್ ಮತ್ತು ರೋಹಿತ್ ಸೈಫೈಗೆ ಕರೆದೊಯ್ಯುವ ಮಾರ್ಗಮಧ್ಯೆ ಸಾವನ್ನಪ್ಪಿದರು. ಪ್ರಾಂಶು ಎಂಬಾತ ಚಿಕಿತ್ಸೆ ಪಡೆಯುತ್ತಿದ್ದು, ಅವರ ಸ್ಥಿತಿ ಗಂಭೀರವಾಗಿದೆ. ಮೋಟಾರ್ ಸೈಕಲ್‌ಗೆ ಡಿಕ್ಕಿ ಹೊಡೆದ ವಾಹನವನ್ನು ಪತ್ತೆ ಹಚ್ಚುವ ಪ್ರಯತ್ನ ನಡೆಯುತ್ತಿವೆ ಎಂದು ಸಂಜಯ್ ಕುಮಾರ್ ವರ್ಮಾ ಹೇಳಿದ್ದಾರೆ.

## ವಿಶ್ವನಾಯಕರ ಅಗತ್ಯ

ಅವರು ಪ್ರತಿಯೊಬ್ಬ ಭಾರತೀಯನು 21 ನೇ ಶತಮಾನದ 'ವಿಕಸಿತ ಭಾರತ'ಕ್ಕಾಗಿ ತುಂಬಾ ಶ್ರಮಿಸುತ್ತಿದ್ದಾನೆ ಎಂದು ಹೇಳಿದ್ದಾರೆ. 21 ನೇ ಶತಮಾನದ ನಾಯಕತ್ವವನ್ನು ಸ್ಥಾಪಿಸಲು ಸ್ಕೂಲ್ ಆಫ್ ಅಲ್ಟಿಮೇಟ್ ಲೀಡರ್‌ಶಿಪ್‌ನಲ್ಲಿ ದೊಡ್ಡ ಅವಕಾಶವಿದೆ. ವಿವಿಧ ಕ್ಷೇತ್ರಗಳಲ್ಲಿ ಮುನ್ನಡೆಸುವ ಸ್ಕೂಲ್ ಆಫ್ ಅಲ್ಟಿಮೇಟ್ ಲೀಡರ್‌ಶಿಪ್‌ನಿಂದ ಮಹಾನ್ ನಾಯಕರು ಹೊರಹೊಮ್ಮುತ್ತಾರೆ. ಮಾನವ ಸಂಪನ್ಮೂಲಗಳು ರಾಷ್ಟ್ರದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದಿದ್ದಾರೆ.

"ರಾಷ್ಟ್ರ ನಿರ್ಮಾಣದಲ್ಲಿ ನಾಗರಿಕರ ಅಭಿವೃದ್ಧಿ ಬಹಳ ಮುಖ್ಯ ಎಂದಿರುವ ಪ್ರಧಾನಿ ನರೇಂದ್ರ ಮೋದಿ ಅವರು ವಿವಿಧ ಕ್ಷೇತ್ರಗಳಲ್ಲಿ ನಾಯಕರ ಅಭಿವೃದ್ಧಿ ಬಹಳ ಮುಖ್ಯ, ಈ ನಿಟ್ಟಿನಲ್ಲಿ ಸ್ಕೂಲ್ ಆಫ್ ಅಲ್ಟಿಮೇಟ್ ಲೀಡರ್‌ಶಿಪ್ ಸ್ಥಾಪನೆಯು 'ವಿಕ್ಷಿತ್ ಭಾರತ'ದ ಪ್ರಯಾಣದ ಒಂದು ಪ್ರಮುಖ ಹೆಜ್ಜೆಯಾಗಿದೆ.ಬಹಳ ಶೀಘ್ರದಲ್ಲೇ, ಸ್ಕೂಲ್ ಆಫ್ ಅಲ್ಟಿಮೇಟ್ ಲೀಡರ್‌ಶಿಪ್ ದೊಡ್ಡ ಕ್ಯಾಂಪಸ್ ಸಿದ್ಧವಾಗಲಿದೆ ಎಂದಿದ್ದಾರೆ.

ನಮ್ಮ ಆಡಳಿತ ಮತ್ತು ನೀತಿ ನಿರೂಪಣೆಯನ್ನು ವಿಶ್ವ ದರ್ಜೆಯನ್ನಾಗಿ ಮಾಡಬೇಕು. ನಮ್ಮ ನೀತಿ ನಿರೂಪಕರು, ಅಧಿಕಾರಿಗಳು, ಉದ್ಯಮಿಗಳು ಜಾಗತಿಕ ಮೂಲ ವ್ಯವಸ್ಥೆಯೊಂದಿಗೆ ಸಂಪರ್ಕ ಸಾಧಿಸುವ ಮೂಲಕ ತಮ್ಮ ನೀತಿಗಳನ್ನು ರೂಪಿಸಿದಾಗ ಮಾತ್ರ ಸಾಧ್ಯವಾಗುತ್ತದೆ. 'ವಿಕಸಿತ ಭಾರತ' ನಿರ್ಮಾಣ ಮಾಡಬೇಕಾದರೆ ಎಲ್ಲಾ ಕ್ಷೇತ್ರಗಳು ಅಭಿವೃದ್ಧಿಯಾಗಬೇಕಾಗಿದೆ ಎಂದು ತಿಳಿಸಿದ್ದಾರೆ.

ಭೂತಾನ್ ಪ್ರಧಾನಿ ತ್ಸೆರಿಂಗ್ ಟೋಬ್ಗೆ ಮಾತನಾಡಿ ನನಗೆ ನಾಯಕತ್ವದ ಬಗ್ಗೆ ಯಾವುದೇ ಪಾಠಗಳಿಲ್ಲ, ಅದಕ್ಕೆ ಅರ್ಹನಲ್ಲ, ಇಲ್ಲಿಗೆ ವಿದ್ಯಾರ್ಥಿಯಾಗಿ ಬಂದಿದ್ದೇನೆ. ಸುವರ್ಣ ಅವಕಾಶ ಏಕೆಂದರೆ ವಿಶ್ವದ ಶ್ರೇಷ್ಠ ನಾಯಕ ಪ್ರಧಾನಿ ನರೇಂದ್ರ ಮೋದಿಯವರಿಂದ ನಾಯಕತ್ವದ ಬಗ್ಗೆ ಕಲಿಯಲಿದ್ದೇನೆ. ಪ್ರಧಾನಿ ನರೇಂದ್ರ ಮೋದಿ ಅವರು ಯಾವಾಗಲೂ ನನಗೆ ಮಾರ್ಗದರ್ಶನ ನೀಡುವ ಮತ್ತು ಸಹಾಯ ಮಾಡುವ ಹಿರಿಯ ಸಹೋದರನ ಪ್ರತಿರೂಪ ಎಂದು ತಿಳಿಸಿದ್ದಾರೆ.

## ಗ್ಯಾರೆಂಟಿ ಯೋಜನೆ ಜಾರಿ

ಅದನ್ನೇ ಗ್ಯಾರಂಟಿ ರೂಪದಲ್ಲಿ ಮರಳಿ ಕೊಡುಲು ಮುಂದಾಗಿದೆ. ಆದರೆ, ಅದರಲ್ಲೂ ರಾಜ್ಯ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎಂದರು.

ಇವರಿಗೆ ಅಭಿವೃದ್ಧಿ ಮಾಡಲು ಮನಸ್ಸಿಲ್ಲ ಹೀಗಾಗಿ ಕಾಂಗ್ರೆಸ್ ವೈಫಲ್ಯ ಮುಚ್ಚಿಹಾಕಿಕೊಳ್ಳಲು ಉದಯಗಿರಿ ಗಲಾಟೆ, ಆತಂಕರಿಗೆ ಗಲಭೆ ಸೃಷ್ಟಿಸುವ ಪ್ರಯತ್ನ ಮಾಡುತ್ತಿದ್ದಾರೆ. ಹಿಜಾಬ್ ವಿಷಯವಾಗಿ ಹೈಕೋರ್ಟ್ ಆದೇಶಕೊಟ್ಟಿದೆ.. ಸುಪ್ರೀಂ ಕೋರ್ಟ್ನಲ್ಲಿ ಕೇಸ್ ಇದೆ. 1980 ರ ಶಿಕ್ಷಣ ನೀತಿಯ ಪ್ರಕಾರ ಸಮವಸ್ತ್ರ ಒಪ್ಪಿಕೊಳ್ಳಲಾಗಿದೆ. ಹಿಜಾಬ್, ಮತ್ತೊಂದು ತರುವ ಯೋಚನೆ ಮಾಡಲಾಗ್ತಿದೆ. ಕೆಲವು ಸಂಘಟನೆಗಳು ಹಿಜಾಬ್ ತರಲು ಮುಂದಾಗಿದ್ದು ಸರ್ಕಾರದ ಕುಮ್ಮಕ್ಕು ನೀಡ್ತಿದೆ ಎಂದು ಆರೋಪಿಸಿದರು. ವಿಶ್ವ ವಿದ್ಯಾಲಯ ಉಳಿಸಿ ಹೋರಾಟ ತೀವ್ರಗೊಂಡಿದೆ. ಹಳೆಯವಿಶ್ವವಿದ್ಯಾಲಯ ಬಿಳಿ ಆನೆಗಳಾಗಿ ಪರಿವರ್ತನೆಗೊಂಡಿವೆ. ನೂರಾರು ಕೋಟಿ ಖರ್ಚು ಮಾಡುತ್ತಾರೆ. ಆದರೆ ಅಲ್ಲಿ ಸರಿಯಾಗಿ ಪರೀಕ್ಷೆ ನಡೆಯುತ್ತಿಲ್ಲ. ಸಂಶೋಧನೆ ಆಗುತ್ತಿಲ್ಲ. ಯಾವುದೇ ಕೆಲಸ ಆಗುತ್ತಿಲ್ಲ. ಅವು ಭ್ರಷ್ಟಾಚಾರದ ಕೂಪಗಳಾಗಿವೆ. ಅದನ್ನ ಸರಿ ಪಡೆಸುವುದನ್ನು ಬಿಟ್ಟು ಹೊಸ ವಿಶ್ವವಿದ್ಯಾಲಯ ಬಂದ್ ಮಾಡುತ್ತಿದ್ದಾರೆ. ಅತೀ ಕಡಿಮೆ ವೆಚ್ಚದಲ್ಲಿ ಸ್ಥಳೀಯ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲಾಗುತ್ತಿತ್ತು. ವಿಶೇಷವಾಗಿ ಎಸ್ ಸಿ ಎಸ್ ಟಿ, ಒಬಿಸಿ ಹೆಣ್ಣುಮಕ್ಕಳು ದೊಡ್ಡಮಟ್ಟದಲ್ಲಿ ವಿವಿಯಲ್ಲಿ ನೋಂದಾಯಿತರು. ಇವರ ಭವಿಷ್ಯಕ್ಕೆ ದೊಡ್ಡಮಟ್ಟದ ಕೊಡಲಿ ಪೆಟ್ಟನ್ನ ಕೊಟ್ಟಿದ್ದಾರೆ. ಹೊಸ ವಿಶ್ವವಿದ್ಯಾಲಯ ಮುಚ್ಚಲು ಬಿಡುವುದಿಲ್ಲ. ಕಾನೂನು ಹೋರಾಟ ಮಾಡುತ್ತೇವೆ ಎಂದರು

## ಶೀಘ್ರವೇ ಗೃಹಲಕ್ಷ್ಮಿ ಹಣ ಬಿಡುಗಡೆ

ಮಹಿಳೆಯರ ಖಾತೆಗೆ ಜಮಾ ಮಾಡಲಾಗುವುದು ಎಂದಿದ್ದಾರೆ. ಹೊಸ ಮಾದರಿಯಲ್ಲಿ ಗೃಹ ಲಕ್ಷ್ಮಿಯ ಹಣ ಜಮಾ ಆಗುತ್ತಿದೆ. ಬೆಂಗಳೂರು ಸುತ್ತಮುತ್ತಲಿನ 5 ತಾಲ್ಲೂಕು ಪಂಚಾಯಿತಿಗಳಿಗೆ ಹಣ ನೀಡಿದ್ದೇವೆ. ಅಲ್ಲಿಂದ ಸಿಡಿಪಿಒ ಮೂಲಕ ಹಣ ಬಿಡುಗಡೆ ಮಾಡಲಾಯಿತು. ಸರಿಯಾಗಿ ಒಂದು ವಾರ 10 ದಿನದೊಳಗೆ ಗೃಹ ಲಕ್ಷ್ಮಿಯ ಹಣ ಬಿಡುಗಡೆ ಮಾಡಲಾಗುವುದು ಎಂದರು. ಹಣಕಾಸು ಇಲಾಖೆಯು 2 ತಿಂಗಳ ಠೇವಣಿಗಳ ಬಗ್ಗೆ ಮಾಹಿತಿಯನ್ನು ಹೊಂದಿದೆ. ನಾನು ವಿಧಾನಮಂಡಲದ ಬಜೆಟ್ ಅಧಿವೇಶನಕ್ಕೆ ಹೋಗುತ್ತಿದ್ದೇನೆ. ಅಲ್ಲಿ ಮೂರು ತಿಂಗಳ ಹಣ ಹಾಕುವ ಕೆಲಸ ಕೈಕೊಳ್ಳುವ ಕಾರ್ಯಕ್ಕೆ ಚಾಲನೆ ಸಿಗಲಿದೆ ಎಂದಿದ್ದಾರೆ.

## ಆರೋಪ: ದಂಪತಿ ಬಂಧನ

ಮೂಲದ ಜಾಕಿಯೊಬ್ಬನ ಪರಿಚಯವಾಗಿರುತ್ತದೆ. "ವಿದೇಶಗಳಲ್ಲಿ ಹಾರ್ಸ್ ಜಾಕಿ ಮತ್ತು ಇತರ ಕೆಲಸ ನಿರ್ವಹಿಸಲು ಆಸಕ್ತಿ ಹೊಂದಿರುವ ವ್ಯಕ್ತಿಗಳಿಗೆ ವೀಸಾ ಮಾಡಿಸಿಕೊಡುತ್ತೇನೆ. ಆಸಕ್ತರನ್ನು ಪರಿಚಯಿಸಿದರೆ ಒಂದು ವೀಸಾಗೆ 50 ಸಾವಿರ ರೂ. ಕಮಿಷನ್ ಹಣ ನೀಡುವುದಾಗಿ" ತಿಳಿಸಿದ್ದ ವಿದೇಶಿ ಜಾಕಿಯ ಆಫರ್ ಒಪ್ಪಿದ್ದ ಆರೋಪಿ ದಂಪತಿ ವಿದೇಶಗಳಲ್ಲಿ ಹಾರ್ಸ್ ಜಾಕಿಯಾಗಲು ಬಯಸುವವರಿಗೆ ವೀಸಾ ಮಾಡಿಸಿಕೊಡುವುದಾಗಿ ಫೇಸ್‌ಬುಕ್‌ನಲ್ಲಿ ಜಾಹೀರಾತು ನೀಡಿತ್ತು. ಅದರಂತೆ ಆರೋಪಿಗಳನ್ನು ಸಂಪರ್ಕಿಸಿದ್ದ ವ್ಯಕ್ತಿಯೊಬ್ಬರಿಗೆ ಆರಂಭದಲ್ಲಿ ಎರಡು ವೀಸಾಗಳನ್ನು ಮಾಡಿಸಿಕೊಟ್ಟು ನಂಬಿಕೆ ಗಳಿಸಿದ್ದರು. ನಂತರ ಒಟ್ಟು 51 ಜನರಿಗೆ ವೀಸಾ ಮಾಡಿಸಿಕೊಡುವುದಾಗಿ ಒಟ್ಟು 2.64 ಕೋಟಿ ರೂ. ಹಣವನ್ನು ಪಡೆದುಕೊಂಡಿದ್ದರು. ಆದರೆ. ವೀಸಾ ಮಾಡಿಸಿಕೊಡದೇ ಆ ಹಣದಲ್ಲಿ ಶ್ರೀಲಂಕಾ, ದುಬೈ, ಗೋವಾ, ಊಟಿ ಇನ್ನಿತರ ಕಡೆಗಳಲ್ಲಿ ಸುತ್ತಾಡಿ ವಿಲಾಸಿ ಜೀವನ ನಡೆಸಿದ್ದರು. ವೀಸಾ ಕುರಿತು ಕೇಳಿದಾಗ ನಕಲಿ ವೀಸಾ ದಾಖಲೆಗಳನ್ನು ನೀಡಿದ್ದರು.

ದಾಖಲೆಗಳು ನಕಲಿ ಎಂದು ತಿಳಿದಾಗ ವೀಸಾ ಮಾಡಿಸಿಕೊಡಲು ಮಧ್ಯಸ್ಥಿಕೆ ವಹಿಸಿದ್ದ ವ್ಯಕ್ತಿ ಜನವರಿ 24ರಂದು ಆಗ್ನೇಯ ವಿಭಾಗದ ಸಿಇಎನ್ ಠಾಣೆಗೆ ದೂರು ನೀಡಿದ್ದರು.ದೂರಿನ ಮೇರೆಗೆ ಆರೋಪಿಗಳನ್ನ ಬಂಧಿಸಿರುವ ಪೊಲೀಸರು; ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು ತಿಲಕ್ ನಗರದಲ್ಲಿ ವಾಸವಿದ್ದ ಆರೋಪಿಗಳನ್ನು ಬಂಧಿಸಿದ್ದಾರೆ. ಆರೋಪಿಗಳಿಂದ ಒಂದು ಫಿಗಿಗಿ ಕಾರು, ಒಂದು ಊರಟಿಜಚಿ ಉಣಥಿ ಕಾರು, ಒಂದು ಎಂಥಂ ಬೈಕ್, ಒಂದು ಜಚಿಟಚ್ಞಿಚಿ ಈಚಿ ಬೈಕ್, 24 ಗ್ರಾಂ ಚಿನ್ನಾಭರಣ ಹಾಗೂ 66 ಲಕ್ಷ ರೂ. ನಗದನ್ನು ವಶಪಡಿಸಿಕೊಂಡಿದ್ದಾರೆ. ಪ್ರಕರಣದಲ್ಲಿ ತಲೆಮರೆಸಿಕೊಂಡಿರುವ ಮತ್ತೋರ್ವ ಆರೋಪಿಗಾಗಿ ಹುಡುಕಾಟ ಮುಂದುವರೆಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ತಮಿಳು ನಮ್ಮ ಹಕ್ಕು

"ನಾವು ನಮಗೆ ಬರಬೇಕಾದ ನಮ್ಮ ಪಾಲಿನ 2150 ಕೋಟಿ ರೂ. ನಿಧಿಯನ್ನು ಬಿಡುಗಡೆ ಮಾಡುವಂತೆ ಕೇಳಿಕೊಳ್ಳುತ್ತಿದ್ದೇವೆ. ಆದರೆ ನಾವು ಎನ್‌ಇಪಿ ಹಾಗೂ ತ್ರಿಭಾಷಾ ಸೂತ್ರವನ್ನು ಒಪ್ಪಿಕೊಳ್ಳಬೇಕೆಂದು ಅವರು ಹೇಳುತ್ತಿದ್ದಾರೆ. ತಮಿಳುನಾಡು ಯಾವತ್ತಿಗೂ ತ್ರಿಭಾಷಾ ಸೂತ್ರವನ್ನು ಒಪ್ಪಿಕೊಂಡಿಲ್ಲ ಎಂದಾಗ ಇದರಲ್ಲಿ ರಾಜಕೀಯ ಮಾಡುವಂಥ ವಿಚಾರ ಏನಿದೆ" ಎಂದು ಅವರು ಪ್ರಶ್ನಿಸಿದ್ದಾರೆ.

"ತಮಿಳು ನಮ್ಮ ಹಕ್ಕು. ಯಾರು ರಾಜಕೀಯ ಮಾಡುತ್ತಿದ್ದಾರೆ ಎಂಬುದನ್ನು ಜನತೆ ಅರ್ಥಮಾಡಿಕೊಳ್ಳಬೇಕಿದೆ" ಎಂದು ಡಿಎಂಕೆ ನಾಯಕ ಉದಯನಿಧಿ ಸ್ಟಾಲಿನ್ ಸುದ್ದಿಗಾರರಿಗೆ ತಿಳಿಸಿದರು. ಇದಕ್ಕೂ ಮುನ್ನ, ಎನ್‌ಇಪಿ ಅನುಷ್ಠಾನದ ಬಗ್ಗೆ ಬಗ್ಗೆ ಕೇಂದ್ರ ಸಚಿವ ಪ್ರಧಾನ್ ಸಿಎಂ ಸ್ಟಾಲಿನ್ ವಿರುದ್ಧ ವಾಗ್ದಾಳಿ ನಡೆಸಿದ್ದರು. ರಾಜಕೀಯ ಲಾಭಕ್ಕಾಗಿ ಪ್ರಗತಿಪರ ಸುಧಾರಣೆಗಳನ್ನು ಅಪಾಯಗಳೆಂದು ಸ್ಟಾಲಿನ್ ಬಿಂಬಿಸುತ್ತಿದ್ದಾರೆ ಎಂದು ಅವರು ಆರೋಪಿಸಿದ್ದರು.

ಸ್ಟಾಲಿನ್ ಅವರಿಗೆ ಬರೆದ ಪತ್ರದಲ್ಲಿ, "ತಮಿಳುನಾಡು ಸಿಎಂ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಮೀರಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಿಂದ ವಿದ್ಯಾರ್ಥಿಗಳಿಗೆ ಸಿಗುವಂಥ ಪ್ರಯೋಜನಗಳ ಬಗ್ಗೆ ಯೋಚಿಸಬೇಕು" ಎಂದು ಪ್ರಧಾನ್ ಹೇಳಿದ್ದಾರೆ. ಸ್ಟಾಲಿನ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಗುರುವಾರ ಬರೆದ ಪತ್ರಕ್ಕೆ ಶಿಕ್ಷಣ ಸಚಿವರು ಪ್ರತಿಕ್ರಿಯಿಸಿದ್ದಾರೆ. ಕೇಂದ್ರ ಪ್ರಾಯೋಜಿತ ಎರಡು ಉಪಕ್ರಮಗಳಾದ ಸಮಗ್ರ ಶಿಕ್ಷಣ ಅಭಿಯಾನ ಮತ್ತು ಪಿಎಂ ಶ್ರೀ ಶಾಲೆಗಳನ್ನು ರಾಷ್ಟ್ರೀಯ ಶಿಕ್ಷಣ ನೀತಿಯೊಂದಿಗೆ ಸಂಪರ್ಕಿಸುವುದು ಮೂಲಭೂತವಾಗಿ ಸ್ವೀಕಾರಾರ್ಹವಲ್ಲ ಎಂದು ಸ್ಟಾಲಿನ್ ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ. ತಮಿಳುನಾಡು ಸಿಎಂಗೆ ಬರೆದ ಪತ್ರದಲ್ಲಿ ಸಚಿವ ಧರ್ಮೇಂದ್ರ ಪ್ರಧಾನ್, "ಪ್ರಧಾನಿಗೆ ಬರೆಯಲಾದ ಪತ್ರವು ಮೋದಿ ಸರ್ಕಾರ ಉತ್ತೇಜಿಸಿದ ಸಹಕಾರಿ ಒಕ್ಕೂಟ ವ್ಯವಸ್ಥೆಯ ಸ್ಫೂರ್ತಿಯನ್ನು ಸಂಪೂರ್ಣವಾಗಿ ನಿರಾಕರಿಸುವಂತಿದೆ. ಹೀಗಾಗಿ ರಾಜ್ಯವು ಎನ್‌ಇಪಿ 2020 ಅನ್ನು ಕಾಮಾಲೆ ಕಣ್ಣಿನಿಂದ ನೋಡುವುದು ಮತ್ತು ಪ್ರಗತಿಪರ ಶೈಕ್ಷಣಿಕ ಸುಧಾರಣೆಗಳನ್ನು ಅಪಾಯಗಳೆಂದು ಬಿಂಬಿಸುವುದು ಸೂಕ್ತವಲ್ಲ" ಎಂದು ಹೇಳಿದ್ದಾರೆ.

## ವಿಶೇಷ ಬಸ್ ವ್ಯವಸ್ಥೆ

ಪ್ರಯುಕ್ತ ಶಿವರಾತ್ರಿ ಜಾಗರಣೆ, ಶಿವಸ್ತುತಿ ಪೂಜಾ ಕೈಂಕರ್ಯಗಳಲ್ಲಿ ಭಾಗವಹಿಸಲು ಪ್ರಮುಖ ಧಾರ್ಮಿಕ ಕ್ಷೇತ್ರಗಳಾದ ಗೋಕರ್ಣ ಹಾಗೂ ಮುರುಡೇಶ್ವರಕ್ಕೆ ಹುಬ್ಬಳ್ಳಿ ಧಾರವಾಡ ಅವಳಿ ನಗರ ಸುತ್ತಮುತ್ತಲಿನ ಊರುಗಳಿಂದ ಅಪಾರ ಸಂಖ್ಯೆಯಲ್ಲಿ ಭಕ್ತರು ತೆರಳುತ್ತಾರೆ.

ಮಹಿಳೆಯರಿಗೆ ಉಚಿತ ಪ್ರಯಾಣದ ಶಕ್ತಿ ಯೋಜನೆ ಜಾರಿಯಲ್ಲಿರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಸಹ ಭಾಗವಹಿಸಬಹುದು ಎಂದು ನಿರೀಕ್ಷಿಸಲಾಗಿದೆ. ಆದ್ದರಿಂದ ಈ ಅವಧಿಯಲ್ಲಿ ವಿಶೇಷ ಬಸ್ ವ್ಯವಸ್ಥೆ ಕಲ್ಪಿಸುವಂತೆ ಸಾರ್ವಜನಿಕರಿಂದ ಮನವಿ ಬಂದಿರುತ್ತದೆ.

ಪ್ರಯಾಣಿಕರ ಬೇಡಿಕೆಯಂತೆ ಉಭಯ ಧಾರ್ಮಿಕ ಕ್ಷೇತ್ರಗಳಿಗೆ ತೆರಳುವ ಭಕ್ತರ ಅನುಕೂಲಕ್ಕಾಗಿ ಫೆ.25 ರಂದು ಮಂಗಳವಾರ ರಾತ್ರಿ ಮತ್ತು 26 ರಂದು ಬುಧವಾರ ಬೆಳಗ್ಗೆ ಹುಬ್ಬಳ್ಳಿಯಿಂದ ಗೋಕರ್ಣ ಹಾಗೂ ಮುರುಡೇಶ್ವರಕ್ಕೆ ನೇರ ವಿಶೇಷ ಬಸ್ ವ್ಯವಸ್ಥೆ ಮಾಡಲಾಗಿದೆ. ವಿಶೇಷ ಬಸ್‌ಗಳು ಗೋಕುಲ ರಸ್ತೆ ಬಸ್ ನಿಲ್ದಾಣದಿಂದ ಹೊರಡುತ್ತವೆ. ಹೆಚ್ಚಿನ ಮಾಹಿತಿಗಾಗಿ ಗೋಕುಲ ರಸ್ತೆ ಬಸ್ ನಿಲ್ದಾಣಾಧಿಕಾರಿ (7760991682 / 9060355688) ಸಂಪರ್ಕಿಸಬಹುದಾಗಿದೆ ಎಂದು ವಿಭಾಗೀಯ ನಿಯಂತ್ರಣಾಧಿಕಾರಿ ಮಾಹಿತಿ ನೀಡಿದ್ದಾರೆ.

## ಬಿಜೆಪಿಗೆ ತಿರುಗೇಟು

ಟ್ಯಾಪಿಂಗ್ ಮಾಡುತ್ತಿದ್ದೀವಿ. ಈ ಬಗ್ಗೆ ಸಿಎಂ ಸೂಚನೆ ಕೊಟ್ಟಿದ್ದಾರೆ ಎಂದರು.

ಬೀಳುವ ಹಂತದಲ್ಲಿರುವ ಪಾರಂಪರಿಕ ಕಟ್ಟಡ ಗಳನ್ನೂ ಶೀಘ್ರವೇ ಒಡೆದು ಹಾಕಿ ಹೊಸ ಕಟ್ಟಡ ಕಟ್ಟುತ್ತೇವೆ. ಈಗ ಯಾರು ವ್ಯಾಪಾರ ಮಾಡಿದ್ದಾರೆ ಅವರಿಗೆ ಮತ್ತೆ ಮಳಿಗೆ ಕೊಡುತ್ತೇವೆ. ಯಾರು ಭಯ ಪಡುವ ಅಗತ್ಯ ಇಲ್ಲ ಎಂದು ತಿಳಿಸಿದರು. ಮುಡಾ ಹಗರಣಕ್ಕೆ ಸಾಕ್ಷಿಯಾಗಿದ್ದ ಪ್ರಮುಖ ಕಡತಗಳನ್ನು ಸಚಿವ ಭೈರತಿ ಸುರೇಶ್ ಕೊಂಡೊಯ್ದಿದ್ದಾರೆಂದು ಶಾಸಕ ಶ್ರೀವತ್ಸ ಆರೋಪ ವಿಚಾರಕ್ಕೆ ತಿರುಗೇಟು ಕೊಟ್ಟ ಭೈರತಿ ಸುರೇಶ್, ನಾನು ಮುಡಾದಿಂದ ಯಾವುದೇ ಫೈಲ್ ಗಳನ್ನು ಕೊಂಡೊಯ್ದಿಲ್ಲ. ಫೈಲ್ ಗಳನ್ನು ಕೊಂಡೊಯ್ಯಲು ಅವೇನು ಕಡ್ಲೆಪುರಿಯಲ್ಲ. ಸಿಸಿ ಕ್ಯಾಮರಾ ಕಣ್ತಪ್ಪಿಸಿ ಏನನ್ನೂ ಕೊಂಡೊಯ್ಯಲು ಸಾಧ್ಯವಿಲ್ಲ. ಮುಡಾ ಪ್ರಕರಣದಲ್ಲಿ ನಾನು ಯಾವುದೇ ತಪ್ಪು ಮಾಡಿಲ್ಲ ಎಂದು ಈ ಹಿಂದೆ ಕೂಡ ಹೇಳಿದ್ದೆ. ಈಗಲೂ ನಾನು ಯಾವುದೇ ತಪ್ಪು ಮಾಡಿಲ್ಲ ಎಂದು ಚಾಮುಂಡಿ ಬೆಟ್ಟದಲ್ಲೇ ಹೇಳುತ್ತಿದ್ದೇನೆ ಎಂದರು.

## ಬಿಜೆಪಿ ವಿರುದ್ಧ ಪರಂ ವಾಗ್ದಾಳಿ

ಅಭಿವೃದ್ಧಿಗೆ ಹಣ ಬಿಡುಗಡೆ ಮಾಡುತ್ತಿದ್ದೇವೆ ಎಂದು ಅವರು, ಬಿಜೆಪಿ ಸರ್ಕಾರದ ಅವಧಿಯಲ್ಲಿ ಲಕ್ಷಾಂತರ ಬಾಕಿ ಉಳಿಸಿಕೊಂಡಿದ್ದ ಬಾಕಿ ಬಿಲ್‌ಗಳನ್ನು ಮಂಜೂರು ಮಾಡಿದ್ದೇವೆ. ಹಣಕಾಸು ಜವಾಬ್ದಾರಿ ನಿರ್ವಹಿಸುವುದು ಅಷ್ಟೊಂದು ಸುಲಭವಲ್ಲ. ಸಿದ್ದರಾಮಯ್ಯ ಅವರು ಸಮರ್ಥವಾಗಿ ನಿಭಾಯಿಸುತ್ತಿದ್ದಾರೆ ಎಂದು ಹೇಳಿದರು.

ಗೃಹಲಕ್ಷ್ಮಿ ಹಣ ಬಹುತೇಕ ಭಾಗಗಳಲ್ಲಿ ವಿಳಂಬವಾಗಿದೆ. ಈ ಸಮಸ್ಯೆಯನ್ನು ನಾವು ಶೀಘ್ರ ಸರಿಪಡಿಸಿ ಹಣ ಬಿಡುಗಡೆ ಮಾಡುತ್ತೇವೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

## ಬೆಟ್ಟಕ್ಕೆ ಯತ್ನಾಳ್ ಭೇಟಿ

ಬೆಟ್ಟಕ್ಕೆ ಭೇಟಿ ನೀಡಿ ನೋಟಿಸ್ ಗೆ ಪ್ರತಿಯಾಗಿ ಉತ್ತರ ಬರೆದಿರುವ ಫೈಲ್ ಅನ್ನು ಇಟ್ಟು ಪೂಜೆ ಸಲ್ಲಿಸಿದ್ದಾರೆ.

ನೋಟಿಸ್ ನಲ್ಲಿ ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ದೂರಿರುವ ಕುರಿತು ಮಾಹಿತಿ ಇದೆ ಎನ್ನಲಾಗಿದೆ. ಚಾಮುಂಡಿ ತಾಯಿ ಬಳಿ ಶಾಸಕ ಯತ್ನಾಳ್ ಸುಧೀರ್ಘ ಪ್ರಾರ್ಥನೆ ಸಲ್ಲಿಸಿದ್ದಾರೆ. ಆರಂಭದಿಂದಲೂ ಬಿಜೆಪಿ ಬಂಡಾಯ ನಾಯಕರು ಚಾಮುಂಡಿ ತಾಯಿ ಮೊರೆ ಹೋಗಿದ್ದು, ಚಾಮುಂಡಿ ತಾಯಿಗೆ ಪೂಜೆ ಸಲ್ಲಿಸಿ ಬಂಡಾಯದ ಕಹಳೆ ಊದಿದ್ದರು.ಬಿ.ವೈ.ವಿಜಯೇಂದ್ರ ವಿರುದ್ಧ ಬಂಡಾಯದ ಬಾವುಟ ಹಾರಿಸಿದ್ದ ಶಾಸಕ ಯತ್ನಾಳ್, ಬಂಡಾಯದ ಬಳಿಕ ಮೂರನೇ ಬಾರಿಗೆ ಚಾಮುಂಡಿ ತಾಯಿ ದರ್ಶನ ಪಡೆದಿದ್ದಾರೆ.

# ಸರ್ಕಾರದ ನಿರ್ಧಾರದ ಸಾಧಕ–ಭಾದಕಗಳ ವಿಚಾರ ಸಂಕಿರಣ



**ಆನೇಕಲ್:** ಆನೇಕಲ್‌ತಾಲ್ಲೂಕಿನ 28 ಗ್ರಾಮ ಪಂಚಾಯಿತಿಗಳ ಪೈಕಿ 20 ಗ್ರಾಮ ಪಂಚಾಯಿತಿಗಳನ್ನು ಮೇಲ್ದರ್ಜೆಗೆ ಏರಿಸುವುದನ್ನು ಸರ್ಕಾರ ಕೈ ಬಿಡಬೇಕೆಂದು ಚಿನ್ಮಯ ಸೇವಾ ಸಂಸ್ಥೆಯು ಒತ್ತಾಯಿಸಿದೆ .

ಸಂಸ್ಥೆಯ ವತಿಯಿಂದ ಆನೇಕಲ್ ಪಟ್ಟಣದ ರಾಘವೇಂದ್ರಭವನದಲ್ಲಿ ನಡೆದ ಆನೇಕಲ್ ತಾಲ್ಲೂಕಿನ ಗ್ರಾಮ ಪಂಚಾಯಿತಿಗಳನ್ನು ಮೇಲ್ದರ್ಜೆಗೆ ಏರಿಸುವ ಸರ್ಕಾರದ ನಿರ್ಧಾರದ ಸಾಧಕ–ಭಾದಕಗಳ ಕುರಿತು ಒಂದು ದಿನದ ವಿಚಾರ ಸಂಕಿರಣದಲ್ಲಿ ಪತ್ರಕರ್ತ ಚಂದಾಪುರ ಸಿ.ಆರ್.ವಿಜಯಕುಮಾರ್ ಮಾತನಾಡಿ, ಆನೇಕಲ್ ವಿಧಾನಸಭಾ ಕ್ಷೇತ್ರದ ಪ್ರತಿ ಗ್ರಾಮ ಪಂಚಾಯಿತಿಯ ಜನಸಂಖ್ಯೆಯು 2011ರ ಜನಗಣತಿ ಪ್ರಕಾರ ಹತ್ತು ಸಾವಿರದಿಂದ ಹದಿನೈದು ಸಾವಿರಕ್ಕಿಂತ ಕಡಿಮೆ ಇದ್ದು, ಬಹುತೇಕ ಗ್ರಾಮಗಳು ಇನ್ನೂ ಗ್ರಾಮೀಣ ವಾತಾವರಣದಲ್ಲಿ, ಗ್ರಾಮಾಂತರ ವ್ಯಾಪ್ತಿಯಲ್ಲಿ ಇದ್ದು 2–3 ಗ್ರಾ.ಮ.ಪಂಚಾಯಿತಿಗಳ 10–15 ಗ್ರಾಮಗಳನ್ನು ಒಟ್ಟಾಗಿಸೇರಿಸಿ ಒಂದೊಂದು ನಗರಸಭೆ ಮತ್ತು ಪುರಸಭೆಗಳನ್ನಾಗಿ ಮಾಡುವುದು ಅವೈಜ್ಞಾನಿಕ ಕ್ರಮಅದನ್ನು ಪೌರಕಾನೂನಿನ ಕಾಯ್ದೆಯಡಿ ವ್ಯಾಪ್ತಿಗನುಗುಣವಾಗಿ ಮಾಡಬೇಕು ಒತ್ತಾಯಿಸಿದರು.

ಆನೇಕಲ್‌ವಿಧಾನಸಭಾ ಕ್ಷೇತ್ರದ (1)ದೊಮ್ಮಸಂದ್ರ–ಯಮರೆ– ಸರ್ಜಾಪುರ (ಮೂರು)ಗ್ರಾಮ ಪಂಚಾಯಿತಿಗಳು(2) ಅತ್ತಿಬೆಲೆ ಪುರಸಭೆ–ನೆರಳೂರು–ಬಿದರಗುಪ್ಪೆ (ಎರಡು) ಗ್ರಾಮ ಪಂಚಾಯಿತಿಗಳು ಹಾಗು (3)ಆನೇಕಲ್‌ಪುರಸಭೆ– ವಣಕನಹಳ್ಳಿ–ಸಮಂದೂರು(ಎರಡು)ಗ್ರಾಮ ಪಂಚಾಯಿತಿಗಳನ್ನು ಸೇರಿಸಿ ಒಟ್ಟು 03 ನಗರಸಭೆಗಳನ್ನಾಗಿಯೂ ಹಾಗೂ (1)ಕರ್ಪೂರು–ಬ್ಯಾಗಡದೇನಹಳ್ಳಿ–ಗ್ರಾಮ ಪಂಚಾಯಿತಿ (2)ಮುಗಳೂರು–ನೆರಿಗಾ ಗ್ರಾಮ ಪಂಚಾಯಿತಿ(3) ಬಳ್ಳೂರು–ವಾಯುಸಂದ್ರ–ಮರಸೂರು(ಮೂರು) ಗ್ರಾಮ ಪಂಚಾಯಿತಿ(4)ಹಂದೇನಹಳ್ಳಿ–ಬಿಲ್ಲಾಪುರ–ಮುತ್ತಾನಲ್ಲೂರು (ಮೂರು)ಗ್ರಾಮ ಪಂಚಾಯಿತಿ (5)ಇಂಡ್ಲವಾಡಿ–ಹಾರಗದ್ದೆ (ಎರಡು) ಗ್ರಾಮ ಪಂಚಾಯಿತಿಗಳನ್ನು ಸೇರಿಸಿ ಒಟ್ಟು 05 ಪುರಸಭೆಗಳನ್ನಾಗಿ ವಿಂಗಡಿಸಲು, ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ಮತ್ತು ನಗರ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳ ಮೂಲಕ ಗ್ರಾ.ಪಂ ಗಳಿಗೆ ವರದಿ ಕೇಳಿರುವುದು ಗಮನಕ್ಕೆ ಬಂದಿದ್ದು ಅದನ್ನು ಹಿಂಪಡೆಯಬೇಕುಎಂದರು.

ಗ್ರಾಪಂ.ಗಳ ಅಸ್ತಿತ್ವವೇ ಇರುವುದಿಲ್ಲ: ಈಗಾಗಲೇ ಗ್ರಾಮ ಪಂಚಾಯಿತಿಗಳಾಗಿದ್ದ ಚಂದಾಪುರ, ಬೊಮ್ಮಸಂದ್ರ, ಅತ್ತಿಬೆಲೆ, ಜಿಗಣಿ ಪುರಸಭೆಗಳನ್ನಾಗಿ ಮತ್ತು ಹೆಬ್ಬಗೋಡಿ ಗ್ರಾ ಪಂಯನ್ನು ನಗರಸಭೆಯನ್ನಾಗಿ 2015 ರಲ್ಲಿ ಮೇಲ್ದರ್ಜೆಗೆ ಏರಿಸಲಾಗಿತ್ತು. ಇನ್ನೂಳಿದಎಲ್ಲಾ 20ಗ್ರಾಮ ಪಂಚಾಯಿತಿಗಳನ್ನುಮೇಲ್ದರ್ಜೆಗೆ ಏರಿಸುವುದರಿಂದ, ಕ್ಷೇತ್ರದ 20 ಗ್ರಾಪಂಗಳ ಪೈಕಿ 09 ಗ್ರಾಮಪಂಚಾಯಿತಿ, 02 ಪುರಸಭೆಗಳನ್ನು ಸೇರಿಸಿ03 ನಗರಸಭೆಗಳನ್ನಾಗಿ, 11 ಗ್ರಾಪಂಗಳನ್ನು ಸೇರಿಸಿ 05 ಪುರಸಭೆಗಳನ್ನಾಗಿ ವಿಂಗಡಿಸುವುದರಿಂದಆನೇಕಲ್ ವಿಧಾನಸಭಾ ಕ್ಷೇತ್ರದಲ್ಲಿ ಗ್ರಾಪಂಗಳ ಅಸ್ತಿತ್ವವೇ ಇಲ್ಲದಂತಾಗುತ್ತದೆ.

ಅಲ್ಲದೇ ಈಗಿರುವ 497 ಗ್ರಾ.ಪಂ, 20ತಾ.ಪಂ, 09 ಜಿ.ಪಂ ಸದಸ್ಯರ ಕ್ಷೇತ್ರಗಳು ರದ್ದಾಗಲಿವೆ. ಮೀಸಲಾತಿಯಲ್ಲಿ ಗೆದ್ದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದವರ್ಗ, ಮಹಿಳೆಯರಿಗೆ ಭಾರಿ ಅನ್ಯಾಯವಾಗಲಿದೆ ಎಂದು ತಿಳಿಸಿದರು.

ಚಿನ್ಮಯ ಸೇವಾ ಸಂಸ್ಥೆಯ ಅಧ್ಯಕ್ಷ ಡಾ.ಚಿನ್ನಪ್ಪ ವೈ ಚಿಕ್ಕಹಾಗಡೆ ಮಾತನಾಡಿ ಕರ್ನಾಟಕ ಸರ್ಕಾರವು 74ನೇ ಸಂವಿಧಾನಾತ್ಮಕ ತಿದ್ದುಪಡಿಯ ಅಧಿನಿಯಮದ ಪ್ರಕಾರ ಸ್ಥಳೀಯ ಸಂಸ್ಥೆಗಳನ್ನು ಜನಸಂಖ್ಯೆ ಮತ್ತು ಇತರಮಾನದಂಡಗಳ ಮೇಲೆ ಪುರಸಭೆಗೆ20,000 ದಿಂದ50,000 ಜನಸಂಖ್ಯೆ, ನಗರಸಭೆಗೆ50,000 ದಿಂದ05 ಲಕ್ಷ ಜನಸಂಖ್ಯೆ ಇರಬೇಕು ಅಲ್ಲದೇಒಂದುಚದರಕಿ.ಮೀ ಪ್ರದೇಶದಲ್ಲಿಕನಿಷ್ಟ 1,000ದಿಂದ1500 ಜನರುವಾಸವಾಗಿರಬೇಕು, ಶೇ.50 ರಷ್ಟುಕೃಷಿಯೇತರಚಟುವಟಿಕೆಗಳುಮತ್ತುಶೇ.50 ರಷ್ಟು ಉದ್ಯೋಗದಾತರುಇರಬೇಕುಎಂದುಕಾಯ್ದೆಯಲ್ಲಿತಿಳಿಸಿದ್ದರೂಸಹಕಾಯ್ದೆಯನ್ನುಉಲ್ಲಂಘಿಸಿಮಾಡುತ್ತಿರುವುದನ್ನು ಖಂಡಿಸಿ ಮೇಲ್ದರ್ಜೆಗೆ ಏರಿಸುವ ರಾಜ್ಯಸರ್ಕಾರತನ್ನ ನಿರ್ಧಾರವನ್ನು ಹಿಂಪಡೆಯಬೇಕೆಂದು ಒತ್ತಾಯಿಸಿದರು.

ಈಗಪ್ರಸ್ತಾಪಿತ03ನಗರಸಭೆಮತ್ತು05ಪುರಸಭೆಗಳರಚನೆಯೂ10 ರಿಂದ12 ಕಿ.ಮಿವ್ಯಾಪ್ತಿಯನ್ನುಹೊಂದಿರುತ್ತವೆ, 2–3 ಗ್ರಾಮಗಳನ್ನುಸೇರಿಸಿಪುರಸಭೆ, ನಗರಸಭೆಯವಾರ್ಡುರಚನೆಮಾಡಬೇಕಾಗುತ್ತೆಇದರಿಂದಆಡಳಿತನಡೆಸಲುಜನಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆಹಾಗುಜನಸಾವಾನ್ಯರಿಗೆಬಹಳತೊಂದರೆಯಾಗಲಿದೆಎಂದುಡಾ.ಚಿನ್ನಪ್ಪ ವೈ ಚಿಕ್ಕಹಾಗಡೆ ತಿಳಿಸಿದರು.

ಪ್ರಭಾವಿಗಳಿಗೆ ಬಲಾಡ್ಯರಿಗೆಅಧಿಕಾರ: ಗ್ರಾಪಂಗಳಲ್ಲಿಇದುವರೆವಿಗೂಪಕ್ಷಗಳಚಿಹ್ನೆಇಲ್ಲದ 'ಪಕ್ಷಾತ್ತೀತವಾಗಿಚುನಾವಣೆಗಳುನಡೆಯುತ್ತಿತ್ತು, ಈಗ ನಗರಸಭೆಮತ್ತುಪುರಸಭೆಗಳುಅಸ್ತಿತ್ವಕ್ಕೆಬಂದರೆ 'ಪಕ್ಷಗಳಚಿಹ್ನೆಮೇಲೆಚುನಾವಣೆಗಳುನಡೆಯುವುದರಿಂದರಾಜಕೀಯಶಕ್ತಿಗಳುತಲೆಎತ್ತಲಿವೆ, ಇದರಿಂದಸಾಕಷ್ಟುಮಂದಿಬಡವರು, ಪರಿಶಿಷ್ಟ ಜಾತಿ , ಪರಿಶಿಷ್ಟ ವರ್ಗ, ಹಿಂದುಳಿದ ಜಾತಿಮತ್ತುಮಹಿಳೆಯರುಚುನಾಯಿತಸದಸ್ಯರಾಗುವುದುತಪ್ಪಿಹೋಗಿಹಣವಂತರಿಗೆ,ಪ್ರಭಾವಿಗಳಿಗೆ,ಬಲಾಡ್ಯರಿಗೆಅಧಿಕಾರಸಿಕ್ಕಂತಾಗುತ್ತದೆ. ಕಾರ್ಯಕ್ರಮದಲ್ಲಿ ಹಂದೇನಹಳ್ಳಿ ಗ್ರಾ ಪಂ ಅಧ್ಯಕ್ಷ ರಾಮಪ್ಪ,ಮರಸೂರು ಗ್ರಾ ಪಂ ಅಧ್ಯಕ್ಷ ರಮೇಶ್‌ರೆಡ್ಡಿ, ವಕೀಲಆನೇಕಲ್ ಪುರುಷೋತ್ತಮ್, ವೇದಿಕೆ ರಾಜ್ಯ ಪ್ರಧಾನಕಾರ್ಯದರ್ಶಿ ಟಿ.ಎಸ್. ಕುಮಾರಾಚಾರಿ, ಗ್ರಾ ಪಂ.ಸದಸ್ಯ ಬಳಗಾರನಹಳ್ಳಿ ಸತೀಶ್ ಕುಮಾರ್, ರಾಜ್ಯಖಜಾಂಚಿ ಚಂದಾಪುರ ಕೆ.ಮಹೇಶ್‌ಉಪಸ್ಥಿತರಿದ್ದರು.

# ಬಿ ಖಾತಾ ಅಭಿಯಾನಕ್ಕೆ ಚಾಲನೆ



**ಚಿಕ್ಕಬಳ್ಳಾಪುರ:** ಅನಧಿಕೃತ ನಿವೇಶನ ಕಟ್ಟಡಕ್ಕೆ ಬಿ ಖಾತಾ ಮಾಡಿಸಿಕೊಳ್ಳಲು ಅಭಿಯಾನ ಇಂದಿನಿಂದ ಶುರುವಾಗಿದ್ದು 7ನೇ ವಾರ್ಡಿನಲ್ಲಿ ಶಾಸಕ ಪ್ರದೀಪ್ ಈಶ್ವರ್ ಅಭಿಯಾನಕ್ಕೆ ಚಾಲನೆ ನೀಡಿದರು.

ಅದಾದನಂತರ ವಾರ್ಡಿನ ಮುಖಂಡರಾದ ಮೊಲ್ಡ್ ವೆಂಕಟೇಶ್,ಅಲ್ಲು ಅನೀಲ್ ಗಂಟೆಗಳ ಕಾಲ ಅಲ್ಲೆ ಇದ್ದು ಬಿ ಖಾತಾ ಮಾಡಿಸಿಕೊಳ್ಳಲು ಬರುವ ಅರ್ಜಿದಾರರಿಗೆ ಸಂಪೂರ್ಣ ಮಾಹಿತಿ ನೀಡಿ ಸಹಕರಿಸಿದರು. ಈ ವೇಳೆ ಮಾತನಾಡಿದ ಮೊಲ್ಡ್ ವೆಂಕಟೇಶ್ ಈ ವಾರ್ಡ್ ತಿಪ್ಪೇನಹಳ್ಳಿ ಗ್ರಾಮ ಪಂಚಾಯಿತಿಯಿಂದ ಬೇರೆಯಾಗಿ 25 ವರ್ಷಕ್ಕಿಂತ ಹೆಚ್ಚು ಕಾಲ ಆಗಿದೆ ನಿವೇಶನ ಕಟ್ಟಡಗಳ ಖಾತೆಗಳು ಇಲ್ಲದಿರುವುದರಿಂದ ಅವರ ಜಾಗಕ್ಕೆ ಯಾವುದೇ ಬೆಲೆ ಇರಲಿಲ್ಲ ಈಗ ಸರ್ಕಾರ ಖಾತಾ ಆಂದೋಲನಕ್ಕೆ ಮುಂದಾಗಿದ್ದು ಜನರಿಗೆ ಬಹಳಷ್ಟು ಉಪಯೋಗವಾಗಲಿದೆ. ಈ ಅಭಿಯಾನದ ಬಗ್ಗೆ ವಾರ್ಡಿನ ಪ್ರತಿ ಮನೆಗೆ ತೆರಳಿ ಜಾಗೃತಿ ಮೂಡಿಸಿದ್ದೇವೆ ಹಾಗೂ ಈ ವಾರ್ಡಿನಲ್ಲಿ 180 ಕ್ಕಿಂತ ಹೆಚ್ಚು ಅರ್ಜಿಗಳು ಬಂದಿವೆ. ಈ ವಾರ್ಡ್ನನಲ್ಲಿ ಅತಿ ಹೆಚ್ಚು ಎಸ್ಸಿ ಎಸ್ಟಿ ಕಡು ಬಡವರಿದ್ದು ಬಿ ಖಾತಾ ಅಭಿಯಾನದಡಿ ಕೇವಲ ಪ್ರಸ್ತುತ ಸಾಲಿನ ತೆರಿಗೆ ಪಾವತಿಸಬೇಕಾಗಿರುವುದು ಬಡವರಿಗೆ ಬಹಳಷ್ಟು ಅನುಕೂಲವಾಗಲಿದೆ. ಕನಿಷ್ಠ ತೆರಿಗೆ ಕೂಡ ಕಟ್ಟಲಾಗದ ಪರಿಸ್ಥಿತಿಯಲ್ಲಿರುವ ಕಡು ಬಡವರಿಗೆ ವಾರ್ಡಿನ ಹಲವಾರು ಮುಖಂಡರು ಸೇರಿ ಅವರ ತೆರಿಗೆ ಪಾವತಿಸುವ ಭರವಸೆ ನೀಡಿದ್ದಾರೆ.

ಇನ್ನು ಜನಸಾಮಾನ್ಯರ ಏಳಿಗೆಗಾಗಿ ಶ್ರಮಿಸುತ್ತಿರುವ ಶಾಸಕ ಪ್ರದೀಪ್ ಈಶ್ವರ್ ಕ್ಷೇತ್ರದ ಜನರ ಹಿತಕ್ಕಾಗಿ ಇನ್ನಷ್ಟು ದುಡಿಯುವ ಶಕ್ತಿ ಆ ದೇವರು ನೀಡಲಿ ಎಂದು ತಿಳಿಸಿದರು.

ವಾರ್ಡಿನ ಮುಖಂಡರಾದ ಅಲ್ಲು ಅನೀಲ್ ಮಾತನಾಡಿ ತಮ್ಮ ನಿವೇಶನ ಕಟ್ಟಡಗಳ ದಾಖಲೆಗಳು ಸರಿಯಾಗಿದ್ದಲ್ಲಿ ಕಷ್ಟದ ಸಮಯದಲ್ಲಿ ಉಪಯೋಗಕ್ಕೆ ಬರುತ್ತದೆ ಖಾತಾ ಇಲ್ಲದಿರುವುದು ತಮ್ಮ ಆಸ್ತಿ ಇದ್ದರು ಇಲ್ಲದಂಗೆ ಹಾಗಾಗಿ ರಾಜ್ಯದ್ಯಂತ ಬಿ ಖಾತಾ ಅಭಿಯಾನ ಶುರುವಾಗಿದ್ದು ಪ್ರತಿಯೊಬ್ಬರಿಗೂ ಅನುಕೂಲವಾಗಲಿದೆ. ಇನ್ನು ವಾರ್ಡ್ 7 ರಲ್ಲಿ ಅತಿ ಹೆಚ್ಚು ಬಿ ಖಾತಾಗೆ ಅರ್ಜಿಗಳು ಬಂದಿದೆ ವಾರ್ಡಿನ ನಾಗರಿಕರಿಗೆ ಎಲ್ಲ ರೀತಿಯ ಸಹಕಾರ ವಾರ್ಡಿನ ಮುಖಂಡರೊಂದಿಗೆ ನೀಡಲಾಗುವುದು ಎಂದರು.

# ಅಂಗಡಿತೆರವಿಗೆ ಸವಿತಾ ಸಮಾಜದಿಂದ ಮುಷ್ಕರ




**ಕೊರಟಗೆರೆ:** ತೋವಿನಕೆರೆಗೆ ಹೊರರಾಜ್ಯದಿಂದ ಆಗಮಿಸಿ ಗ್ರಾಪಂ ಪರವಾನಗಿ ಪಡೆಯದೇಅನಧಿಕೃತವಾಗಿ ಪ್ರಾರಂಭ ಮಾಡಿರುವ ಸೇಲ್ಯೂನ್‌ಅಂಗಡಿ ಮುಚ್ಚಿಸುವಂತೆ ಆಗ್ರಹಿಸಿ ಸವಿತಾ ಸಮಾಜದ ಮುಖಂಡರುತಮ್ಮ 12ಅಂಗಡಿ ಮಳಿಗೆಗಳನ್ನು ಸ್ವಯಂ ಪ್ರೇರಿತವಾಗಿ ಮುಚ್ಚಿ ಮುಷ್ಕರಕ್ಕೆ ಕರೆ ನೀಡಿರುವ ಘಟನೆ ಗುರುವಾರ ಬೆಳಕಿಗೆ ಬಂದಿದೆ.

ಕೊರಟಗೆರೆ ತಾಲೂಕು ಚನ್ನರಾಯನ ದುರ್ಗ ಹೋಬಳಿ ತೋವಿನಕೆರೆಗ್ರಾಮದಲ್ಲಿ ಹೊರರಾಜ್ಯದಿಂದ ಬಂದಿರುವ ಮುಸ್ಲಿಂ ಕುಟುಂಬವೊಂದುಕ್ಷೌರದಅಂಗಡಿಯನ್ನುತೆರೆದಿದ್ದಾರೆ.ಇದರಿಂದ ಭಜಂತ್ರಿ ಸಮುದಾಯದ ಕುಟುಂಬಗಳಿಗೆ ಆರ್ಥಿಕವಾಗಿ ನಷ್ಟವಾಗಲಿದೆಎಂದು ಆರೋಪಿಸಿ 3ದಿನದಿಂದ ಸವಿತಾ ಸಮಾಜದಅಂಗಡಿ ಮಾಲೀಕರಿಂದ ಮುಷ್ಕರಕ್ಕೆಕರೆ ನೀಡಿಗುರುವಾರಗ್ರಾಪಂ ಪಿಡಿಓಗೆ ಮನವಿ ಸಲ್ಲಿಸಿದ್ದಾರೆ.

ಕೊರಟಗೆರೆತಾಲೂಕು ಸವಿತಾ ಸಮಾಜದ ಅಧ್ಯಕ್ಷ ಗಂಗರಾಜು ಮಾತನಾಡಿಗ್ರಾಪಂಯಿಂದ ಪರವಾನಗಿ ಪಡೆಯದೇಅನಧಿಕೃತವಾಗಿ ಮುಸ್ಲಿಂ ಕುಟುಂಬ ಸೆಲ್ಯೂನ್‌ಅಂಗಡಿ ಪ್ರಾರಂಭಿಸಿದ್ದಾರೆ. ಮಾಲೀಕತನ್ನಅಂಗಡಿಗೆ ಬರುವಗ್ರಾಹಕರಿಂದಕಡಿಮೆ ಹಣ ಪಡೆದುಕಟಿಂಗ್ ಶೇವಿಂಗ್ ಮಾಡ್ತಾನೇ.ನಾವು ಪೂರ್ವ ಕಾಲದಿಂದಲೂಇದೇ ಕೆಲಸ ಮಾಡಿಕೊಂಡುಜೀವನ ಸಾಗಿಸುತ್ತಿದ್ದೇವೆ. ಮುಸಿಂ ಅಂಗಡಿ ಖಾಲಿ ಮಾಡಿಸಿ ನಮಗೇ ಅನುಕೂಲ ಕಲ್ಪಿಸಬೇಕುಎಂದು ಆಗ್ರಹಿಸಿದರು. ಅಂಗಡಿ ಮಾಲೀಕ ಹರೂನ್ ಮಾತನಾಡಿ ನಾವು ಕಳೆದ 15ವರ್ಷದಿಂದ ಕೊರಟಗೆರೆ ಪಟ್ಟಣದಲ್ಲಿ ವಾಸವಿದ್ದೇವೆ. ನಮ್ಮದು ಸ್ವಂತ ಮನೆ ಮತ್ತು ಅಂಗಡಿಗಳಿವೆ. ಪಪಂ ಮತ್ತುಗ್ರಾಪಂಯಿಂದ ನಮಗೇ ಆಧಾರ್, ಐಡಿ ಮತ್ತುರೇಷನ್‌ಕಾರ್ಡ್ ನೀಡಿದ್ದಾರೆ.ನಮಗೇ ಗೊತ್ತಿರೋದು ಸೇಲ್ಯೂನ್ ಕೆಲಸ ಬಿಟ್ಟರೇ ಬೇರೆನೂಗೊತ್ತಿಲ್ಲ. ದುಡಿದುತಿನ್ನುವ ಕೈಗಳಿಗೆ ಸುಮ್ಮನೇತೊಂದರೇ ನಮ್ಮಜೀವನ ನಡೆಯೋದು ಹೇಗೆ.ಗ್ರಾಮೀಣ ಭಾಗದ ಬಡಗ್ರಾಹಕರಿಂದ 10ರೂ ಕಡಿಮೆ ಪಡೆದುಕೊಂಡರೇತಪ್ಪೇನು ಹೇಳಿ ಎಂದುತಮ್ಮ ಅಲಳನ್ನು ತೋಡಿಕೊಂಡರು.

ತೋವಿನಕೆರೆಯಲ್ಲಿ ಸವಿತಾ ಸಮಾಜದ 12ಅಂಗಡಿಗಳಿವೆ. ಮುಸ್ಲಿಂ ಕುಟುಂಬ ಕಳೆದ 4ವರ್ಷದ ಹಿಂದೆಒಂದೇಒಂದು ಸೇಲ್ಯೂನ್‌ಅಂಗಡಿತೆರೆದಿದೆ. ಜೀವನದ ಬಂಡೆ ಸಾಗಿಸಲು ದುಡಿಮೆ ಪ್ರತಿಯೊಬ್ಬರಿಗೆ ಅನಿವಾರ್ಯ.ಸೆಲ್ಯೂನ್ ಅಂಗಡಿಯ ಮಾಲೀಕರುಒಟ್ಟಾಗಿಇಂತಿಷ್ಟು ಹಣಎಂದು ನಿಗದಿ ಮಾಡಿ ನಾಮಫಲಕ ಅಳವಡಿಸಿ ಆದೇಶ ಮಾಡಿಎಲ್ಲರಿಗೂ ಅನುಕೂಲ ಕಲ್ಪಿಸಬೇಕಾದಜವಾಬ್ದಾರಿಯನ್ನುಅಧಿಕಾರಿವರ್ಗ ತೆಗೆದುಕೊಳ್ಳಬೇಕಿದೆ.

ಅನಧಿಕೃತಅಂಗಡಿ ಮಳಿಗೆ ತೆರವಿನ ಬಗ್ಗೆ ಸವಿತಾ ಸಮಾಜ ಸಂಘದಿಂದಗ್ರಾಪಂಗೆ ಮನವಿ ಸಲ್ಲಿಸಿದ್ದಾರೆ. ಮನವಿ ಪರಿಶೀಲನೆ ನಡೆಸಿ ಅಂಗಡಿಯ ಮಾಲೀಕರಿಗೆ ನೋಟೀಸ್‌ಜಾರಿಗೆ ಸಿದ್ದತೆ ನಡೆದಿದೆ. ತಾಪಂಯ ಮೇಲಾಧಿಕಾರಿ ಮತ್ತುಗ್ರಾಪಂಯುಅಧ್ಯಕ್ಷರು–ಸರ್ವ ಸದಸ್ಯರ ಗಮನಕ್ಕೆ ತರುತ್ತೇನೆ. ಅಂಗಡಿ ಪ್ರಾರಂಭಕ್ಕೆಗ್ರಾಪಂ ಪರವಾನಗಿ ಪಡೆಯೋದುಕಡ್ಡಾಯ.

**ಲಕ್ಷ್ಮೀನಾರಾಯಣ್** । ಪಿಡಿಓ.ತೋವಿನಕೆರೆ



# ಚುನಾವಣೆಯಲ್ಲಿ 11 ಮಂದಿಯೂ ವಿಜೇತರು

**ಮಾಗಡಿ:** ತಾಲೂಕಿನ ಅವ್ವೇರಹಳ್ಳಿ ಪುನರ್ವಸತಿ ಕಾಲೋನಿ ಮೀನುಗಾರರ ಸಹಕಾರ ಸಂಘಕ್ಕೆ 10 ಮಂದಿ ನಿರ್ದೇಶಕರಾಗಿ ಚುನಾಯಿತರಾಗಿದ್ದಾರೆ ಓರ್ವ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಉಮೇಶ್ ಘೋಷಿಸಿದರು.

ಮಾಡಬಾಳ್ ಹೋಬಳಿ ಅವ್ವೇರಹಳ್ಳಿ ಪುನರ್ವಸತಿ ಕಾಲೋನಿ ಮೀನುಗಾರರ ಸಹಕಾರ ಸಂಘಕ್ಕೆ ನಿರ್ದೇಶಕರ ಚುನಾವಣೆ ಗುರುವಾರ ಘೋಷಣೆ ಮಾಡಲಾಯಿತು. ಆಡಳಿತ ಮಂಡಳಿಗೆ ಒಟ್ಟು 11 ಮಂದಿ ಆಯ್ಕೆ ಮಾಡಿಕೊಳ್ಳಬೇಕಿತ್ತು ಅದರಲ್ಲಿ ಓರ್ವ ಅವಿರೋಧವಾಗಿ ಆಯ್ಕೆಯಾದರೆ ಅಂತಿಮವಾಗಿ ಕಣದಲ್ಲಿ 19 ಮಂದಿ ಮಾತ್ರ ಉಳಿದಿದ್ದರು ಇದರಲ್ಲಿ ಓರ್ವ ಅವಿರೋಧ ಸೇರಿದಂತೆ 11 ಮಂದಿ ನಿರ್ದೇಶಕರ ಫಲಿತಾಂಶವನ್ನು ಚುನಾವಣಾಧಿಕಾರಿ ಘೋಷಣೆ ಮಾಡಿದರು.

ಬಿಸಿಎಂಎ ಕ್ಷೇತ್ರದಿಂದ ಆರ್.ರಾಜಣ್ಣ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾದರೆ, ಬಿಸಿಎಂಬಿ ರಾಜಣ್ಣ, ಸಾಮಾನ್ಯ ಮಹಿಳೆ ಕ್ಷೇತ್ರದಿಂದ ಸರಸ್ವತಮ್ಮ, ನರಸಮ್ಮ, ಸಾಮಾನ್ಯ ಕ್ಷೇತ್ರದಿಂದ ಎ.ಬಿ. ಲೋಕೇಶ್, ಕೃಷ್ಣಪ್ಪ, ಬೈರೇಗೌಡ, ಕೂನಯ್ಯ, ನಾರಾಯಣ ಕುಮಾರು, ರುದ್ರಯ್ಯ, ಪರಿಶಿಷ್ಟಜಾತಿ,ಪರಿಶಿಷ್ಟ ಪಂಗಡ ಕ್ಷೇತ್ರದಿಂದ ಅರಿಯಪ್ಪ ನಿರ್ದೇಶಕರಾಗಿ ಚುನಾಯಿತರಾಗಿದ್ದಾರೆ.

ಮಾಜಿ ಅಧ್ಯಕ್ಷ ಹಾಲಿ ನಿರ್ದೇಶಕ ಲೋಕೇಶ್ ಮಾತನಾಡಿ, 1996 ರಲ್ಲಿ ಪ್ರಾರಂಭವಾದ ಸಂಘ ಉತ್ತಮವಾಗಿ ನಡೆಯುತ್ತಿದೆ, 1 ಕೋಟಿಯಷ್ಟು ಲಾಭಾಂಶವಿದ್ದು, ಉತ್ತಮ ಸಂಘವೆಂದು ಸರಕಾರ 3 ಭಾರಿ ರಾಜ್ಯ ಪ್ರಶಸ್ತಿ ನೀಡಿದೆ, ಸರಕಾರದಿಂದ ಮೀನುಗಾರರಿಗೆ ಸಿಗಬೇಕಾದ ಬಲೆ, ಬೋಟ್, ಬೋನಸ್ ಸೇರಿದಂತೆ ಅನೇಕ ಸೌಲತ್ತು ಪ್ರಮಾಣಿಕವಾಗಿ ವಿತರಿಸಿದ್ದೇವೆ ಇದರಿಂದ 3 ಭಾರಿ ಯಾವುದೇ ಚುನಾವಣೆ ಇಲ್ಲದೆ ಅವಿರೋಧವಾಗಿ ನಿರ್ದೇಶಕರನ್ನು ಆಯ್ಕೆಮಾಡಲಾಯಿತು.

ಈ ಭಾರಿ ಚುನಾವಣೆ ನಡೆದಿದ್ದು ನಮ್ಮ ತಂಡದಿಂದ 11 ಮಂದಿ ನಿರ್ದೇಶಕರಿಗೆ 11 ಮಂದಿ ಜಯಶೀಲರಾಗಿದ್ದಾರೆ ಉತ್ತಮವಾಗಿ ಸಂಘ ಮುನ್ನಡೆಸಿಕೊಂಡು ಬಂದಿರುವುದಕ್ಕೆ ಮೀನುಗಾರರು ಹೆಚ್ಚು ಬೆಂಬಲ ನೀಡಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಹಂಚಿಕುಪ್ಪೆ ಗ್ರಾ.ಪಂ. ಅಧ್ಯಕ್ಷೆ ಚೈತ್ರಾ ರವಿ, ಟಿಎಪಿಸಿಎಂಎಸ್ ನಿರ್ದೇಶಕ ಕಲ್ಲೂರು ರಂಗನಾಥ್, ಗ್ರಾ.ಪಂ. ಸದಸ್ಯ ಉಮೇಶ್, ಸುನೀಲ್, ಬಾಳೇಗೌಡ, ಅಪ್ಪಾಜಿ ಗೌಡ ಇತರರು ಇದ್ದರು.



# ಮಾ.9ಕ್ಕೆ ಕೆಯುಡಬ್ಲ್ಯೂಜೆ ಸರ್ವ ಸದಸ್ಯರ ಮಹಾಸಭೆ

**ರಾಮನಗರ:** ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 2023–2024 ನೇ ಸಾಲಿನ 91ನೇ ಸರ್ವ ಸದಸ್ಯರ ಮಹಾಸಭೆಯು ಕೊಪ್ಪಳದಲ್ಲಿ ಮಾ–9 ರಂದು ಬೆಳಿಗ್ಗೆ 11 ಗಂಟೆಗೆ ನಡೆಸಲು ತೀರ್ಮಾನಿಸಲಾಗಿದೆ ಎಂದು ಕೆಯುಡಬ್ಲ್ಯೂಜೆ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ ತಿಳಿಸಿದ್ದಾರೆ.

ಕೆಯುಡಬ್ಲ್ಯೂಜೆ ರಾಜ್ಯ ಅಧ್ಯಕ್ಷ ಶಿವಾನಂದ ತಗಡೂರ ಅಧ್ಯಕ್ಷತೆಯಲ್ಲಿ ಕೊಪ್ಪಳದ ಕೇಂದ್ರ ಬಸ್ ನಿಲ್ದಾಣ ಬಳಿಯ ಪಾನಘಂಟಿ ಕಲ್ಯಾಣ ಮಂಟಪದಲ್ಲಿ ನಡೆಯುವ ಮಹಾಸಭೆಯಲ್ಲಿ ರಾಜ್ಯದ ಎಲ್ಲ ಸರ್ವ ಸದಸ್ಯರು ಭಾಗವಹಿಸಬಹುದಾಗಿದೆ ಎಂದು ಅವರು ತಿಳಿಸಿದರು.



ಮೊದಲಿಗೆ ಸಭೆಯ ತಿಳಿವಳಿಕೆ ಪತ್ರವನ್ನು ಓದಿ ದಾಖಲು ಮಾಡಲಾಗುವುದು. ಹಿಂದಿನ ಸಭೆಯ ನಡಾವಳಿಯನ್ನು ಓದಿ ಅನುಮೋದಿಸುವುದು. 2023–2024 ನೇ ಸಾಲಿನ ವಾರ್ಷಿಕ ವರದಿ ಮಂಡನೆ ಹಾಗೂ ಅನುಮೋದನೆ ಮಾಡುವುದು. 2023–2024 ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿ ಮಂಡನೆ ಮತ್ತು ಅನುಮೋದನೆ ಮಾಡಲಾಗುವುದು ಎಂದು ಅವರು ಹೇಳಿದ್ದಾರೆ.

ಸರ್ವ ಸದಸ್ಯರು ಸಭೆಯಲ್ಲಿ ವಿಷಯ ಪ್ರಸ್ತಾಪಿಸಲು ಇಚ್ಚಿಸಿದ್ದಲ್ಲಿ ಫೆ–28 ರೊಳಗೆ ಲಿಖಿತವಾಗಿ ರಾಜ್ಯ ಸಂಘಕ್ಕೆ ಕಳುಹಿಸಬೇಕು. ಸರ್ವ ಸದಸ್ಯರ ಸಭೆಯಲ್ಲಿ ಭಾಗವಹಿಸುವವರು 2024–25 ನೇ ಸಾಲಿನ ಗುರುತಿನ ಚೀಟಿ ಕಡ್ಡಾಯವಾಗಿ ಸಲ್ಲಿಸಬೇಕು ಎಂದು ಅವರು ವಿವರಿಸಿದ್ದಾರೆ.

ಮನವಿ: ರಾಮನಗರ ಜಿಲ್ಲೆಯ ಸರ್ವ ಸದಸ್ಯರು ಕೊಪ್ಪಳದಲ್ಲಿ ನಡೆಯವ 91ನೇ ಸರ್ವ ಸದಸ್ಯರ ವಾರ್ಷಿಕ ಮಹಾ ಸಭೆಯಲ್ಲಿ ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸುವಂತೆ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಸಿದ್ದಲಿಂಗೇಗೌಡ (ಮಧು) ಮನವಿ ಮಾಡಿದ್ದಾರೆ.

# ಸರ್ವಜ್ಞರ ತ್ರಿಪದಿಗಳು ಸರ್ವಕಾಲಕ್ಕೂ ಪ್ರಸ್ತುತ





ಮಾಲೂರು: 16ನೇ ಶತಮಾನದ ಕವಿ ಸಂತ ದಾರ್ಶನಿಕ ಸರ್ವಜ್ಞ ಅವರು ತ್ರಿಪದಿಗಳ ಮೂಲಕ ಕನ್ನಡ ಸಾಹಿತ್ಯ ಸಿರಿಗೆ ಅಮೂಲ್ಯ ಕೊಡುಗೆಯಾಗಿದೆ ತ್ರಿಪದಿಗಳು ಸಾರುವ ಸಂದೇಶ ಸರ್ವಕಾಲಕ್ಕೂ ಪ್ರಸ್ತುತ ಎಂದು ಶಾಸಕ ಕೆ.ವೈ.ನಂಜೇಗೌಡ ಹೇಳಿದರು.

ಪಟ್ಟಣದ ತಾಲೂಕು ಕಚೇರಿಯ ತಹಶೀಲ್ದಾರ್ ಸಭಾಂಗಣದಲ್ಲಿ ತಾಲೂಕು ಆಡಳಿತ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ 522ನೇ ಜಯಂತಿ ಕಾರ್ಯಕ್ರಮದಲ್ಲಿ ಕವಿ ಸರ್ವಜ್ಞ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಅರ್ಪಿಸಿ, ನಂತರ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದರು.

16ನೇ ಶತಮಾನದ ಕರ್ನಾಟಕ ಕಂಡ ಒಬ್ಬ ಶ್ರೇಷ್ಠ ವಚನಕಾರ ದಾರ್ಶನಿಕ ಕವಿ ಸರ್ವಜ್ಞ ಅವರು ಸರ್ವಜ್ಞನ ತ್ರಿಪದಿಗಳು ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಯಾಗಿದೆ.

ತ್ರಿಪದಿಗಳು ಹಾಡು ಭಾಷೆಯಲ್ಲಿ ರಚಿಸಿ ಸಮಾಜದಲ್ಲಿನ ಅಂಕುಡೊಂಕು ಗಳನ್ನು ತಿದ್ದಿದ ಸಮಾಜ ಸುಧಾರಕರು ಪ್ರಸ್ತುತ 7 ಭಾಷೆಗಳಿಗೆ ಭಾಷಾಂತರ ಗೊಂಡಿದೆ ಭಾಷೆ ಮತ್ತು ಗಡಿಗಳ ಎಲ್ಲೆ ಮೀರಿ ರಾಜ್ಯದ ಕೀರ್ತಿಯನ್ನು ಬೆಳಗಿಸಿದೆ ಇಂದು ರಾಜ್ಯಾದ್ಯಂತ ಸರ್ವಜ್ಞರ ಜಯಂತಿ ಆಚರಣೆ ಮಾಡುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಕುಂಬಾರ ಸಮುದಾಯವು ರಾಜ್ಯದಲ್ಲಿ ಕಡಿಮೆ ಜನಸಂಖ್ಯೆ ಇರುವ ಸಮುದಾಯವಾಗಿದ್ದರೂ ಸಹ ಶೈಕ್ಷಣಕ ರಾಜಕೀಯ ಆರ್ಥಿಕ ಸಾಮಾಜಿಕವಾಗಿ ತೀರಾ ಹಿಂದುಳಿದಿದ್ದು, ಸರ್ಕಾರ ನಿಗಮ ಮಂಡಳಿಯನ್ನು ರಚಿಸಿದೆ ಆದರೆ ಸಮುದಾಯದ ಅಭಿವೃದ್ಧಿಗೆ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸುವ ಅಗತ್ಯವಿದೆ ಎಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಲಕ್ಮೀನಾರಾಯಣ್ ಮಾತನಾಡಿ, ಹಿಂದುಳಿದ ವರ್ಗಗಳಲ್ಲಿ ಒಂದಾದ ಕುಂಬಾರ ಸಮಾಜ ಮತ್ತಷ್ಟು ಮುಂಚೂಣಿಗೆ ಬರಬೇಕಿದ್ದು, ಸಮಾಜಕ್ಕೆ ತ್ರಿಪದಿಗಳ ಮೂಲಕ ಬೆಳಕು ನೀಡಿದ ಮಹಾನ್ ವ್ಯಕ್ತಿ ಕವಿ ಸರ್ವಜ್ಞರು ಕನ್ನಡವನ್ನು ವಿಶ್ವದ ಉತ್ತುಂಗಕ್ಕೆ ಏರಿಸಿದ ಕಣ್ಮಣಿ ಸರ್ವಜ್ಞರ ತ್ರಿಪದಿಗಳು ಸರ್ವಕಾಲಿಕವಾಗಿದ್ದು, ತಂದೆ, ತಾಯಿ ಮತ್ತು ಗುರುವಿನ ಸಾಮರ್ಥ್ಯವನ್ನು 16ನೇ ಶತಮಾನದಲ್ಲೆ ತಿಳಿಸಿಕೊಟ್ಟಿದ್ದರು. ಉತ್ತಮ ನಾಗರಿಕತೆ ತಿಳಿಸಿಕೊಟ್ಟ ಸಮಾಜ ನಮ್ಮದಾಗಿದ್ದು, ಎಲ್ಲ ಸೌಲಭ್ಯಗಳಿಂದ ವಂಚಿತವಾಗಿದೆ. ಎಲ್ಲ ಕ್ಷೇತ್ರಗಳಲ್ಲಿ ಮುಖ್ಯವಾಹಿನಿಗೆ ಬರುವುದಕ್ಕೆ ನಾವೆಲ್ಲರೂ ಒಗ್ಗಟ್ಟಾಗಬೇಕು ಎಂದು ಕರೆ ನೀಡಿದರು.

ತಹಶೀಲ್ದಾರ್ ಎಂ.ವಿ.ರೂಪ, ಪುರಸಭಾ ಅಧ್ಯಕ್ಷೆ ಕೋಮಲ, ಸದಸ್ಯರಾದ ಆರ್.ವೆಂಕಟೇಶ್, ವಿಜಯಲಕ್ಷ್ಮಿ, ದರಖಾಸ್ತು ಸಮಿತಿ ಅಧ್ಯಕ್ಷ ಹನುಮಂತಪ್ಪ,ಬನಹಳ್ಳಿ ಸತೀಶ್, ನಾಗಪುರ ನವೀನ್, ಪೊಲೀಸ್ ಇನ್ಸ್ಪೆಕ್ಟರ್ ವಸಂತ್, ಮುಖಂಡರುಗಳಾದ ಶ್ರೀನಿವಾಸ್, ಧರಣಿಬಾಬು, ಸುಬ್ರಮಣಿ , ರಾಜುಅಪ್ಪಿ, ರವಿಚಂದ್ರ, ಮುನಿಸ್ವಾಮಿ, ರಾಜೇಂದ್ರ, ಚೇತನ್, ರವಿ, ಮುರಳಿ, ರಾಜು, ಅನಿತಾ, ಶೈಲಾಕೃಷ್ಣ ಇನ್ನಿತರರು ಹಾಜರಿದ್ದರು.

# ಕಲಿಕೆಗೆ ಮಕ್ಕಳ ಕಲಿಕಾ ಹಬ್ಬ ಸಹಕಾರಿ

**ಕೆ.ಆರ್.ಪೇಟೆ:** ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ವಿಭಿನ್ನ ರೀತಿಯ ಚಟುವಟಿಕೆಗಳ ಮೂಲಕ ಕಲಿಕೆಯನ್ನು ಸರಳೀಕರಣಗೊಳಿಸಲು ಮಕ್ಕಳ ಕಲಿಕಾ ಹಬ್ಬ ಸಹಕಾರಿಯಾಗಲಿದೆ ಎಂದು ಸಮೂಹಸಂಪನ್ಮೂಲ ವ್ಯಕ್ತಿ ಬಿ.ಎಸ್.ಮಹೇಶ್ ಅಭಿಪ್ರಾಯಪಟ್ಟಿದ್ದಾರೆ.

ಅವರು ತಾಲ್ಲೂಕಿನ ಶೀಳನೆರೆ ಹೋಬಳಿಯ ಸಿಂಧಘಟ್ಟ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಏರ್ಪಡಿಸಿದ್ದ ಎಫ್‌ಎಲ್‌ಎನ್ ಕಲಿಕಾಹಬ್ಬ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕಲಿಕೆಗೆ ಪುಷ್ಠೀಕರಿಸಲು ಅನುಕೂಲವಾಗಲೆಂದು ವಿದ್ಯಾರ್ಥಿಗಳೇ ಕಲಿತ ಓದನ್ನು ಗಟ್ಟಿಯಾಗಿ ಓದುವುದು, ಚಿತ್ರಗಳ ಮೂಲಕ ಕಥೆ ಕಟ್ಟುವುದು, ಸಂತಸದಾಯಕ ಗಣಿತದ ಸಮಸ್ಯೆಗಳನ್ನು ಬಿಡಿಸುವುದು, ಜ್ಞಾಪನಾ ಶಕ್ತಿಯನ್ನು ಪರೀಕ್ಷಿಸುವುದು, ಪೋಷಕರು ಮತ್ತು ಇಲಾಖೆಯ ಸಮನ್ವಯತೆಯ ಚಟುವಟಿಕೆಗಳು, ರಸಪ್ರಶ್ನೆ ಮುಂತಾದ ವಿಭಿನ್ನ ಚಟುವಟಿಕೆಗಳಲ್ಲಿ ಭಾಗವಹಿಸಿ ತನ್ನ ಸ್ವ ಅನುಭವವನ್ನು ಹೆಚ್ಚಿಸಿಕೊಳ್ಳಲು ಕಲಿಕಾ ಹಬ್ಬ ಅನುಕೂಲವಾಗಲಿದೆ ಎಂದು ತಿಳಿಸಿದರು.

ಎಸ್‌ಡಿಎಂಸಿ ಅಧ್ಯಕ್ಷ ವಸಂತಕುಮಾರ್ ಉಪಾದ್ಯಕ್ಷೆ. ಸುಶ್ಮಿತ. ಸಮೂಹ ಸಂಪನ್ಮೂಲ ವ್ಯಕ್ತಿ ಡಿ. ಚಲುವರಾಜು. ಶಿಕ್ಷಕರಾದ ರಾಜಯ್ಯ. ಶಶಿಧರ. ಮರುವನಹಳ್ಳಿಬಸವರಾಜು. ಅಶೋಕ್. ಬಾಬು. ಶಂಕರ್. ಕೃಷ್ಣ. ಭಗವಾನ್. ನಳಿನಿ. ಅಕ್ಷತ. ರಾಜೇಶ್. ಪರಶುರಾಮ. ಸ್ನೇಹಲತಾ. ಅನಿತ. ವತ್ಸಲ. ಎನ್.ಜೆ.ಸುಷ್ಮ. ಶ್ರೀಧರ. ಚಿಕ್ಕಣ್ಣ. ಸೇರಿದಂತೆ ಸಿಂಧಘಟ್ಟ ಸಿಆರ್‌ಸಿ ವ್ಯಾಪ್ತಿಯ ಎಲ್ಲಾ ಶಿಕ್ಷಕರು ಮಕ್ಕಳು ಹಾಜರಿದ್ದರು.



# ಶಿಕ್ಷಣ ಜೊತೆಗೆ ವ್ಯಕ್ತಿತ್ವ ವಿಕಸನ ತುಂಬಾ ಅಗತ್ಯ

**ಆನೇಕಲ್:** ಶಿಕ್ಷಣ ಜೊತೆಗೆ ವ್ಯಕ್ತಿತ್ವ ವಿಕಸನ ತುಂಬಾ ಅಗತ್ಯವಿದೆ. ಈ ನಿಟ್ಟಿನಲ್ಲಿ ಪೋಷಕರು ಮನೆಯಲ್ಲಿ ಸಂಸ್ಕಾರ ಕಲಿಸುವ ಜವಾಬ್ದಾರಿ ಇದೆ ಎಂದು ಭವತಾರಿಣಿ ಆಶ್ರಮದ ಮಾತಾ ವಿವೇಕಾಮಾಯಿ ಮಾತಾಜಿ ತಿಳಿಸಿದರು.

ಅವರು ಕೇಶವಕೃಪಾ ಸಂವರ್ಧನ ಸಮಿತಿ ವತಿಯಿಂದ ಆಯೋಜಿಸಿದ ಸರ್ಜಾಪುರ ಪಟ್ಟಣದ ಪೊಲೀಸ್ ಕ್ವಾರ್ಟರ್ಸ್ ಹಿಂಭಾಗದಲ್ಲಿ ಸರಸ್ವತಿ ಶಿಶುಮಂದಿರದ ನೂತನ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದರು

ಮೌಲ್ಯಾಧಾರಿತ ಶಿಕ್ಷಣಕ್ಕೆ ಹೆಚ್ಚು ಸಂಶೋಧನೆಗಳು ಆಗಬೇಕಾಗಿದೆ. ಶಿಶು ಮಂದಿರಗಳಲ್ಲಿ ಮಕ್ಕಳ ಜ್ಞಾನಾರ್ಜನೆಯನ್ನು ಹೆಚ್ಚಿಸಿಕೊಳ್ಳಲು ಸಮಗ್ರ ದೃಷ್ಟಿಕೋನ, ಏಕಾಗ್ರತೆ, ವ್ಯಕ್ತಿತ್ವ ವಿಸಕನವನ್ನು ರೂಪಿಸಿಕೊಳ್ಳಲು ಶಿಶುಮಂದಿರಗಳು ಹೆಚ್ಚು ಅವಶ್ಯಕತೆ ಇದೆ ಎಂದರು.ಸಮಾಜದಲ್ಲಿ ಉತ್ತಮ ಪ್ರಜೆಗಳ ನಿರ್ಮಾಣಕ್ಕೆ ಮನೆಯಲ್ಲಿಯೇ ಸಂಸ್ಕಾರದ ಜವಾಬ್ದಾರಿಯನ್ನು ಹೊರಬೇಕಾಗಿದೆ. ಈ ನಿಟ್ಟಿನಲ್ಲಿ ಚಿಕ್ಕ ವಯಸ್ಸಿನ ಮಕ್ಕಳಿಗೆ ಸಮಾಜದಲ್ಲಿ ಸರಿ ತಪ್ಪುಗಳ ಬಗ್ಗೆ ತಿಳುವಳಿಕೆ ನೀಡುವುದು ತುಂಬಾ ಅಗತ್ಯವಿದೆ. ಒಳ್ಳೆಯ ಶಿಕ್ಷಣ ಜೊತೆಗೆ ವ್ಯಕ್ತಿತ್ವ ರೂಪಿಸಿಕೊಂಡರೆ ಉತ್ತಮ ಸಮಾಜ ನಿರ್ಮಾಣ ಸಾಧ್ಯ. ಇಂದಿನ ಸಮಾಜದಲ್ಲಿ ಶಕ್ತಿಯುತ ವಿಚಾರಗಳು, ಪವಿತ್ರ ಆಲೋಚನೆಗಳು ಹಾಗೂ ನೈತಿಕ ಮೌಲ್ಯಗಳಂತಹ ವಿಚಾರಧಾರೆಗಳು ತುಂಬ ಅವಶ್ಯವಾಗಿದೆ ಎಂದು ಅವರು ಹೇಳಿದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ದಕ್ಷಿಣ ಮಧ್ಯಕ್ಷೇತ್ರದ ಕಾರ್ಯನಿರ್ವಾಹಕರಾದ ನಾ.ತಿಪ್ಪೇಸ್ವಾಮಿ ಮಾತನಾಡಿ, ಶಿಶು ಮಂದಿರಗಳಲ್ಲಿ ಮಕ್ಕಳಿಗೆ ಶಿಕ್ಷಣ, ಸಂಸ್ಕಾರ ಮತ್ತು ವ್ಯಕ್ತಿ ವಿಕಸನದಂತಹ ಕಲಿಕೆಗಳಿಗೆ ಹೆಚ್ಚು ಒತ್ತು ನೀಡಲಾಗಿದೆ.ಮಕ್ಕಳಲ್ಲಿರುವ ಪ್ರತಿಭೆ ಮತ್ತು ಧೈರ್ಯವನ್ನು ಗುರುತಿಸುವ ಮೂಲಕ ಸಮಾಜದಲ್ಲಿ ಒಳ್ಳೆಯ ಪ್ರಜೆಗಳನ್ನಾಗಿ ನಿರ್ಮಿಸಲು ಸಾಧ್ಯವೆಂದು ತಿಳಿಸಿದರು.

ಕೇಶವಕೃಪಾ ಸಂವರ್ಧನ ಸಂಸ್ಥೆಯ ವತಿಯಿಂದ 450ಕೇಂದ್ರಗಳನ್ನು ತೆರೆದು, ಬಡ ಮಕ್ಕಳಿಗೆ, ಬಡ ಮಹಿಳೆಯರಿಗೆ ಶಿಕ್ಷಣ, ಸಂಸ್ಕಾರ, ಸ್ವಾವಲಂಬನೆ ಹಾಗೂ ಆರೋಗ್ಯದ ಕುರಿತು ಅರಿವು ಮೂಡಿಸುವಂತಹ ಕಾರ್ಯಗಳನ್ನು ನಿರಂತರವಾಗಿ ಮಾಡಲಾಗುತ್ತಿದೆ. ಅದರ



ಭಾಗವಾಗಿ ಸರ್ಜಾಪುರದಲ್ಲಿ ಸರಸ್ವತಿ ಶಿಶುಮಂದಿರ ಶಾಲೆಯನ್ನು ಪ್ರಾರಂಭಿಸಲಾಗಿದೆ. ಶಾಲೆಯ ನಿರ್ಮಾಣಕ್ಕೆ ವೆಂಕಟಸ್ವಾಮಿ ರೆಡ್ಡಿರವರು ಭೂಮಿಯನ್ನು ದಾನವಾಗಿ ನೀಡಿರುವುದು ಶ್ಲಾಘನೀಯವಾಗಿದೆ, ಹಿಂದು ಕುಟುಂಬಗಳಲ್ಲಿ ಹಬ್ಬ ಹರಿದಿನಗಳ ಬಗ್ಗೆ ಆಚರಣೆ ಮಾಡುವ ಮೂಲಕ ಯುವಪೀಳಿಗೆಗೆ ಸಂಸ್ಕಾರ ಕಲಿಸುವುದು ಅಗತ್ಯವಿದೆ. ಕಾಲೇಜಿನ ವಿದ್ಯಾರ್ಥಿಗಳಿಗೆ ಚಿಂತನಾ ಕೂಟಗಳನ್ನು ನಡೆಸಿ ದೇಶ ಭಕ್ತಿ ಹಾಗೂ ದೇಶದ ಅಭಿವೃದ್ಧಿಗೆ ಪ್ರೇರೇಪಿಸುವಂತಹ ಕಾರ್ಯವನ್ನು ಮಾಡಲಾಗುತ್ತಿದೆ ಎಂದರು.

ವಿದ್ಯಾಭಾರತಿ ದಕ್ಷಿಣ ಮಧ್ಯ ಕ್ಷೇತ್ರದ ಶಿಶುವಾಟಕ ಸಹಪ್ರಮುಖ್ ತಾರಾ ಕೆ ಆಚಾರಿ ಮಾತನಾಡಿ, ಶಿಶುಮಂದಿರದಲ್ಲಿ ನವದಂಪತಿಗಳಿಂದ ಶುರುವಾಗಿ ಮಕ್ಕಳವರೆಗೆ ಸಂಸ್ಕಾರ ಮತ್ತು ವ್ಯವಸ್ಥಿತವಾದ ಶಿಕ್ಷಣ ಪಡೆಯುವುದಕ್ಕೆ ಪೂರಕವಾದ ಪಠ್ಯಪುಸ್ತಕವನ್ನು ಶಾಲೆಯಲ್ಲಿ ಅಳವಡಿಸಲಾಗಿದೆ. ಗರ್ಭಾವಸ್ಥೆಯಲ್ಲಿರುವಾಗಲೆ ಶಿಶುವಿಗೆ ಸಸ್ಕಾರಯುತ ಶಿಕ್ಷಣ ನೀಡಿದರೆ ಮಹತ್ ಸಾಧಕರಾಗುತ್ತಾರೆ. ಜೀವನ ಪದ್ದತಿ ಆಹಾರ ಕ್ರಮ, ಬೆಳೆಯುವ ವಾತಾವರಣ ಕುರಿತು ಅರಿವು ಮೂಡಿಸಲಾಗುವುದು. ಹಾಗೂ ಯೋಗ ಶಿಕ್ಷಣ, ಸಂಗೀತ, ಆಯುರ್ವೇದಂತಹ ಶಿಕ್ಷಣವನ್ನು ನೀಡಲಾಗುತ್ತಿದೆ, ಜೊತೆಗೆ

ಗರ್ಭಧರಿಸಿದ ಮಹಿಳೆಗೆ ಪ್ರತಿತಿಂಗಳು ಮಗುವಿನ ಬೆಳವಣಿಗೆಗೆ ಆಧಾರಿತ ಶಿಕ್ಷಣ ನೀಡುವುದು. ಯಾವ ಯೋಗ ಮಾಡಿಸಬೇಕು. ಮನೆಯಲ್ಲಿಯೇ ಎಂತಹ ವಾತಾವರಣ ನಿರ್ಮಿಸಬೇಕೆಂಬುದು ಎಂಬುದನ್ನು ತಿಳಿಸಿಕೊಡುತ್ತೇವೆ. ಆ ಮೂಲಕ ಪ್ರತಿ ಮನೆಗೆ ಒಳ್ಳೆಯ ಸಂತಾನ ಭಾಗ್ಯ ಕರುಣಿಸುವ ನಿಟ್ಟಿನಲ್ಲಿ ನಮ್ಮ ಶಾಲೆ ಉತ್ತಮ ಸಂಸ್ಕಾರಯುತ ಶಿಕ್ಷಣ ವ್ಯವಸ್ಥೆಯನ್ನು ಒಳಗೊಂಡಿದೆ ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ವಿಶ್ವಭಾರತಿ ದಕ್ಷಿಣ ಮಧ್ಯ ಕ್ಷೇತ್ರಿಯ ಕಾರ್ಯದರ್ಶಿ ಆಯಾಚಿತುಲ ಲಕ್ಷ್ಮಣರಾವ್,ವಿದ್ಯಾಭಾರತಿ ದಕ್ಷಿಣ ಮಧ್ಯ ಕ್ಷೇತ್ರಿಯ ಶಿಶುವಾಟಿಕ ಪ್ರಮುಖ್ ಕೋವಿಲ ಶ್ರೀನಿವಾಸಚಾರ್ಯ, ಕೇಶವಕೃಪ ಸಂವರ್ಧನಾ ಸಮಿತಿ ಉಪಾಧ್ಯಕ್ಷ ಹರೀಶ್, ಮುಖಂಡರಾದ ಎಸ್.ವೈ ಅನಿಲ್ ರೆಡ್ಡಿ, ರಾಜಶೇಖರ್‌ರೆಡ್ಡಿ, ಹುಲ್ಲಹಳ್ಳಿ ಶ್ರೀನಿವಾಸ್, ಎಸ್.ವಿ ಭರತ್ ಗೌಡ, ಮುರಳಿ ಕೃಷ್ಣ, ಎಸ್.ಆರ್ ಗೋಪಾಲ್ ರೆಡ್ಡಿ, ಗಣೇಶ್, ಡಾ.ಪರಮೇಶ್, ಶಿವಕುಮಾರ್ ಹಾಗೂ ಮತ್ತಿರರು ಹಾಜರಿದ್ದರು.

# 17.50 ಲಕ್ಷ ಮೌಲ್ಯದ ಗಾಂಜಾ ವಶ

**ಚಿಕ್ಕಬಳ್ಳಾಪುರ:** ಜಿಲ್ಲೆಯ ಚಿಂತಾಮಣಿ ಸೆನ್ ಪೊಲೀಸರು ಖಚಿತ ಮಾಹಿತಿ ಮೇರೆಗೆ ಮಂಗಳವಾರ ರಾತ್ರಿ 10 ಗಂಟೆಗೆ ತಾಲೂಕಿನ ಮಾಡಿಕೇರಿ ಕ್ರಾಸ್‌ನಲ್ಲಿ ದಾಳಿ ನಡೆಸಿ ಐದು ಜನ ಆರೋಪಿಗಳನ್ನು ಬಂಧಿಸಿ ಅವರಿಂದ 17.50 ಲಕ್ಷ ಮೌಲ್ಯದ ಗಾಂಜಾ ವಶಪಡಿಸಿಕೊಂಡಿದ್ದಾರೆ. ಅಲ್ಲದೆ ಈ ಪ್ರಕರಣಕ್ಕೆ ಸಂಬಂಧ ಒಂದೇ ಕುಟುಂಬದ ಮೂರು ಜನ ಸೇರಿದಂತೆ ಐದು ಮಂದಿಯನ್ನು ಬಂಧಿಸಲಾಗಿದೆ ಎಂದು ಎಸ್ಪಿ ಕುಶಲ್ ಚೌಕ್ಸಿ ತಿಳಿಸಿದರು.

ನಗರದ ಸೆನ್ ಪೊಲೀಸ್ ಠಾಣೆಯಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಆಂಧ್ರಪ್ರದೇಶದ ವಿಶಾಖಪಟ್ಟಣನಿಂದ ಶ್ರೀನಿವಾಸಪುರ– ಚಿಂತಾಮಣಿ ಮಾರ್ಗದಲ್ಲಿ ಮಹೀಂದ್ರ ಎಸ್ ಯುವಿ ವಾಹನದಲ್ಲಿ ಗಾಂಜಾ ಸಾಗಿಸಿಕೊಂಡು ಬರುತ್ತಿರುವ ಬಗ್ಗೆ ಖಚಿತ ಮಾಹಿತಿ ಮೇರೆಗೆ ಚಿಂತಾಮಣಿಯ ಸೈಬರ್ ಮತ್ತು ಆರ್ಥಿಕ ಹಾಗೂ ಮಾದಕ ದ್ರವ್ಯ ಇಲಾಖೆ ಪೊಲೀಸರು ವಾಹನವನ್ನು ತಪಾಸಣೆ ನಡೆಸಿ ಸುಮಾರು 35.5 ಕೆಜಿ ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ. ಅಲ್ಲದೆ ಈ ಗಾಂಜಾ ಸಾಗಿಸಲು ಬಳಕೆ ಮಾಡಿದ ಮಹೀಂದ್ರ ಎಸ್ ಯುವಿ 500 ವಾಹನ ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ ಎಂದರು.

ಸಿಇಎನ್ ವಿಭಾಗದ ಡಿವೈಎಸ್ಪಿ ರವಿಕುಮಾರ್ ಹಾಗೂ ಸಿಬ್ಬಂದಿ ನೇತೃತ್ವದಲ್ಲಿ ದಾಳಿ ನಡೆಸಲಾಗಿದೆ. ಬಂಧಿಸಿದ ಆರೋಪಿಗಳು ಬಾಗೇಪಲ್ಲಿ ತಾಲ್ಲೂಕಿನ ಗಂಗಿರೆಡ್ಡಿ ಪಾಳ್ಯದ ದೇವಮ್ಮಕೋಂ ವೆಂಕಟರವಣಪ್ಪ(38), ಆದಿನಾರಾಯಣ ಬಿನ್ ನಾರಾಯಣಪ್ಪ(26), ಅಂಜಿ ಬಿನ್ ವೆಂಕಟರವಣಪ್ಪ(18), ಬಾಗೇಪಲ್ಲಿ ತಾಲ್ಲೂಕಿನ ಪಲ್ಲಿಕುಂಟೆ ಗ್ರಾಮದ ಮಾರಪ್ಪ ಬಿನ್ ಲೇಟ್ ನಾರಾಯಣಪ್ಪ (63) ಮತ್ತು ಆಂಧ್ರದ ಅನ್ನಮಯ್ಯ ಜಿಲ್ಲೆಯ ಮದನಪಲ್ಲಿ ಮಂಡಲ್ ಚಿಂತಮಾಕಲಪಲ್ಲಿ ಗ್ರಾಮದ ವೆಂಕಟರಮಣ ಬಿನ್ ವೆಂಕಟಪ್ಪ (24) ಎಂದು ಹೇಳಿದರು.

ಚಿಕ್ಕಬಳ್ಳಾಪುರ ಜಿಲ್ಲೆಯ ಎಸ್‌ಪಿ. ಕುಶಲ್ ಚೌಕ್ಸಿ ,ಆಡಿಷನಲ್ ಎಸ್‌ಪಿ ರಾಜಾ ಇಮಾಮ್ ಕಾಸಿಂ.ಪಿ, ರವರಿಗೆ ಸಿಕ್ಕ ಖಚಿತ ಮಾಹಿತಿ ಮೇರೆಗೆ ಅವರ ಮಾರ್ಗದರ್ಶನದಲ್ಲಿ ಸಿ.ಇ.ಎನ್ ಪೊಲೀಸ್ ಠಾಣೆಯ ಡಿ.ವೈ.ಎಸ್.ಪಿ ರವಿಕುಮಾರ್ ಕೆ.ವೈ, ಪೊಲೀಸ್ ಇನ್ಸ್‌ಪೆಕ್ಟರ್ ಎಂ. ಸೂರ್ಯಪ್ರಕಾಶ್ ಹಾಗೂ ಸಿಬ್ಬಂದಿರುವವರಾದ ವಿ.ಸುಬ್ರಮಣಿ, ಕೃಷ್ಣಪ್ಪ ಅಂಬರೀಶ್, ನಾಹಾರುಣಸ್ವಾಮಿ, ಜವರಪ್ಪ ಪರನಾಗಿ,ಬಾರೇಶವಲ್ಲಿ, ಬಾಲಾಜಿ, ಭಾಗ್ಯಮ್ಮ, ಮಹಬೂಬ್ ಬಾಷ ರವರ ತಂಡ ಈ ಕಾರ್ಯಾಚರಣೆ ನಡೆಸಿದೆ. ಚಿಂತಾಮಣಿಯ ಸೆನ್ ಪೊಲೀಸರ ಕಾರ್ಯಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಲ್ ಚೌಕ್ಸಿ ಮತ್ತು ಅಡಿಷನಲ್ ಎಸ್ಪಿ ರಾಜಾ ಇಮಾಮ್ ಕಾಸಿಂ ಪಿಪ್ರಶಂಸೆ ವ್ಯಕ್ತಪಡಿಸಿದ್ದಾರೆ.



# ಕಲೆಯ ಅವಿಸ್ಮರಣೀಯ ಪ್ರದರ್ಶನ

**ಬೆಂಗಳೂರು:** ನೃತ್ಯ ದಿಶಾ ಟ್ರಸ್ಟ್ ಆಯೋಜಿಸಿದ್ದ ನೃತ್ಯ ಸಂಭ್ರಮ– 2025ರಲ್ಲಿ ಭರತನಾಟ್ಯ, ಶಾಸ್ತ್ರೀಯ ಹಾಗೂ ಜನಪದ ಸಂಗೀತ, ಜನಪದ ನೃತ್ಯ, ಸರಸ್ವತಿ, ದೇವಿ ಹಾಗೂ ವಿಶೇಷವಾಗಿ ಪುಣ್ಯಕೋಟಿ ನೃತ್ಯ ರೂಪಕಗಳು ನೋಡುಗರನ್ನು ಮನರಂಜಿಸಿತು.



ನಗರದ ಕಲಾಗ್ರಾಮದಲ್ಲಿ ನೃತ್ಯ ದಿಶಾ ಟ್ರಸ್ಟ್ ಫೆ.19ರಂದು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಕಲಾ ತಂಡಗಳು ಪ್ರದರ್ಶಿಸಿದ ಅಷ್ಟಲಕ್ಷ್ಮಿ, ಗಣೇಶ, ಲಕ್ಷ್ಮಿ, ಪಾರ್ವತಿಯ ಅನೇಕ ನೃತ್ಯ ಹಾಗೂ ನೃತ್ಯರೂಪಕ ಕಾರ್ಯಕ್ರಮಗಳು, ಏಕವ್ಯಕ್ತಿ ಭರತನಾಟ್ಯ ಪ್ರದರ್ಶನವನ್ನು ನಾಟ್ಯವಿಶಾರದೆ ಕು॥ ಸಹನಾ ಹೊಸಮನೆ ಹಾಗೂ ಕು॥ ಸ್ಫೂರ್ತಿ ಶ್ರೀಧರ್ ನಡೆಸಿಕೊಟ್ಟರು. ಜನಪದ ತಂಡಗಳ ಕಲಾ ಪ್ರದರ್ಶನ ಪ್ರೇಕ್ಷಕರಿಗೆ ಕಲಾ ಸಂಸ್ಕೃತಿಯನ್ನು ಪರಿಚಯಿಸಿತು.

ಈ ನೃತ್ಯ ಹಬ್ಬದಲ್ಲಿ ಅನೇಕ ನೃತ್ಯ ಭಾನಿಗಳಿಗೂ ಹಾಗೂ ವಾಗ್ಗೇಯಕಾರರಿಗೂ ಅರ್ಪಣೆ ಸಲ್ಲಿಸಲಾಗಿತ್ತು. ಕಾಲ ಮಾಯೆ ನೃತ್ಯ ಶಾಲೆಯ ಸಂಸ್ಥಾಪಕರು ವಿದುಷಿ ಲತಾ ಶಂಕರ ಅವರು ಉದ್ಘಾಟಿಸಿ ನೃತ್ಯ ದಿಶಾ ಸಂಸ್ಥೆ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ತಲುಪಿಸುತ್ತಿದೆ ಎಂದು ತಿಳಿಸಿದರು. ಹಿರಿಯ ಸಹಾಯಕ ನಿರ್ದೇಶಕರಾದ ಎಂ ಬಿ ಅರುಂಧತಿ ಹಾಗೂ ರ ಂ ಗ ಸ್ವಾ ಮಿ ಂ ು ಂ ವ ರ ು ಕಾರ್ಯಕ್ರಮದ ವಿಶೇಷತೆಯನ್ನು ಪ್ರಶಂಸಿಸಿದರು. ನೃತ್ಯ ಸಂಭ್ರಮ ಆಯೋಜನೆ ಮಾಡಿದ ನೃತ್ಯ ದಿಶಾ ಸಂಸ್ಥೆಗೆ ಹಾಗೂ ಗುರು ಡಾ॥ ದರ್ಶಿನಿ ಮಂಜುನಾಥ್ ಅವರಿಗೆ ನೆರೆದಿದ್ದ ಗಣ್ಯರು, ಕಲಾ ಪೋಷಕರು ಅಭಿನಂದಿಸಿದರು.

# ಸಾಧಕರ ಬದುಕನ್ನು ಆದರ್ಶವಾಗಿಸಿಕೊಂಡು ಗಮನವಿಟ್ಟು ಓದಿ

**ಚಿಕ್ಕಬಳ್ಳಾಪುರ:** ಓದಿನ ಸಮಯದಲ್ಲಿ ಕನಸುಗಳಿಗೆ ಕೊಳ್ಳಿಯಿಟ್ಟು ಸುಖಕ್ಕೆ ಮನಸ್ಸುಕೊಟ್ಟು ನಿರುಮ್ಮಳವಾಗಿ ಮಲಗಿ ನಿದ್ರಿಸಿದರೆ ನಿಮ್ಮ ಭವಿಷ್ಯವೂ ಕತ್ತಲಾಗಲಿದೆ. ಹೀಗಾಗಬಾರದು ಎಂದಿದ್ದರೆ ಸಾಧಕರ ಬದುಕನ್ನು ಆದರ್ಶವಾಗಿಸಿಕೊಂಡು ಗಮನವಿಟ್ಟು ಓದಿ, ನೀವು ನೀವಾಗಲು ಪ್ರಯತ್ನಿಸಿ ಎಂದು ಶಾಸಕ ಪ್ರದೀಪ್ ಈಶ್ವರ್ ತಿಳಿಸಿದರು.

ನಗರದ ಎಂ.ಜಿ ರಸ್ತೆಯ ಸರಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳೇ ನಾವು ದಿನನಿತ್ಯ ಬಳಸುವ ವಸ್ತುಗಳಿಗೆ ಇಂತಿಷ್ಟು ದಿನಗಳಲ್ಲಿ ಮಾತ್ರ ಬಳಸಿ ಎಂದು ಗಡುವಿರುತ್ತದೆ.ಇಲ್ಲದಿದ್ದರೆ ಅವು ಹಾಳಾಗುತ್ತವೆ.ಮನುಷ್ಯರಾದ ನಾವು ಯಾಕೆ ಸುಂದರವಾದ ಭವಿಷ್ಯ ರೂಪಿಸಿಕೊಳ್ಳಲು ಗಡುವು ವಿಧಿಸಿಕೊಳ್ಳುವುದಿಲ್ಲ.ಬೆಳಿಗ್ಗೆ ಕಂಡ ಕನಸು ಸಂಜೆಗೆ ಸಾಯುವಂತೆ ಆಗಬಾರದು. ಬದಲಿಗೆ ವಯಸ್ಸಿದ್ದಾಗಲೇ ಸಾಧನೆ ಸಂಪಾಧನೆ ಮಾಡಬೇಕು.ಇಲ್ಲದಿದ್ದರೆ ಇಳಿಗಾಲದಲ್ಲಿ ಬೀದಿಗೆ ಬೀಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಅನುಕರಣೆ ಮತ್ತು ಹೋಲಿಕೆ ತುಂಬಾ ಅಪಾಯಕಾರಿ.ನೀವು ರಜನೀಕಾಂತ್ ಅವರಂತೆ ಆಗಲು ಸಾಧ್ಯವೇ ಇಲ್ಲ.ಅವರೇ ಅಲ್ಲ ಯಾರೂ ಕೂಡ ಇನ್ನೊಬ್ಬರಂತೆ ಆಗಲು ಸಾಧ್ಯವಿಲ್ಲ.ನಾವು ನಾವೇ ಆಗಬೇಕು.ಇದಾಗಬೇಕಾದರೆ ನಮ್ಮ ಶಕ್ತಿ ಮತ್ತು ದೌರ್ಬಲ್ಯಗಳ ಮೇಲೆ ನಮಗೆ ನಂಬಿಕೆಯಿರಬೇಕು. ಏನಾಗಬೇಕು ಎಂಬ ಬಗ್ಗೆ ಸ್ಪಷ್ಟತೆಯಿರಬೇಕು ಎಂದರು.

ನೀವೂ ಧೈರ್ಯವಾಗಿರಿ, ಅಪ್ಪ ಅಮ್ಮನಿಗೂ ದೈರ್ಯವಾಗಿರುವಂತೆ ಹೇಳಿ, ಕೋಟಿ ಕೋಟಿ ಸಾಲ ಮಾಡಿದ ದೊಡ್ಡ ದೊಡ್ಡ ಶ್ರೀಮಂತರು ವಿದೇಶದಲ್ಲಿ ಐಶಾರಾಮಿ ಬದುಕು ಬದುಕುತ್ತಿರಬೇಕಾದರೆ,ಸಣ್ಣಪುಟ್ಟ ಸಾಲ ಮಾಡಿರುವ ನಮ್ಮವರು ಸಾಲಕ್ಕೆ ಹೆದರಿ ಪ್ರಾಣಬಿಡುವುದು ತಪ್ಪು.ಸಾಲಪಡೆದವರು ಭಯಪಡಬೇಕಿಲ್ಲ, ಸಾಲಕೊಟ್ಟವ ಭಯಪಡಬೇಕು. ಮನೆಯ ಬಳಿ ಬರುವ ಅವರಿಗೆ ಇಂದಲ್ಲ ನಾಳೆ ಸಾಲತೀರಿಸುತ್ತೇನೆ ಎಂದು ಹೇಳಿ ಎಂದರು.ನಿಮಗೆ ಗೊತ್ತಿರುವ ಭಾಷೆಯಲ್ಲಿಯೇ ದೈರ್ಯವಾಗಿ ಮಾತನಾಡಿ.ನಿಮ್ಮ ಭಾಷೆಯೇ ಸಮಾಜದಲ್ಲಿ ನಿಮಗೊಂದು ವ್ಯಕ್ತಿತ್ವ ಕೊಡಲಿದೆ.ನೆಗೆಟೀವ್ ಚಿಂತನೆ ದೂರಮಾಡಿ, ಪಾಸಿಟಿವ್ ಚಿಂತನೆ ಬೆಳೆಸಿಕೊಳ್ಳಿ.ವಿದ್ಯಾರ್ಥಿ ಜೀವನವೇ ಸುಂದರವಾದದ್ದು.ಅದನ್ನು ಹಾಳು ಮಾಡಿಕೊಳ್ಳದೆ ಆಸ್ತಿಯಾಗಿಸಿಕೊಳ್ಳಿ ಎಂದು ಹೇಳಿದರು.

ಸಾವು ಎಲ್ಲಾ ಸಮಸ್ಯೆಗಳಿಗೂ ಪ ರಿ ಹಾ ರ ವ ಲ್ಲ . ವ ು ಂ ು ರ್ಾ ದ ೆ ಗ ೆ ಅಂಜುವವರಿಗೆ ಒಂದು ಹೇಳುತ್ತೇನೆ.ಅದು ಇಲ್ಲವೇ ಇಲ್ಲ.ಹುಸಿ ಭ್ರಮೆಗಳಲ್ಲಿ ಸುತ್ತುತ್ತಾ ಬದುಕು ಹಾಳು ಮಾಡಿಕೊಳ್ಳಬೇಡಿ.ನಾನು ಚುನಾವಣೆಗೆ ನಿಂತಾಗ ನೀನು ಗೆಲ್ಲುವುದಿಲ್ಲ ಎಂದು ಹೇಳಿದವರೇ ಹೆಚ್ಚು. ಆದರೆ ನನ್ನ ಮನಸ್ಸು ಹೇಳುತ್ತಿತ್ತು,ನೀನು ಗೆಲ್ಲುತ್ತೀಯಾ ಮುನ್ನುಗ್ಗು ಎಂದು. ಈಗ ನಾನು ಶಾಸಕನಾಗಿ ಜನಸೇವೆ ಮಾಡುತ್ತಿಲ್ಲವೆ? ನೀವೂ ಕೂಡ ಆಶಾವಾದಿಗಳಾಗಿ, ನಿಮ್ಮನ್ನು ನೀವು ಪ್ರೀತಿಸಿ ಜಗತ್ತು ನಿಮ್ಮ ಕಾಲಡಿಯಲ್ಲಿರಲಿದೆ ಎಂದು ವಿದ್ಯಾರ್ಥಿಗಳಿಗೆ ಬದುಕಿನ ಪಾಠ ಹೇಳಿದರು.ಈ ಸಂದರ್ಭದಲ್ಲಿ ಪ್ರಾಂಶುಪಾಲ ಡಾ.ಮುನಿರಾಜು, ಪ್ರೊ.ನಾಗರಾಜ್, ಡಾ.ರಂಗಪ್ಪ, ಮಾಜಿ ಶಾಸಕ ಎಂ.ಶಿವಾನಂದ್, ಸಂದೀಪ್ ಚಕ್ರವರ್ತಿ,ವೆಂಕಟ್, ಪೆದ್ದನ್ನ,ನಾಗಭೂಷಣ್ ಮತ್ತು ಇತರರು ಇದ್ದರು.




# ಅನಧಿಕೃತ ಬಡಾವಣೆಗಳಿಗೆ ಬ್ರೇಕ್ ಮೂರು ತಿಂಗಳು ವಿಶೇಷ ಅಭಿಯಾನ



**ಮಾಲೂರು:** ರಾಜ್ಯದಲ್ಲಿ ಬಹುಕಾಲದ ಸಮಸ್ಯೆ ಎನಿಸಿರುವ ಅನಧಿಕೃತ ಬಡಾವಣೆಗಳಿಗೆ ಬ್ರೇಕ್ ಹಾಕಿ, ಒನ್‌ಟೈಂ ಪರಿಹಾರ ಕೈಗೊಳ್ಳಲು ತೀರ್ಮಾನಿಸಿರುವ ರಾಜ್ಯ ಸರಕಾರ ಮುಂದಿನ ಮೂರು ತಿಂಗಳು ವಿಶೇಷ ಅಭಿಯಾನದ ಮೂಲಕ ಬಿ–ಖಾತಾ ಹಂಚಿಕೆ ಮಾಡಲು ತೀರ್ಮಾನಿಸಲಾಗಿದೆ ಎಂದು ಶಾಸಕ ಕೆ.ವೈ.ನಂಜೇಗೌಡ ಹೇಳಿದರು.

ಪಟ್ಟಣದ ಪುರಸಭಾ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಬಿ.ಖಾತಾ ಯೋಜನೆಗೆ ಚಾಲನೆ ನೀಡಿ ಮಾತನಾಡಿದರು.

ರಾಜ್ಯದಲ್ಲಿ ತಲೆಎತ್ತಿರುವ ಅನಧಿಕೃತ ಬಡಾವಣೆಗಳ ಸಮಸ್ಯೆಯನ್ನು ಬಗೆಹರಿಸಿ ಬಿ–ಖಾತಾ ಮಾಡಿಸಿಕೊಳ್ಳಲು ಕಂದಾಯ ಇಲಾಖೆಯು ಬುಧವಾರದಿಂದ ವಿಶೇಷ ಅಭಿಯಾನ ಆರಂಭಿಸಿದೆ. ರಾಜ್ಯಾದ್ಯಂತ ವಿಸ್ತರಣೆಯಾಗಿದ್ದು, ಮುಂದಿನ ಮೂರು ತಿಂಗಳಲ್ಲಿ ರಾಜ್ಯದೆಲ್ಲೆಡೆ ಇರುವ ಖಾತಾ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ರಾಜ್ಯ ಸರಕಾರ ಮುಂದಾಗಿದೆ. ,

ಪುರಸಭೆ, ಪಟ್ಟಣ ಪಂಚಾಯಿತಿ, ಮುಖ್ಯಾಧಿಕಾರಿಗಳು, ಯೋಜನಾ ಪ್ರಾಧಿಕಾರದ ಅಧ್ಯಕ್ಷರು,

ನಿರ್ದೇಶಕರೊಂದಿಗೆ ಸಭೆ ನಡೆಸಿದ ಅವರು, ಪುರಸಭೆ, ಗ್ರಾ.ಪಂ.ವ್ಯಾಪ್ತಿಯ ಹಳ್ಳಿಗಳಲ್ಲಿರುವ ಅನಧಿಕೃತ ಬಡಾವಣೆಗಳಿಗೆ ಅಂತ್ಯ ಹಾಡುವಂತೆ ಸೂಚನೆ ನೀಡಿದರು. ಅನಧಿಕೃತ ಬಡಾವಣೆಗಳಿಗೆ ಅವಕಾಶವಿಲ್ಲದಂತೆ ಬಿ–ಖಾತಾ ನೀಡಬೇಕು. ಮುಂದಿನ 3 ತಿಂಗಳ ಒಳಗಾಗಿ ಅಭಿಯಾನದ ಮೂಲಕ ಖಾತಾ ವಿತರಣೆ ಕಾರ್ಯ ಪೂರ್ಣ ಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಅನಧಿಕೃತ, ರೆವಿನ್ಯೂ ಬಡಾವಣೆಗಳಲ್ಲಿ ಸೈಟು, ಮನೆ ಕಟ್ಟಿರುವವರಿಗೆ ತೊಂದರೆ ಆಗಬಾರದು. ಒಟ್ಟಾರೆಯಾಗಿ ಬಡವರು, ಮಧ್ಯಮ ವರ್ಗದವರಿಗೆ ಅನುಕೂಲ ಮಾಡಿಕೊಡಲು ಏಕಕಾಲಿಕ ಪರಿಹಾರ ನೀಡಲಾಗುತ್ತಿದೆ. ಗೊಂದಲಗಳಿಗೆ ಅವಕಾಶ ಮಾಡಿಕೊಡದಂತೆ ಇಂದಿನಿಂದಲೇ ಬಿ ಖಾತಾ ಅಭಿಯಾನವನ್ನು ಆರಂಭ ಮಾಡಿ 3 ತಿಂಗಳೊಳಗಾಗಿ ಪೂರ್ಣಗೊಳಿಸಿ.

ಅನಧಿಕೃತ ಬಡಾವಣೆ ತಲೆ ಎತ್ತದಂತೆ ಕ್ರಮವಹಿಸಿ: ರಾಜ್ಯ ಸರಕಾರ ಜಾರಿಗೊಳಿಸಿರುವ ಕಾಯಿದೆಯ ಮೂಲಕ ಅನಧಿಕೃತ ಬಡಾವಣೆಗಳು ಅಂತ್ಯಗೊಳ್ಳಲಿವೆ. ಇದನ್ನು ಅಧಿಕಾರಿಗಳು ಸ್ಪಷ್ಟವಾಗಿ ಅರ್ಥ ಮಾಡಿಕೊಂಡು ಕೆಲಸ ಮಾಡಬೇಕು. ಅನಧಿಕೃತ ಬಡಾವಣೆಗಳಿಂದ ಕಂದಾಯ ಬರುತ್ತಿಲ್ಲ. ಪರಿಣಾಮ ಜನರಿಗೆ ನಾಗರಿಕ ಸವಲತ್ತುಗಳೂ ಸಿಗುತ್ತಿಲ್ಲ, ಸ್ಥಳೀಯ ಸಂಸ್ಥೆಗಳಿಗೆ ಆದಾಯವೂ ಬಂದ್ ಆಗಿದೆ. ಇವೆಲ್ಲಾ ಅನನುಕೂಲಗಳಿಗೂ ಅಂತ್ಯ ಹಾಡಬೇಕಿದೆ ಎಂದು ಎಚ್ಚರಿಸಿದರು.

ಕಂದಾಯ ಕಟ್ಟದಿರುವುದರಿಂದ ಸಮಸ್ಯೆಗಳು ಹೆಚ್ಚಾಗುತ್ತಿವೆ. ಈ ಬಾರಿ ಒಂದು ಬಾರಿ ಬಿ ಖಾತಾ ಕೊಟ್ಟು ಅನಧಿಕೃತ ಬಡಾವಣೆಗಳಿಗೆ ಅಂತ್ಯ ಹಾಡಬೇಕು. ಇದು ಕೊನೆಯ ಅವಕಾಶವಾಗಿರಬೇಕು ಎಂದು ಸ್ಪಷ್ಟಪಡಿಸಿದರು. ಎಲ್ಲ ಅಧಿಕಾರಿಗಳಿಗೂ ಮೂರು ತಿಂಗಳು ಮಾತ್ರ ಸಮಯ ನೀಡಲಾಗುವುದು. ಅಷ್ಟರೊಳಗೆ ಅಭಿಯಾನ ನಡೆಸಿ ಖಾತಾ ವಿತರಣೆಯನ್ನು ಪೂರ್ಣಗೊಳಿಸಬೇಕು. ಇದರಲ್ಲಿ ಯಾವುದೇ ರಾಜಿ ಇಲ್ಲ. ಒಂದು ವೇಳೆ ಅಧಿಕಾರಿಗಳು ರಾಜಿ ಮಾಡಿಕೊಂಡರೂ ಸಹಿಸುವುದಿಲ್ಲ ಎಂದು ಸ್ಪಷ್ಟವಾಗಿ ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಎಂ.ವಿ.ರೂಪ, ಮುಖ್ಯಾಧಿಕಾರಿ ಪ್ರದೀಪ್,ಪುರಸಭಾ ಅಧ್ಯಕ್ಷೆ ಕೋಮಲ, ಸ್ಥಾಯಿ ಸಮಿತಿ ಅಧ್ಯಕ್ಷ ಎ.ರಾಜಪ್ಪ, ಯೋಜನಾ ಪ್ರಾಧಿಕಾರದ ಅಧ್ಯಕ್ಷ ಮುಹಮ್ಮದ್ ನಯೀಂ, ಪುರಸಭಾ ಸದಸ್ಯರಾದ ಎನ್.ವಿ.ಮುರಳೀಧರ್, ವಿಜಯಲಕ್ಷ್ಮಿ, ಪದ್ಮಾವತಿ, ಭಾರತಮ್ಮ,ಇಂತಿಯಾಜ್, ವೆಂಕಟೇಶ್, ಸೇರಿದಂತೆ ಅಧಿಕಾರಿಗಳು, ಹಾಜರಿದ್ದರು.

# ವಿದ್ಯಾರ್ಥಿಗಳ ಓದು ಬರಹ ಪ್ರತಿಭೆಯ ಪ್ರತಿಬಿಂಬವಾಗಬೇಕು

ಶಿಡ್ಲಘಟ್ಟ : ವಿದ್ಯಾರ್ಥಿಗಳ ಓದು ಬರಹ ಪ್ರತಿಭೆಯ ಪ್ರತಿಬಿಂಬವಾಗಬೇಕು, ಕಿರಿಯ ವಿದ್ಯಾರ್ಥಿಗಳಿಗೆ ಮಾದರಿ ಹಾಗೂ ಪ್ರೇರಣಾ ದಿನದಂತೆ ವಾರ್ಷಿಕೋತ್ಸವ ಆಚರಣೆಯಾಗಬೇಕು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಕ್ಷೇತ್ರ ಸಮನ್ವಯ ಅಧಿಕಾರಿ ಲಕ್ಷ್ಮೀನಾರಾಯಣ್ ತಿಳಿಸಿದರು.

ತಾಲ್ಲೂಕಿನ ತುಮ್ಮನಹಳ್ಳಿ ಕ್ಲಸ್ಟರ್ ವ್ಯಾಪ್ತಿಯ ಕನ್ನಮಂಗಲ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವದ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಶಾಲಾ ವಾರ್ಷಿಕೋತ್ಸವಗಳು ಕೇವಲ ಶೈಕ್ಷಣಿಕ ವರ್ಷದ ಕಡೆಯ ದಿನದ ಕಾರ್ಯಕ್ರಮ ಆಗಬಾರದು, ಅಲ್ಲದೆ ನೃತ್ಯ ಸಾಂಸ್ಕೃತಿಕ ಕಾರ್ಯಕ್ರಮದ ವೇದಿಕೆ ಕಾರ್ಯಕ್ರಮಕ್ಕೆ ಸೀಮಿತವಾಗಬಾರದು ಎಂದು ಹೇಳಿದರು.

ಕನ್ನಮಂಗಲ ಶಾಲೆ ಇತರೆ ಶಾಲೆಗಳಿಗೆ ಮಾದರಿಯಾಗಿದೆ. ಗ್ರಾಮಸ್ಥರ ಪಾಲ್ಗೊಳ್ಳುವಿಕೆ ಇತರರಿಗೂ ಪ್ರೇರಣೆಯಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಈ ವೇಳೆ ಶಾಲಾ ಮಕ್ಕಳಿಂದ ನೃತ್ಯ, ಹಾಡುಗಾರಿಕೆ ಇನ್ನಿತರೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ನಾನಾ ಚಟುವಟಿಕೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಈ ಸಂದರ್ಭದಲ್ಲಿ ಎಸ್‌ಡಿಎಂಸಿ ಅಧ್ಯಕ್ಷೆ ಮಂಜುಳಮ್ಮ, ಮುಖ್ಯ ಶಿಕ್ಷಕ ಕೆ.ಶ್ರೀನಿವಾಸ್, ಸಹಶಿಕ್ಷಕ ಶಿವಶಂಕರ್, ಮಂಜುಳಾದೇವಿ, ಸುನೀತಾ ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಮಂಜುನಾಥ್, ಸ್ನೇಹ ಯುವಕರ ಸಂಘದ ಅಧ್ಯಕ್ಷ ವಸಂತ ವಲ್ಲಭಕುಮಾರ್, ತುಮಕೂರು ವಿವಿ ಸಿಂಡಿಕೇಟ್ ಸದಸ್ಯ ದೇವರಾಜ್, ಎಸ್ ಡಿಎಂಸಿ ಉಪಾಧ್ಯಕ್ಷ ಸುಬ್ರಮಣಿ, ಗ್ರಾಪಂ ಸದಸ್ಯ ವೆಂಕಟೇಶಪ್ಪ, ರೈತ ಸಂಘದ ವಾಸುದೇವ್, ಮುಖ್ಯ ಶಿಕ್ಷಕಿ ಸರಸ್ವತಿ, ಗ್ರಾಮದ ಮುಖಂಡ ಶ್ರೀನಿವಾಸರಾವ್, ಸುಭಾಷ್ ಕ್ರಿಕೆಟ್ ಬಳಗದ ಸದಸ್ಯರು ಹಾಜರಿದ್ದರು.





**ಕೋಲ್ಹಾರ ಪಟ್ಟಣದ ತಹಶೀಲ್ದಾರ ಕಾರ್ಯಾಲಯದಲ್ಲಿ ಸಂತ ಕವಿ ಸರ್ವಜ್ಞನವರ ಜಯಂತಿ ಯನ್ನು ಸಮಾಜದ ಮುಂಖಡರೊಂದಿಗೆ ಆಚರಿಸಲಾಯಿತು. ಈ ಸಂದರ್ಭದಲ್ಲಿ ತಾಲ್ಲೂಕು ದಂಡಾಧಿಕಾರಿ ಎಸ್ ಎಸ್. ನಾಯಕಲ್ ಮಠ ಹಾಗೂ ಸಮಾಜದವರು ಮಾತನಾಡಿದರು. ಶಿರಸ್ತೇದಾರರಾದ ಕೃಷ್ಣಾ ಎಂ ಗುಡೂರ ನಿರೂಪಿಸಿ ವಂದಿಸಿದರು. ಶೇಕು ಈಟಿ, ನಾಗರಾಜ್‌ಕುಂಬಾರ, ಹಾಗೂ ಯುವಕರು ಉಪಸ್ಥಿತರಿದ್ದರು.**

# ಹಾನಗಲ್ ಪ್ರಸಿದ್ದಿಯಾಗಲು ಹಾನಗಲ್ ಕುಮಾರಸ್ವಾಮಿ ಕಾರಣ: ಬಸವರಾಜ ಬೊಮ್ಮಾಯಿ

**ಹಾವೇರಿ:** ಬಸವಾದಿ ಶರಣರ ತತ್ವಗಳು ಶಾಸ್ತ್ರತವಾಗಿ ಉಳಿಸುವ ಕೆಲಸವನ್ನು ಹಾನಗಲ್ ಕುಮಾರಸ್ವಾಮಿಗಳು ಮಾಡಿದ್ದಾರೆ. ಅವರ ಪುಣ್ಯಸ್ಮರಣೆ ಮಾಡುತ್ತಿರುವುದು ಸಾರ್ಥಕವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಅಭಿಪ್ರಾಯ ಪಟ್ಟಿದ್ದಾರೆ.

ಅವರು ಹಾನಗಲ್ ಪಟ್ಟಣದಲ್ಲಿ ಏರ್ಪಡಿಸಿದ್ದ ಲಿಂಗೈಕ್ಯ ಶ್ರೀ ಹಾನಗಲ್ ಕುಮಾರ ಮಹಾಶಿವಯೋಗಿಗಳ 95ನೇಯ ಪುಣ್ಯಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಕರ್ನಾಟಕದಲ್ಲಿ ಹಾನಗಲ್ ಹೆಸರು ಪ್ರಸಿದ್ಧಿಯಾಗಲು ಹಾನಗಲ್ ಕುಮಾರಸ್ವಾಮಿಗಳು ಕಾರಣ. ಇಂತಹ ಪುಣ್ಯ ಭೂಮಿಯಲ್ಲಿ ಹುಟ್ಟಿರುವ ನಾವೆಲ್ಲರೂ ಕರ್ತವ್ಯ ಮಾಡುವ ಅವಕಾಶ ಸಿಕ್ಕಿರುವುದು ನಾವೆಲ್ಲರೂ ಪುಣ್ಯವಂತರು ಎಂದರು.

ನಾವೆಲ್ಲ ನಮ್ಮ ಹುಟ್ಟಿನ ಬಗ್ಗೆ ಬಹಳ ಚಿಂತನೆ ಮಾಡುತ್ತೇವೆ. ಯಾರ ಹೊಟ್ಟೆಯಲ್ಲಿ ಹುಟ್ಟಿದ್ದೇವೆ. ಯಾವ ಸಮಾಜ, ಯಾರ ಮಕ್ಕಳು ಎಂದು ಯೋಚಿಸುತ್ತೇವೆ. ಅದರ ಆಧಾರದ ಮೇಲೆ ಸಮಾಜ ನಮ್ಮನ್ನು ಅಳೆಯುತ್ತದೆ. ನಾವು ಯಾರೂ ಅರ್ಜಿ ಕೊಟ್ಟು ಹುಟ್ಟಿಲ್ಲ. ಹುಟ್ಟು ಮತ್ತು ಸಾವು ಎರಡೂ ನಮ್ಮ ಕೈಯಲ್ಲಿ ಇಲ್ಲ. ಇದರ ಬಗ್ಗೆ ನಾವು ಚಿಂತನೆ ಮಾಡುತ್ತೇವೆ. ಬದುಕು ನಮ್ಮ ಕೈಯಲ್ಲಿ ಇದೆ. ಅದರ ಬಗ್ಗೆ ನಾವು ಚಿಂತನೆ ಮಾಡುವುದಿಲ್ಲ ಎಂದರು.

ವಿರಕ್ತರು ಎಂದರೆ ಸರ್ವ ಆಸೆ, ಆಮಿಷಗಳು, ಎಲ್ಲ ವಸ್ತುಗಳ ಮೇಲಿನ ವ್ಯಾಮೋಹವನ್ನು ತ್ಯಜಿಸಿದವರು ವಿರಕ್ತರು. ಕುಮಾರಸ್ವಾಮೀಜಿ ಅವರು ಅತ್ಯಂತ ದೊಡ್ಡ ಸಾಧನೆ ಮಾಡಿರುವ ಸಾಧಕರು. ಕೆಲವು ಯೋಗಿಗಳು ಇದ್ದರು. ಹಿಮಾಲಯಕ್ಕೆ ಹೋಗಿ ತಪಸ್ಸು ಮಾಡಿ, ಆಧ್ಯಾತ್ಮಿಕ ಚಿಂತನೆ ಮಾಡಿ ಧ್ಯಾನ ಮಾಡಿದವರು ಬಹಳ ಜನ ಇದ್ದಾರೆ. ಇನ್ನೂ ಅನೇಕರು ಅಲ್ಲಿಯೇ ಇದ್ದಾರೆ. ಅವರು ಸಮಾಜ, ದೇಶ ಎಲ್ಲವನ್ನೂ ತ್ಯಾಗ ಮಾಡಿ ಇಡೀ ಜೀವನವನ್ನು ಅಲ್ಲಿಯೇ ಕಳೆಯುತ್ತಾರೆ. ಆ ರೀತಿ ಸಾವಿರಾರು ಜನರು ಇದ್ದಾರೆ. ಆದರೆ, ಇದೇ ಸಮಾಜದಲ್ಲಿದ್ದು, ಸಂಸಾರದಲ್ಲಿದ್ದು, ಅದನ್ನು ಜಯಿಸಿ, ಕೆಸರಿನಲ್ಲಿ ಅರಳಿದ ಕಮಲದಂತೆ ತಮ್ಮ ಬದುಕನ್ನು ನಡೆಸಿರುವುದು ಹಿಮಾಲಯದಲ್ಲಿ ತಪಸ್ಸು ಮಾಡಿದವರಿಗಿಂತ ಶ್ರೇಷ್ಠ ಎಂದು ಹೇಳಿದರು.

ಸ್ವಾಮಿ ವಿವೇಕಾನಂದರು ರಾಮಕೃಷ್ಣ ಪರಮಪಂಸರಿಂದ ಶಿಕ್ಷಣ ಪಡೆದು ದೇವಿಯಿಂದ ಸಾಕ್ಷಾತ್ಕಾರ ಪಡೆದು ನನ್ನ ಜೀವನ ಸಾರ್ಥಕವಾಯಿತು ಎಂದು ಹೇಳಿದರು. ಅದಕ್ಕೆ ರಾಮಕೃಷ್ಣ ಪರಮಹಂಸರು ಸಾಕ್ಷಾತ್ಕಾರ ನಿನಗಷ್ಟೇ ಗೊತ್ತಾದರೆ ಏನು ಪ್ರಯೋಜನ ಅದರ




ಪ್ರಯೋಜನ ಜಗತ್ತಿಗೆ ಆದಾಗ ಮಾತ್ರ ಇನ್ನೊಂದು ಸಾಕ್ಷಾತ್ಕಾರ ಆಗುತ್ತದೆ ಎಂದರು. ಅದೇ ರೀತಿ ಹಾನಗಲ್ ಕುಮಾರಸ್ವಾಮಿಗಳು ಬಸವಾದಿ ಶರಣರ ತತ್ವವನ್ನು ಪ್ರಚಾರ ಮಾಡುವ ಸ್ವಾಮೀಜಿಗಳನ್ನು ಸೃಷ್ಟಿಸುವ, ಶರಣ ತತ್ವಗಳನ್ನು ಶಾಸ್ವತವಾಗಿ ಉಳಿಸುವ ಕೆಲಸವನ್ನು ಹಾನಗಲ್ ಕುಮಾರಸ್ವಾಮಿಗಳು ಮಾಡಿದ್ದಾರೆ. ಅವರ ಪುಣ್ಯಸ್ಮರಣೆ ಮಾಡುತ್ತಿರುವುದು ಸಾರ್ಥಕತೆ ಎಂದರು.

ಬದುಕು ಸಾರ್ಥಕ: ಬದುಕು ನಮ್ಮ ಕೈಯಲ್ಲಿದೆ ಅದರ ಬಗ್ಗೆ ಚಿಂತನೆ ಮಾಡುವುದಿಲ್ಲ. ನಮ್ಮ ಆತ್ಮಸಾಕ್ಷಿ ಎನ್ನುವುದು ಒಂದು ಇದೆ. ಭಗವಂತ ನನ್ನನ್ನು ಮಾನವನನ್ನಾಗಿ ಏಕೆ ಹುಟ್ಟಿಸಿದ ನನ್ನ ಹುಟ್ಟಿನ ಉದ್ದೇಶ ಎನ್ನುವುದನ್ನು ತಿಳಿದುಕೊಂಡರೆ ನಮ್ಮ ಬದುಕು ಬಹಳ ಶ್ರೀಮಂತವಾಗಿರುತ್ತದೆ. ನಮ್ಮ ಉದುಕಿನ ಉದ್ದೇಶ ಗೊತ್ತಿಲ್ಲದಿದ್ದರೆ ಏನೂ ಪ್ರಯೋಜನ ಇಲ್ಲ. ಬದುಕಿನ ಉದ್ದೇಶ ತಿಳಿದುಕೊಂಡವರ ಬದುಕು ಸಾರ್ಥಕವಾಗುತ್ತದೆ. ವಿದ್ಯಾರ್ಥಿ ಹೆಚ್ಚು ಅಂಕ ಪಡೆದಾಗ, ರಾಜಕಾರಣಿ ಗೆಲುವು ಸಾಧಿಸಿದಾಗ, ಹೆಣ್ಣು ಮಕ್ಕಳು ಬಂಗಾರ ತೆಗೆದುಕೊಂಡಾಗ ಯಶಸ್ಸು ಎನ್ನುತ್ತಾರೆ. ಆದರೆ, ಅದು ಯಶಸ್ಸು ಅಲ್ಲ. ಸ್ವಾಮಿ ವಿವೇಕಾನಂದರು ಸಾವಿನ ನಂತರ ಬದುಕುವವ ಸಾಧಕ ಎಂದು ಹೇಳಿದ್ದಾರೆ. ಹುಟ್ಟು ಮತ್ತು ಸಾವು ಪರಸ್ಪರ ವಿರೋಧಾಭಾಸದ ಶಬ್ದಗಳು ಅಲ್ಲ. ಬದುಕಿನಲ್ಲಿ ಹುಟ್ಟು ಹೇಗೆ ಒಂದು ಭಾಗವೋ ಸಾವು ಕೂಡ ಒಂದು ಭಾಗ, ಸಾವು ಒಂದು ಅಲ್ಪ ವಿರಾಮ. ನಾವು ಇನ್ನೊಬ್ಬರ ನೋವಿನಲ್ಲಿ ಭಾಗಿಯಾಗಿ ಪರೋಪಕಾರಿ ಕೆಲಸ ಮಾಡಿಕೊಂಡು ಬಂದರೆ ಜನರು ನಮ್ಮನ್ನು ಸಾವಿನ ನಂತರೂ ನೆನಪಿಡುತ್ತಾರೆ. ಅವರ ಬದುಕನ್ನು ತಿಳಿದುಕೊಳ್ಳುವ ಕೆಲಸವನ್ನು ನಾವು ಮಾಡಬೇಕು. ಅವರ ಬದುಕನ್ನು ತಿಳಿದುಕೊಂಡವರಿಗೆ ಅವರಿಗೆ ಅರಿವಿನ ಗುರುವಿನ ದರ್ಶನವಾಗುತ್ತದೆ ಎಂದರು.

ಹಸಿವು ದೇವರು ಕೊಟ್ಟ ಶಾಪ ಅಂತ ತಿಳಿದುಕೊಳ್ಳುತ್ತೇವೆ. ಯಾರಿಗೂ ಹಸಿವೇ ಇಲ್ಲದಿದ್ದರೆ ಬೆಳವಣಿಗೆ ಆಗುತ್ತಿರಲಿಲ್ಲ. ಹಸಿವು ಇರುವುದರಿಂದ ಮನುಷ್ಯ ಬೌದ್ಧಿಕವಾಗಿ ವಿಕಾಸ ಆಗುತ್ತಾನೆ. ಹೊಸ ಹೊಸ ಆಲೋಚನೆ ಬರುತ್ತವೆ. ಹೀಗಾಗಿ ಹಸಿವು ದೇವರು ಕೊಟ್ಟ ವರ, ಅದೇ ರೀತಿ ಅರಿವು ಇಲ್ಲದಿದ್ದರೆ ನಮಗೆ ಪ್ರಾಣಿಗಳಿಗೆ ವ್ಯತ್ಯಾಸ ಇರುತ್ತಿರಲಿಲ್ಲ. ಇನ್ನು ಮರೆವು ಇರದಿದ್ದರೆ ಈ ಜಗತ್ತು ನಕಾರಾತ್ಮಕವಾಗಿ ಅಶಾಂತಿಯಿಂದ ಕೂಡಿರುತ್ತಿತ್ತು. ಮರೆವಿನಿಂದ ಪ್ರತಿದಿನ ಹೊಸ ಚಿಂತನೆ ಬರುತ್ತದೆ. ಹೊಸ ಆಶಾಕಿರಣ ಬರುತ್ತದೆ. ಸಾವೇ ಇರದಿದ್ದರೆ ಭೂಮಿ ಮೇಲೆ ಜನ ತುಂಬಿ ತುಳುಕುತ್ತಿತ್ತು. ಹೀಗಾಗಿ ಸಾವು ದೇವರು ಕೊಟ್ಟ. ಮಾನವ ಸಂತತಿ ಪುನರಾವರ್ತಿತ ಆಗುತ್ತದೆ ಎಂದರು.

ಬದುಕಿನಲ್ಲಿ ಎರಡನ್ನು ನಾವು ಕಾಯ್ದುಕೊಂಡು ಹೋಗುವುದು ಬಹಳ ಕಷ್ಟ ಒಂದು ಮುಗ್ಧತೆ ಅದನ್ನು ಕಾದುಕೊಂಡು ಹೋಗುವುದು ಕಷ್ಟ ಮಕ್ಕಳಲ್ಲಿ ಇರುವ ಮುಗ್ಧತೆಯನ್ನು ಯಾರು ಕಾಪಾಡಿಕೊಂಡು ಹೋಗುತ್ತಾರೋ ಅವರೇ ಯೋಗಿಗಳು, ಮಹಾಪುರುಷರು. ಕಲ್ಮಶ ಇಲ್ಲದಿರುವ ಸ್ವಚ್ಛಂದವಾದ ಮನಸ್ಸು ಮುಗ್ಧವಾಗಿರುತ್ತದೆ. ಇನ್ನೊಂದು ಆತ್ಮಸಾಕ್ಷಿಯಿಂದ ನಡೆದುಕೊಳ್ಳುವುದು ಕಷ್ಟ. ಆದರೆ, ಕೆಲವರು ಆ ಸಾಧನೆಯನ್ನು ಮಾಡುತ್ತಾರೆ. ಸತ್ಯವನ್ನು ಹೇಳಿ ಯಾರು ಆತ್ಮಸಾಕ್ಷಿಯಾಗಿ ನಡೆದುಕೊಳ್ಳುತ್ತಾರೋ ಅವರು ಯೋಗಿಗಳು. ಈ ಪುಣ್ಯ ನಾಡಿನಲ್ಲಿ ಪುಣ್ಯಪುರುಷರ ನೆನಪಿಸಿಕೊಳ್ಳುವುದು ಒಳ್ಳೆಯ ಕೆಲಸ. ತಾಯಂದಿರಲ್ಲಿ ಇರುವ ಸಂಸ್ಕಾರ ಮತ್ತು ಸಂಸ್ಕೃತಿ ನಮ್ಮ ದೇಶವನ್ನು ಕಾಪಾಡುವಂಥದ್ದು. ಭಾರತದಲ್ಲಿ ಹಲವಾರು ಧರ್ಮಗಳು ಹುಟ್ಟಿರಬಹುದು. ಆದರೆ, ಅದರ ಮೂಲ ಮಾನವ ಧರ್ಮ. ಮನುಷ್ಯನಿಂದ ಮಾನವನ ಕಡೆಗೆ ಹೋಗುವ ಮೂಲ ಧರ್ಮ ಎಂದು ಹೇಳಿದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯ ಹುಬ್ಬಳ್ಳಿ ಮೂರುಸಾವಿರ ಮಠದ ಜಗದ್ಗುರು ಗುರುಸಿದ್ದಶಿವಯೋಗೀಂದ್ರ ಮಹಾಸ್ವಾಮಿ, ಹಾಲಕೇರಿಯ ಅನ್ನದಾನೇಶ್ವರ ಮಠದ ಜಗದ್ಗುರು ಶ್ರೀ ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳು, ಬಿಜಗಲ್ ವಿರಕ್ತ ಮಠದ ಶ್ರೀ ಶಿವಲಿಂಗ ಮಹಾಸ್ವಾಮಿ, ವಿಧಾನ ಪರಿಷತ್ ಮಾಜಿ ಸದಸ್ಯ ಶಿವರಾಜ್ ಸಜ್ಜನ್, ಮಲ್ಲಿಕಾರ್ಜುನ ಹಾವೇರಿ ಸೇರಿದಂತೆ ಅನೇಕ ಗಣ್ಯರು ಹಾಜರಿದ್ದರು.

## ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ವಿತರಣೆ



**ಮಾಲೂರು:** ತಾಲೂಕಿನ ಎಂಸಿಹಳ್ಳಿ ಕ್ಲಸ್ಟರ್‌ನ ಎಂಸಿ ಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ ಕಲಿಕಾ ಹಬ್ಬವನ್ನು ಆಯೋಜನೆ ಮಾಡಲಾಗಿತ್ತು.

ಕ್ಲಸ್ಟರ್‌ನ ವಿವಿಧ ಶಾಲೆಗಳಿಂದ ವಿದ್ಯಾರ್ಥಿಗಳು ಈ ಕಲಿಕಾ ಹಬ್ಬದ ಕಾರ್ಯಕ್ರಮದಲ್ಲಿ ಭಾಗವಹಿಸಿ ವಿವಿಧ ಸ್ಪರ್ಧೆಗಳಲ್ಲಿ ಸ್ಪರ್ಧಿಸಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ಮತ್ತು ಪ್ರಶಸ್ತಿ ಪತ್ರಗಳನ್ನು ನೀಡಲಾಯಿತು.

ಈ ಕಲಿಕಾ ಹಬ್ಬದ ಉದ್ಘಾಟನಾ ಕಾರ್ಯಕ್ರಮದಲ್ಲಿ ಎಂ ಸಿ ಹಳ್ಳಿ ಗ್ರಾಮ ಪಂಚಾಯತಿಯ ಸದಸ್ಯ ವೆಂಕಟೇಶ್, ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಎಂ ಸಿ ಹಳ್ಳಿಯ ಎಸ್‌ಡಿಎಂಸಿ ಅಧ್ಯಕ್ಷ ನಾಗರಾಜ್, ಸದಸ್ಯರಾದ ಅಖಿಲ ಬಾನು, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಷಣ್ಮುಖಯ್ಯ, ಮಹಿಳಾ ಉಪಾಧ್ಯಕ್ಷೆ ರಾಜೇಶ್ವರಿ, ನಿಕಟಪೂರ್ವ ಕಾರ್ಯದರ್ಶಿಗಳಾದ ಎಂ.ಸಿ ಮುನಿರಾಜ್, ಶಿಕ್ಷಣ ಇಲಾಖೆಯ ಶಿಕ್ಷಣ ಸಂಯೋಜಕರಾದ ಸಿ ಶಶಿಧರ್, ಕ್ಷೇತ್ರ ಸಮನ್ವಯ ಶಿಕ್ಷಣ ಸಂಪನ್ಮೂಲ ವ್ಯಕ್ತಿಗಳಾದ ಎಂ ನಟರಾಜ್ , ಎಚ್ ಎಂ ಶ್ರೀನಿವಾಸ್, ಎಸ್ ಡಿ ಎಂ ಸಿ ಸದಸ್ಯರುಗಳು ವಿವಿಧ ಶಾಲೆಗಳಿಂದ ಆಗಮಿಸಿದ್ದ ಶಿಕ್ಷಕರಾದ ನಾಗರಾಜ್, ವೆಂಕಟೇಶ್ವರ ರೆಡ್ಡಿ, ರಾಜಶೇಖರ್, ಮುಖ್ಯೋಪಾಧ್ಯಾಯರಾದ ಜಲಜಾಕ್ಷಿ, ಭಾಗ್ಯಲಕ್ಷ್ಮಿ, ಗೀತಾ, ಸುಜಾತ ,ಕೃಷ್ಣವೇಣಿ ದೈಹಿಕ ಶಿಕ್ಷಣ ಶಿಕ್ಷಕರಾದ ಭಾರತಿ ಹಾಗೂ ಇನ್ನಿತರ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಲಿಕಾ ಹಬ್ಬದ ಮಹತ್ವದ ಮೇರಗನ್ನು ನೀಡಿದರು.

## ಡಿಸಿಸಿ ಬ್ಯಾಂಕ್ ಚುನಾವಣೆಗೆ ಸಂಬಂಧ ಜೆಡಿಎಸ್ ಮುಖಂಡರ ಸಭೆ

**ಕೆ.ಆರ್.ಪೇಟೆ.:** ಅಭ್ಯರ್ಥಿ ಯಾರೇ ಆಗಲಿ ಅವರ ಗೆಲುವಿಗೆ ಟೊಂಕಕಟ್ಟಿ ನಿಂತು ಜೆಡಿಎಸ್ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಂಡು ಬರುವುದು ಮುಖಂಡರು ಹಾಗೂ ನನ್ನ ಆದ್ಯ ಕರ್ತವ್ಯ ಎಂದು ಶಾಸಕ ಹೆಚ್.ಟಿ.ಮಂಜು ತಿಳಿಸಿದರು.

ಅವರು ಪಟ್ಟಣದ ಜೆಡಿಎಸ್ ಕಛೇರಿಯಲ್ಲಿ ಮುಂಬರುವ ಡಿಸಿಸಿ ಬ್ಯಾಂಕ್ ಚುನಾವಣೆಗೆ ಅಭ್ಯರ್ಥಿಯ ಆಯ್ಕೆ ಕುರಿತು ಮುಖಂಡರು ಕಾರ್ಯಕರ್ತರೊಂದಿಗೆ ಚರ್ಚೆ ನಡೆಸಿ ಮಾತನಾಡಿದರು.

ಮುಂಬರುವ ಸಹಕಾರ ಸಂಘಗಳ ಚುನಾವಣೆಯಲ್ಲಿ ಮುಖಂಡರು ಎಲ್ಲಾ ಭಿನ್ನಾಭಿಪ್ರಾಯ ಬಿಟ್ಟು ಒಗ್ಗಟ್ಟಿನಿಂದ ಚುನಾವಣೆ ನಡೆಸಬೇಕು. ತಾಲ್ಲೂಕಿನಲ್ಲಿ ಬಲಾಡ್ಯ ಜೆಡಿಎಸ್ ಪಡೆಯಿದೆ. ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರುಗಳೊಂದಿಗೆ ಮತದಾರರ ಮನವೊಲಿಸಿ ಚುನಾವಣೆಯಲ್ಲಿ ಗೆಲುವು ಸಾಧಿಸಲು ಶ್ರಮಿಸಬೇಕು. ಕೆಳಹಂತದ ಕಾರ್ಯಕರ್ತರ ಮಾತಿಗೆ ಮನ್ನಣೆ ನೀಡಬೇಕು ಎಂದು ಶಾಸಕ ಹೆಚ್.ಟಿ.ಮಂಜು ಮುಖಂಡರಿಗೆ ಸಲಹೆ ನೀಡಿದರು.

ಸಭೆಯಲ್ಲಿ ಸಹಕಾರ ಮಹಾಮಂಡಳದ ನಿರ್ದೇಶಕ ಚೋಳೇನಹಳ್ಳಿ ಪುಟ್ಟಸ್ವಾಮಿಗೌಡ, ತಾಲ್ಲೂಕು ಜೆಡಿಎಸ ಅಧ್ಯಕ್ಷ ಜಾನಕಿರಾಮ್, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹೆಚ್.ಕೆ.ಅಶೋಕ್, ದಿಶಾ ಸಮಿತಿ ಸದಸ್ಯ ನರಸನಾಯಕ, ತಾ.ಪಂ.ಮಾಜಿ ಸದಸ್ಯರಾದ,ಸಂಜೀವಪ್ಪ ಮಲ್ಲೇನಹಳ್ಳಿ ಮೋಹನ್, ಮುಖಂಡರಾದ ಅಕ್ಕಿಹೆಬ್ಬಾಳುಶ್ರೀನಿವಾಸ್ ತೋಟಪ್ಪಶೆಟ್ಟಿ, ಸಂತೆಬಾಚಹಳ್ಳಿರವಿ, ಬಲ್ಲೇನಹಳ್ಳಿ ನಂದೀಶ್, ನಾಟನಹಳ್ಳಿಮಹೇಶ್, ಗುತ್ತಿಗೆದಾರ ಬಲರಾಮ್, ಸೇರಿದಂತೆ ಹಲವಾರು ಮುಖಂಡರು ಹಾಜರಿದ್ದರು.



## ನಿವೇಶನರಹಿತರಿಗೆ ನಿವೇಶನ ಕಲ್ಪಿಸಿಕೊಡುವ ಕುರಿತು ಪ್ರಗತಿ ಪರಿಶೀಲನೆ ಸಭೆ



**ದೇವನಹಳ್ಳಿ:** ಪಟ್ಟಣದ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾಧಿಕಾರಿ ಎ .ಬಿ ಬಸವರಾಜ್ ರವರ ಅಧ್ಯಕ್ಷತೆಯಲ್ಲಿ

ಆಶ್ರಯ ಯೋಜನೆಯಡಿ ಕಾಯ್ದಿರಿಸಲಾಗಿರುವ ಮತ್ತು ಮಂಜುರಾಗಿರುವ ಜಮೀನಿನಲ್ಲಿ ನಿವೇಶನ ರಹಿತರಿಗೆ ನಿವೇಶನ ಕಲ್ಪಿಸಿಕೊಡುವ ಕುರಿತು ಪ್ರಗತಿ ಪರಿಶೀಲನೆ ಸಭೆಯು ನಡೆಯಿತು.

ಈ ವೇಳೆಯಲ್ಲಿ ಜಿಲ್ಲಾಧಿಕಾರಿ ಎ .ಬಿ ಬಸವರಾಜ್ ಮಾತನಾಡಿ ತಾಲೂಕಿನ ನಿವೇಶನ ರಹಿತರು ಆಶ್ರಯ ಯೋಜನೆ ಅಡಿ ಹಲವಾರು ಅರ್ಜಿಗಳನ್ನು ಆಯಾ ಗ್ರಾಮ ಪಂಚಾಯತಿ ಈಗಾಗಲೇ ಸಲ್ಲಿಸಿದ್ದಾರೆ ಶೀಘ್ರದಲ್ಲಿಯೇ ನಿವೇಶನರಹಿತರಿಗೆ ನಿವೇಶವನ್ನು ಕಲ್ಪಿಸಿಕೊಡಲಾಗುವುದು ಅದಕ್ಕೆ ಪೂರಕವಾದ ಯೋಜನೆಗಳು ಹಂತ ಹಂತವಾಗಿ ನಡೆಯುತ್ತಿದೆ ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮತ್ತು ಕಂದಾಯ ಇಲಾಖೆಯ ಉಪತಹಸೀಲ್ದಾರ್ ಕಂದಾಯ ನಿರೀಕ್ಷಕರು ,ಸರ್ವೆಯರ್ ಅಧಿಕಾರಗಳೊಂದಿಗೆ ಪ್ರಗತಿ ಪರಿಶೀಲನೆ ನಡೆಸಲಾಯಿತು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ದೇವನಹಳ್ಳಿ ತಾಲೂಕು ಕಾರ್ಯ ನಿರ್ವಾಹಕ ಅಧಿಕಾರಿ ಶ್ರೀನಾಥ್ ಗೌಡ ,ತಹಸಿಲ್ದಾರ್ ಎಚ್. ಬಾಲಕೃಷ್ಣ,ಕಂದಾಯ ಇಲಾಖೆಯ ಸಹಾಯಕ ನಿರ್ದೇಶಕರು ,ಕಂದಾಯ ಇಲಾಖೆ ಸಿಬ್ಬಂದಿಗಳು, ತಾಲೂಕಿನ ಎಲ್ಲಾ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ವಸತಿ ಯೋಜನೆ ನೋಡೆಲ್ ಅಧಿಕಾರಿಗಳು ಉಪಸ್ಥಿತರಿದ್ದರು.

## ಶ್ರೀಗುರುಗಳ ಸ್ಮರಣೆ ಪರಂಪರೆ ಪರಮಾತ್ಮನ ದೈವಶಕ್ತಿ



**ಆದಿಚುಂಚನಗಿರಿ:** ಮಹಾ ಸಂಸ್ಥಾನ ಪೀಠದ ಪಟ್ಟಾಭಿಷೇಕ ಕೇವಲ ನೆಪ ಮಾತ್ರ. ಈ ಮೂಲಕ ಶ್ರೀ ಗುರುಗಳ ಸ್ಮರಣೆಗಾಗಿ ಪರಮಾತ್ಮ ಕಾರ್ಯಕ್ರಮ ಮಾಡಿಸಿಕೊಂಡಿದ್ದಾರೆ.

ಆಟೋಮಿಕ್ ಮಾಡೆಲ್ ಕಂಡು ಹಿಡಿದ ವಿಜ್ಞಾನಿ ರೂಡರ್ ಫರ್ಡ್ ಕಣ್ಣಿಗೆ ಕಾಣುವ ಜಗತ್ತಿಗೆ ಕಾರಣದ ಶಕ್ತಿಯೊಂದು ಪ್ರೇರಣೆ ನೀಡುತ್ತಿದೆ ಎಂದರಿತನು. ಮಾನವನ ಓಡಾಟಕ್ಕೆ ವಾಹನ ಹಾಗೂ ಇತರ ಸೌಲಭ್ಯಗಳಿಗಾಗಿ ವಿಜ್ಞಾನ ತಂತ್ರಜ್ಞಾನ ಬೇಕು, ಇದರೊಂದಿಗೆ ಜ್ಞಾನವನ್ನು ತುಂಬಿದರೆ ಬದುಕು ಸಾರ್ಥಕ ಹಾಗೂ ಸರಾಗವಾಗುತ್ತದೆ.

ತಂತ್ರಜ್ಞಾನವೆಂಬುದು ಕಣ್ಣಿಗೆ ಕಾಣುವ ಕೊಂಬೆ ರೆಂಬೆಗಳಾದರೆ ಅದನ್ನು ಬೆಳೆಸುವ ಜ್ಞಾನವೇ ಬೇರು ಎಂಬ ಮಾತೊಂದಿದೆ. ಜ್ಞಾನಕ್ಕೆ ವಿಜ್ಞಾನ ಮತ್ತು ತಂತ್ರಜ್ಞಾನ ಎಡಬಲದಿ ಒಡನಾಟವಿದ್ದರೆ ವಿಜ್ಞಾತಂ ಎಂದು ವಿವರಿಸಿದರು.


ವಿದ್ಯಾರ್ಥಿಗಳು ಇಂತಹ ಸಂಶೋಧನೆಗಳನ್ನು ಮುಂದುವರಿಸಿ ದೇಶದ ವೈಜ್ಞಾನಿಕ ಪ್ರಗತಿಗೆ ಕೊಡುಗೆ ನೀಡುವಂತಾಗಿ ಎಂದು ಆಶೀರ್ವದಿಸಿದರು.

## ಜೀತ ಪದ್ಧತಿಯನ್ನು ನಿರ್ಮೂಲನೆಗಾಗಿ ಪ್ರತಿಯೊಬ್ಬರು ಕೈ ಜೋಡಿಸಿ

**ಮಾಲೂರು:** ಸಮಾಜದಲ್ಲಿ ಜೀತ ಪದ್ಧತಿ ನಮ್ಮ ಸ್ವತಂತ್ರ ಹರಣ ಮಾಡುತ್ತಿದೆ ಸಾಮಾಜಿಕ ಪಿಡುಗುಗಳಲ್ಲಿ ಒಂದಾದ ಜೀತಪದ್ಧತಿ ಮುಕ್ತಿಗಾಗಿ ವಿದ್ಯಾರ್ಥಿಗಳು ಕೈಜೋಡಿಸುವಂತೆ ಒಂದನೇ ಅಪರ ಸಿವಿಲ್ ನ್ಯಾಯಾಧೀಶ ಮತ್ತು ಜೆ ಎಂ ಎಫ್ ಸಿ ಸದಸ್ಯ ಕಾರ್ಯದರ್ಶಿ ಎಚ್ ಜೆ ಶಿಲ್ಪ ಹೇಳಿದರು.

ಪಟ್ಟಣದ ತಾಲೂಕು ಕಚೇರಿಯ ತಹಶೀಲ್ದಾರ್ ಸಭಾಂಗಣದಲ್ಲಿ ತಾಲೂಕ ಆಡಳಿತ ಕಾನೂನು ಸೇವಾ ಸಮಿತಿ ವಕೀಲರ ಸಂಘ ಇವರ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಜೀತ ಪದ್ಧತಿ ನಿರ್ಮೂಲನೆ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಜೀತ ಪದ್ಧತಿ ಎಂಬುದು ಸಮಾಜದಲ್ಲಿ ಜನರ ಸ್ವಾತಂತ್ರ ಹರಣ ಮಾಡುತ್ತಿದೆ ಇದೊಂದು ಸಾಂಕ್ರಾಮಿಕ ಹಾಗೂ ಸಾಮಾಜಿಕ ಪಿಡುಗಾಗಿದ್ದು ದೇಶದ ಅಭಿವೃದ್ಧಿಗೂ ಸಹ ಮಾರಕವಾಗಿದೆ ಶಿಕ್ಷಣ ಜ್ಞಾನ ಸೌಲಭ್ಯಗಳ ಕೊರತೆಯಿಂದ ಈ ಪದ್ಧತಿ ವಂಶಪಾರಂಪರ್ಯವಾಗಿ ಇಂದಿನಿಂದಲೂ ಜೀವಂತವಾಗಿದೆ.




ವಂಶ ಪಾರಂಪರ್ಯ ಜೀತ ಪದ್ಧತಿ ನಿರ್ಮೂಲನೆಗೆ ಪ್ರತಿಯೊಬ್ಬರಿಗೂ ಶಿಕ್ಷಣದ ಅಗತ್ಯವಿದೆ ವಿದ್ಯಾರ್ಥಿಗಳು ನಿಮ್ಮ ಸುತ್ತಮುತ್ತಲ ಪರಿಸರದಲ್ಲಿ ಜೀತ ಪದ್ಧತಿ ಕೆಲಸ ಮಾಡುತ್ತಿರುವ ಬಗ್ಗೆ ಕಂಡುಬಂದಲ್ಲಿ ಪೋಷಕರು ಸಾರ್ವಜನಿಕರು ನಿರ್ಭೀತಿಯಿಂದ ಸಂಬಂಧಪಟ್ಟ ಇಲಾಖೆಗೆ ದೂರು ನೀಡುವುದರ ಮೂಲಕ ಜೀತ ಪದ್ಧತಿ ನಿರ್ಮೂಲನೆಗೆ ಸಹಕಾರ ನೀಡಬೇಕು ಎಂದರು.

ತಹಶೀಲ್ದಾರ್ ಎಂ.ವಿ ರೂಪ ಮಾತನಾಡಿ, ಜೀತ ಪದ್ಧತಿ ಎಂಬುದು ವಿಶ್ವದ ಇತರೆ ದೇಶಗಳಲ್ಲಿ ಒಂದೊಂದು ರೀತಿಯಲ್ಲಿದ್ದು ಪ್ರಬಲರು ದುರ್ಬಲ ವರ್ಗದವರನ್ನು ದುಡಿಸಿಕೊಳ್ಳುವ ಮೂಲಕ ಸ್ವಾತಂತ್ರ್ಯ ನೀಡದೆ ಶೋಷಣೆಗೆ ಮಾಡುತ್ತಿದ್ದಾರೆ. ಗ್ಯಾರೇಜ್ ,ಹೋಟೆಲ್ ಅಂಗಡಿಗಳು ಮನೆಗಳಲ್ಲಿ ಹೊಲ ಗದ್ದೆಗಳಲ್ಲಿ ಕಾರ್ಖಾನೆಗಳಲ್ಲಿ ಮಕ್ಕಳನ್ನು ಜೀತ ಪದ್ಧತಿಗೆ ಇಟ್ಟುಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗಿದ್ದು, ಅಂತಹವರ ವಿರುದ್ಧ ಕಾನೂನು ರೀತಿಯ ದಂಡ ಸಹಿತ ಕ್ರಮ ವಹಿಸಲಾಗುವುದು. ಸರ್ಕಾರ ಸಹ ಜೀತ ಪದ್ಧತಿ ನಿರ್ಮೂಲನೆಗೆ ಹಲವು ರೀತಿಯ ಕಾನೂನುಗಳನ್ನು ಜಾರಿಗೊಳಿಸಿದ್ದು ಜೀತ ಪದ್ಧತಿಯಿಂದ ಮುಕ್ತರಾದ ವರೆಗೆ ಹಲವು ರೀತಿಯ ಸವಲತ್ತುಗಳನ್ನು ಸಹ ಒದಗಿಸುತ್ತಿದೆ ಸಮಾಜದಲ್ಲಿ ಜೀತಪದ್ಧತಿಯ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕಾನೂನು ಸೇವಾ ಸಮಿತಿ ಕಾರ್ಮಿಕ ಇಲಾಖೆ ಕಾರ್ಯನಿರ್ವಹಿಸುತ್ತಿದ್ದು, ಮಾನವ ಹಕ್ಕುಗಳು ಕಸಿದುಕೊಂಡು ಸ್ವಾತಂತ್ರ್ಯ ನೀಡದೆ ದುಡಿಸಿಕೊಳ್ಳುವುದು ಅಪರಾಧವಾಗಿದ್ದು ಇಂತಹ ಪ್ರಕರಣಗಳು ಕಂಡು ಬಂದಲ್ಲಿ ಸಾರ್ವಜನಿಕರು ಸೇರಿದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ಸಲ್ಲಿಸುವಂತೆ ಹೇಳಿದರು.

ಈ ಸಂದರ್ಭದಲ್ಲಿ ತಾಲೂಕು ವಕೀಲರ ಸಂಘದ ಜಂಟಿ ಕಾರ್ಯದರ್ಶಿ ಬಿ ನಾರಾಯಣಸ್ವಾಮಿ ಜೀತ ಪದ್ಧತಿಯ ಬಗ್ಗೆ ಉಪನ್ಯಾಸದ ಮೂಲಕ ಅರಿವು ಮೂಡಿಸಿದರು.

ತಾಲೂಕು ವಕೀಲರ ಸಂಘದ ಕಾರ್ಯದರ್ಶಿ ಕೆ ಹರೀಶ್ ಕುಮಾರ್, ಕ್ಷೇತ್ರ ಶಿಕ್ಷಣ ಸಮನ್ವಯಾಧಿಕಾರಿ ಟಿ.ವೆಂಕಟಸ್ವಾಮಿ, ಶಿರಸ್ಥೆದಾರ್ ಧರ್ಮೇಂದ್ರ ಪ್ರಸಾದ್ ಹಾಜರಿದರು.

## 39ನೇ ವರ್ಷದ ಮುನೇಶ್ವರ ಸ್ವಾಮಿ ಪೂಜಾ ಮಹೋತ್ಸವ

**ನಾಗಮಂಗಲ:** ಮಹಾಶಿವರಾತ್ರಿಯ ಪ್ರಯುಕ್ತ ಮುನೇಶ್ವರ ಸ್ವಾಮಿ ಮತ್ತು ಗುರು ಶನೇಶ್ವರ ಸ್ವಾಮಿ ದೇವಸ್ಥಾನದ 39ನೇ ವರ್ಷದ ವಾರ್ಷಿಕೋತ್ಸವ ಮತ್ತು ಪೂಜಾ ಮಹೋತ್ಸವವನ್ನು ಅದ್ದೂರಿಯಾಗಿ ಆಚರಣೆ ಮಾಡಲಾಗುತ್ತಿದೆ.

ನಾಗಮಂಗಲ ತಾಲೂಕು ದೇವಲಾಪುರ ಹೋಬಳಿ ಸಮೀಪವಿರುವ ಭೀಮನಹಳ್ಳಿ ಗ್ರಾಮದಲ್ಲಿ 26ರಂದು ವಿಶೇಷ ಪೂಜಾ ಮಹೋತ್ಸವ 27ರಂದು ಅನ್ನಸಂತರ್ಪಣ ಏರ್ಪಡಿಸಲಾಗಿದ್ದು ಕಾರ್ಯಕ್ರಮಕ್ಕೆ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ತಿಳಿಸಿದ್ದಾರೆ.



## ಅತಿ ಹೆಚ್ಚು ಗಳಿಸುವ ಮೂವರು ವಿದ್ಯಾರ್ಥಿಗಳಿಗೆ ಬಹುಮಾನ

**ಮುಳಬಾಗಲು:** ತಾಲೂಕಿನಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ರಾಜ್ಯ ಮಟ್ಟದಲ್ಲಿ ಅತಿ ಹೆಚ್ಚು ಅಂಕ ಗಳಿಸುವ 3 ವಿದ್ಯಾರ್ಥಿಗಳಿಗೆ ಆಕರ್ಷಕ ಬಹುಮಾನ ನೀಡುವುದರ ಜತೆಗೆ ಅದ್ದೂರಿಯಾಗಿ ಸನ್ಮಾನ ಮಾಡಲಾಗುವುದೆಂದು ಪ್ರಗತಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಜೋಗಲಕಾಷ್ಠಿ ಮುನೇಶ್ ತಿಳಿಸಿದರು.

ನಗರದ ಸರಕಾರಿ ಬಾಲಕಿಯರ ಪ್ರೌಢಶಾಲೆ ಆವರಣದಲ್ಲಿ ತಾಲೂಕಿನ ಎಲ್ಲಾ ಸರಕಾರಿ ಹಾಗೂ ವಸತಿ ಪ್ರೌಢಶಾಲೆಗಳ 1500 ಮಂದಿ 10ನೇ ತರಗತಿ ವಿದ್ಯಾರ್ಥಿಗಳಿಗೆ ಉಚಿತ ಪರೀಕ್ಷಾ ಪರಿಕರಗಳು ಹಾಗೂ ನೋಟ್ ಪುಸ್ತಕಗಳನ್ನು ವಿತರಿಸಿ ಮಾತನಾಡಿದರು. ಈಗಾಗಲೇ ತಾಲೂಕಿನ ಸರಕಾರಿ ಶಾಲೆಗಳಿಗೆ ಕಲಿಕಾ ಸಾಮಗ್ರಿ ವಿತರಣೆ ಜತೆಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿದ್ದೇನೆ ಎಂದರು.



ಬಿಇಒ .ಎನ್. ರಾಮಚಂದ್ರ ಮಾತನಾಡಿ, 2025 ರಲ್ಲಿ ತಾಲೂಕಿನ ಎಸ್ಸೆಸ್ಸೆಲ್ಸಿ ಪರೀಕ್ಷಾ ಫಲಿ ತಾಂಶ ಶೇ. 100 ಬರಲು ಶಿಕ್ಷಕರು ವಿದ್ಯಾರ್ಥಿಗಳಿಗೆ ಈಗಾಗಲೇ ಉತ್ತಮ ರೀತಿಯಲ್ಲಿ ಬೋಧನೆ ಮಾಡಿದ್ದಾರೆ. ವಿದ್ಯಾರ್ಥಿಗಳು ಕಾಲಹರಣ ಮಾಡದೇ ಪಠ್ಯ ಪುಸ್ತಕ ಜತೆಗೆ ಶಿಕ್ಷಕರು ನೀಡಿರುವ ನೋಟ್ಸ್‌ಗಳನ್ನು ಸಮಗ್ರವಾಗಿ ಅಧ್ಯಯನ ಮಾಡಬೇಕು. ಸಮಾಜ ಸೇವಕ ಮುನೇಶ್ ಅವರು ಸರಕಾರಿ ಶಾಲೆಗಳ ಬಗ್ಗೆ ಇಟ್ಟಿರುವ ಕಾಳಜಿಗೆ ಅಭಿನಂದನೆಗಳನ್ನು ತಿಳಿಯಬಯಸುತ್ತೇನೆ ಎಂದು ತಿಳಿಸಿದರು.

ಬಿಆರ್‌ಸಿ ಸಂಯೋಜಕ ಪಿ. ಸೋಮೇಶ್ ಮಾತನಾಡಿ, ಈ ಬಾರಿ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಲು ವಿಭಿನ್ನ ಯೋಜನೆಗಳ ಮೂಲಕ ಗುಣಮಟ್ಟದ ಶಿಕ್ಷಣವನ್ನು ನೀಡಲಾಗಿದೆ. ಪೋಷಕರು ತಮ್ಮ ಮಕ್ಕಳಿಗೆ ಶ್ರದ್ಧೆಯಿಂದ ವ್ಯಾಸಂಗ ಮಾಡುವಂತೆ ಸೂಚಿಸಬೇಕು ಎಂದು ತಿಳಿಸಿದರು.

ಮುಖ್ಯ ಶಿಕ್ಷಕರಾದ ಆನಂದ್, ಲಕ್ಷ್ಮಯ್ಯ, ಅಂಜಲಿ, ತಾಲೂಕು ಪ್ರಾರ್ಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ವೆಂಕಟಗಿರಿಯಪ್ಪ, ಶಿಕ್ಷಕರಾದ ಎನ್. ಜಗದೀಶ್, ಅರುಣ್ ಕುಮಾರ್, ರಹಿಮ್ ಷರೀಪ್, ಸೇರಿದಂತೆ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಹಾಜರಿದ್ದರು.

# ಬೆಂಗಳೂರಿನಲ್ಲಿ ಆರ್‌ಸಿಬಿಗೆ ಬಲಿಷ್ಠ ಮುಂಬೈ ಎದುರಾಳಿ

ಮೂರನೇ ಆವೃತ್ತಿಯ ಮಹಿಳಾ ಪ್ರೀಮಿಯರ್ ಲೀಗ್‌ನಲ್ಲಿ ತನ್ನ ಅಜೇಯ ಓಟವನ್ನು ಮುಂದುವರೆಸಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮಹಿಳಾ ತಂಡ ಇಂದು ತನ್ನ ತವರು ಮೈದಾನದಲ್ಲಿ ಅಂದರೆ ಬೆಂಗಳೂರಿನಲ್ಲಿ ಮೊದಲ ಪಂದ್ಯವನ್ನು ಆಡಲಿದೆ. ಈಗಾಗಲೇ ಆಡಿರುವ ಎರಡು ಪಂದ್ಯಗಳಲ್ಲಿ ಬಲಿಷ್ಠ ತಂಡಗಳನ್ನು ಮಕಾಡೆ ಮಲಗಿಸಿರುವ ಸ್ಮೃತಿ ಪಡೆಗೆ ಇಂದು ಮತ್ತೊಂದು ಅಗ್ನಿಪರೀಕ್ಷೆ ಎದುರಾಗಲಿದೆ.




ಏಕೆಂದರೆ ಆರ್‌ಸಿಬಿಯ ಇಂದಿನ ಎದುರಾಳಿ ಮೊದಲ ಆವೃತ್ತಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್. ಹೌದು.. ಇಂದು ತಮ್ಮ ತವರು ಮೈದಾನದಲ್ಲಿ ನಡೆಯಲಿರುವ ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ಸ್ಮೃತಿ ಮಂಧಾನ ಪಡೆ, ಮುಂಬೈ ಇಂಡಿಯನ್ಸ್ ತಂಡವನ್ನು ಎದುರಿಸಲಿದೆ. ಹಾಲಿ ಚಾಂಪಿಯನ್ ಆರ್‌ಸಿಬಿ ಈ ಸೀಸನ್‌ನಲ್ಲಿ ಇಲ್ಲಿಯವರೆಗೆ ಉತ್ತಮ ಪ್ರದರ್ಶನ ನೀಡಿದ್ದು, ಆಡಿದ ಎರಡೂ ಪಂದ್ಯಗಳನ್ನು ಗೆದ್ದಿದೆ. ಆರ್‌ಸಿಬಿ ಈಗ ಮುಂಬೈ ಇಂಡಿಯನ್ಸ್ ವಿರುದ್ಧ ಹ್ಯಾಟ್ರಿಕ್ ಗೆಲುವಿನತ್ತ ಗಮನ ಹರಿಸಿದೆ. ತನ್ನ ಮೊದಲ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ವಿರುದ್ಧ 200 ಕ್ಕೂ ಹೆಚ್ಚು ರನ್‌ಗಳ ಗುರಿಯನ್ನು ಬೆನ್ನಟ್ಟಿದ್ದ ಆರ್‌ಸಿಬಿ, ಆ ನಂತರ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಸಹ ಸುಲಭವಾಗಿ ಸೋಲಿಸಿತ್ತು. ಈ ಮೂಲಕ ಸ್ಮೃತಿ ಮಂಧಾನ ನೇತೃತ್ವದ ತಂಡ ನಾಲ್ಕು ಅಂಕಗಳನ್ನು ಹೊಂದಿದ್ದು, ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಆರ್‌ಸಿಬಿಯನ್ನು ಹೊರತುಪಡಿಸಿ ಟೂರ್ನಿಯಲ್ಲಿ ಬೇರೆ ಯಾವುದೇ ತಂಡ ಇದುವರೆಗೆ ಆಡಿರುವ ಎಲ್ಲಾ ಪಂದ್ಯಗಳನ್ನು ಗೆದ್ದಿಲ್ಲ. ಹೀಗಾಗಿ ಇಂದಿನ ಪಂದ್ಯದಲ್ಲೂ ಆರ್‌ಸಿಬಿಯೇ ಗೆಲುವಿನ ಫೇವರೇಟ್ ಎನಿಸಿಕೊಂಡಿದೆ.

ಇತ್ತ ಮುಂಬೈ ತಂಡ ತುಂಬಾ ಬಲಿಷ್ಠವಾಗಿದ್ದು, ಅವರನ್ನು ಸೋಲಿಸುವುದು ಸುಲಭವಲ್ಲ. ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧದ ಕೊನೆಯ ಪಂದ್ಯದಲ್ಲಿ, ನ್ಯಾಟ್ ಸಿವರ್-ಬ್ರಂಟ್ ಅವರ ಅತ್ಯುತ್ತಮ ಬ್ಯಾಟಿಂಗ್ (59 ಎಸೆತಗಳಲ್ಲಿ 80 ರನ್‌ಗಳು) ಮತ್ತು ಹರ್ಮನ್‌ಪ್ರೀತ್ ಅವರ 73 ರನ್‌ಗಳ ಪಾಲುದಾರಿಕೆಯ ಹೊರತಾಗಿಯೂ, ತಂಡವು ಸೋಲನ್ನು ಎದುರಿಸಬೇಕಾಯಿತು. ಈಗ ಹರ್ಮನ್‌ಪ್ರೀತ್ ಕೌರ್ ನೇತೃತ್ವದ ತಂಡವು ಬಲವಾದ ಪುನರಾಗಮನ ಮಾಡಲು ಬದ್ಧವಾಗಿದೆ.

# ಗ್ಲಾಮರಸ್ ಲುಕ್... ಕ್ಲಿಯೋಪಾತ್ರ



ಕನ್ನಡ ಕಿರುತೆರೆಯ ಜನಪ್ರಿಯ ನಟಿಯರಲ್ಲಿ ಒಬ್ಬರು ದೀಪಿಕಾ ದಾಸ್. ಕಿರುತೆರೆಯಲ್ಲಿ ನಾಗಿಣಿಯಾಗಿ ಬುಸಿಗುಟ್ಟಿ ಕನ್ನಡಿಗರ ಫೇವರಿಟ್ ನಾಗ ರಾಣಿಯಾಗಿದ್ದ ದೀಪಿಕಾ ದಾಸ್, ಆ ಸೀರಿಯಲ್ ಬಳಿಕ ಬೇರೆ ಯಾವುದೇ ಸೀರಿಯಲ್ ಗಳಲ್ಲೂ ನಟಿಸದಿದ್ದರೂ ಸಹ ಇಂದಿಗೂ ಜನ ಅವರನ್ನು ನಾಗಿಣಿಯಾಗಿಯೇ ಇಷ್ಟಪಡುತ್ತಿದ್ದಾರೆ.

ಯಾಕಂದ್ರೆ ಇದು ದೀಪಿಕಾ ದಾಸ್ ರನ್ನು ನಟನೆಗೆ ಪರಿಚಯಿಸಿದ ಸೀರಿಯಲ್. ಇದಾದ ಮೇಲೆ ದೀಪಿಕಾ ದಾಸ್ ಗೆ ಹೆಸರು ತಂದು ಕೊಟ್ಟಿದ್ದು ಬಿಗ್ ಬಾಸ್ ಸೀಸನ್ 7.

ಬಿಗ್ ಬಾಸ್ ಕನ್ನಡ ಸೀಸನ್ 7ರಲ್ಲಿ ತಮ್ಮ ಮಾತು, ಆಟ, ಸ್ಟೈಲ್, ಎಂಥಹುದೇ ಸಂದರ್ಭ ಬಂದರೂ ಸಹ ಸ್ಟ್ರಾಂಗ್ ಆಗಿ ನಿಂತು ಆಡುವ ಅವರ ಪರಿ, ಬೋಲ್ಡ್ ನೆಸ್ ಗೆ ಕನ್ನಡಿಗರು ಫಿದಾ ಆಗಿದ್ದರು. ನಾಗಿಣಿಯ ಅಮೃತಾ ಆಗಿ ಜನರಿಗೆ ಪರಿಚಯವಿದ್ದ ನಟಿಯನ್ನು ದೀಪಿಕಾ ದಾಸ್ ಆಗಿ ಬಿಗ್ ಬಾಸ್ ಮನೆಯಲ್ಲಿ ನೋಡಿ ಜನ ಇಷ್ಟ ಪಟ್ಟಿದ್ದರು. ಬಿಗ್ ಬಾಸ್ ಮನೆಯ ಬಾಸ್ ಲೇಡಿಯಾಗಿ ದೀಪಿಕಾ ದಾಸ್ ಸಖತ್ ಸೌಂಡ್ ಮಾಡಿದ್ದರು. ಅದಾದ ನಂತರ ಸಿನಿಮಾ, ಸೀರಿಯಲ್ ಗಳಿಂದ ದೂರವೇ ಉಳಿದಿದ್ದ ದೀಪಿಕಾ ದಾಸ್ ಸದ್ಯ ಹೊಸ ಸಿನಿಮಾದೊಂದಿಗೆ ನಿಮ್ಮ ಮುಂದೆ ಬಂದಿದ್ದಾರೆ. ಸದಾ ವಿದೇಶ ಸುತ್ತೋ ಬೆಡಗಿ ದೀಪಿಕಾ ದಾಸ್, ತಮಗೆ ಹೇಳಿ ಮಾಡಿಸಿದ ಸಿನಿಮಾ ಪಾರು ಪಾರ್ವತಿಯಲ್ಲಿ ನಟಿಸಿದ್ದರು. ಇದು ಟ್ರಾವೆಲ್ ಕುರಿತಾದ ಸಿನಿಮಾವಾಗಿದ್ದು, ಅದ್ಭುತವಾಗಿ ಮೂಡಿ ಬಂದಿದೆ ಎನ್ನುವ ಮಾತು ಕೇಳಿ ಬರುತ್ತಿದೆ.

ಈಗಾಗಲೇ ಸಿನಿಮಾ ರಿಲೀಸ್ ಆಗಿ ಸದ್ದು ಮಾಡುತ್ತಿದೆ. ದೀಪಿಕಾ ದಾಸ್ ನಟನೆಯನ್ನು ಸಹ ಜನ ಮೆಚ್ಚಿಕೊಂಡಿದ್ದಾರೆ. ಜನವರಿ 31ರಂದು 'ಪಾರು ಪಾರ್ವತಿ' ಸಿನಿಮಾ ಬಿಡುಗಡೆ ಆಗಿತ್ತು. ಈ ಸಿನಿಮಾಕ್ಕೆ ಫ್ಯಾಮಿಲಿ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ. ಇದರಿಂದ ದೀಪಿಕಾ ದಾಸ್ ಕೂಡ ಖುಷಿಯಾಗಿದ್ದಾರೆ. ಟ್ರೆಲರ್ ಮೂಲಕವೇ ಸದ್ದು ಮಾಡಿದ್ದ ಈ ಸಿನಿಮಾದಲ್ಲಿ ದೀಪಿಕಾ ದಾಸ್ ಟ್ರಾವೆಲ್ ಇನ್‌ಫ್ಲೂಯೆನ್ಸರ್ ಆಗಿ ನಟಿಸಿದ್ದಾರೆ.

ಗ್ಲಾಮರಸ್ ಫೋಟೊ ಶೂಟ್

ಈ ಮಧ್ಯೆ ಸೋಶಿಯಲ್ ಮೀಡಿಯಾದಲ್ಲಿ ಆಕ್ಟೀವ್ ಆಗಿರುವ ದೀಪಿಕಾ ದಾಸ್, ಹೊಸ ಫೊಟೊ ಶೂಟ್ ಮೂಲಕ ಅಭಿಮಾನಿಗಳು ಹುಬ್ಬೇರಿಸಿ ನೋಡುವಂತೆ ಮಾಡಿದ್ದಾರೆ. ಹೆಚ್ಚಾಗಿ ಬೋಲ್ಡ್ ಆಗಿ ಕಾಣಿಸಿಕೊಳ್ಳುವ ದೀಪಿಕಾ ದಾಸ್, ಈ ಬಾರಿ ಕಪ್ಪು ಬಣ್ಣದ ಗೌನ್ ಧರಿಸಿ, ಮತ್ತಷ್ಟು ಬೋಲ್ಡ್, ಗ್ಲಾಮರಸ್ ಆಗಿ ಕಾಣಿಸಿಕೊಂಡಿದ್ದಾರೆ. ದೀಪಿಕಾ ದಾಸ್ ಲುಕ್ ಗೆ ಸಿಕ್ಕಾಪಟ್ಟೆ ಮೆಚ್ಚುಗೆ ವ್ಯಕ್ತವಾಗಿದೆ. ನಟಿ ಭೂಮಿ ಶೆಟ್ಟಿ ಡಿವೈನ್ ಎಂದಿದ್ದಾರೆ, ಇನ್ನು ಜನರು ಬ್ಯೂಟಿ, ಕ್ಲಿಯೋಪಾತ್ರ, ಬೆಂಕಿ, ಬ್ಲ್ಯಾಕ್ ನಲ್ಲಿ ತುಂಬನಎ ಚೆನ್ನಾಗಿ ಕಾಣಿಸ್ತಿದ್ದೀರಿ ಎಂದು ಹೊಗಳಿದ್ದಾರೆ.

# ಲೇಡಿ ಖಿಲ್ಜಿ ರೂಪದಲ್ಲಿ ಉರ್ಫಿ

ಮಾಡೆಲ್ ಕಮ್ ನಟಿ ಊರ್ಫಿ ಜಾವೇದ್ ತಮ್ಮ ಭಿನ್ನಿ, ವಿಚಿತ್ರ ಫ್ಯಾಶನ್ ಸೆನ್ಸ್ ಮೂಲಕ ಭಾರಿ ಗಮನಸೆಳೆದಿದ್ದಾರೆ. ಜೊತೆಗೆ ಸಾಕಷ್ಟು ವಿವಾದಕ್ಕೂ ಕಾರಣವಾಗಿದ್ದಾರೆ. ಆದರೆ ಬೋಲ್ಡ್ ಲುಕ್ ಜೊತೆಗೆ ಸಾಂಪ್ರದಾಯಿಕ ಲುಕ್‌ನಲ್ಲಿ ಕಾಣಿಸಿಕೊಂಡು ಅಪಾರ ಮೆಚ್ಚುಗೆಗೂ ಪಾತ್ರವಾಗಿದ್ದಾರೆ. ಇದೀಗ ಉರ್ಫಿ ತಮ್ಮ ಹೊಸ ಅವತಾರ ಫೋಟೋಗಳನ್ನು ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ.

ವಿಶೇಷವಾಗಿ ಫ್ಯಾಷನ್ ಹೌಸ್ ರಿಂಪಲ್ ಮತ್ತು ಹರ್‌ಪ್ರೀತ್ ಹೊಸ ಕ್ಯಾಂಪೇನ್ ಭಾಗವಾಗಿ ಈ ಉಡುಗೆಯಲ್ಲಿ ಉರ್ಫಿ ಜಾವೇದ್ ಕಾಣಿಸಿಕೊಂಡಿದ್ದಾರೆ. ಉರ್ಫಿ ಫೋಟೋಗಳು ಭಾರಿ ವೈರಲ್ ಆಗಿದೆ.

ಬೋಲ್ಡ್ ಮತ್ತು ವಿಚಿತ್ರ ಫ್ಯಾಷನ್‌ಗೆ ಹೆಸರುವಾಸಿಯಾದ ಊರ್ಫಿ ಜಾವೇದ್ ಅವರ ಹೊಸ ಫೋಟೋಗಳು ಜನರ ಗಮನ ಸೆಳೆಯುತ್ತಿವೆ. ಹೊಸ ಡ್ರೆಸ್, ಅದಕ್ಕೆ ಬಳಸಿರುವ ಜ್ಯೂವೆಲ್ಲರಿ, ಮೇಕಅಪ್ ಸೇರಿದಂತೆ ಪ್ರತಿ ವಿಚಾರಗಳು ಚರ್ಚೆಯಾಗುತ್ತಿದೆ. ಇದೇ ರೀತಿ ಡ್ರೆಸ್‌ನಲ್ಲಿ ಕಾಣಿಸಿಕೊಳ್ಳಿ ಎಂದು ಹಲವರು ಕಮೆಂಟ್ ಮಾಡುತ್ತಿದ್ದಾರೆ.

ಕೆಲವು ಫೋಟೋಗಳಲ್ಲಿ ಊರ್ಫಿ ಜಾವೇದ್ 'ಹೀರಾಮಂಡಿ'ಯಿಂದ ಪ್ರೇರಿತ ಬ್ರೈಡಲ್ ಕಾಸ್ಟ್ಯೂಮ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಉರ್ಫಿಯ ಹೊಸ ಲುಕ್ ಹಲವರ ಕಣ್ಣು ತಂಪಾಗಿಸಿದೆ. ಸಾಂಪ್ರದಾಯಿಕ ಲುಕ್‌ನಲ್ಲಿ ಉರ್ಫಿ ಇದೀಗ ಟಾಕ್ ಆಪ್ ದಿ ಟೌನ್ ಆಗಿದ್ದಾರೆ.

ಇನ್ನು ಕೆಲವು ಫೋಟೋಗಳು ಬಾಲಿವುಡ್ ಸಿನಿಮಾ 'ಪದ್ಮಾವತ್'ನಲ್ಲಿ ರಣವೀರ್ ಸಿಂಗ್ ನಿರ್ವಹಿಸಿದ ಅಲ್ಲಾವುದ್ದೀನ್ ಖಿಲ್ಜಿಯಿಂದ ಪ್ರೇರಿತವಾಗಿವೆ ಅನ್ನೋ ಅಭಿಪ್ರಾಯಗಳು ವ್ಯಕ್ತವಾಗಿದೆ.

ಉರ್ಫಿ ಲುಕ್ ಅನ್ನು ಪೂರ್ಣಗೊಳಿಸಲು ಅಲ್ಲಾವುದ್ದೀನ್ ಖಿಲ್ಜಿಯ ಪಾತ್ರದಂತಹ ಕಸೂತಿ ಟೋಪಿ ಧರಿಸಿದ್ದಾರೆ. ಉರ್ಫಿ ಹೊಸ ಅವತಾರ ಸೋಶಿಯಲ್ ಮೀಡಿಯಾದಲ್ಲಿ ಸಂಚಲನ ಸೃಷ್ಟಿಸಿದೆ.

ಉರ್ಫಿ ಅವರ ಫೋಟೋಗಳನ್ನು ನೋಡಿ ಜನರು ತಮಾಷೆ ಮಾಡುತ್ತಿದ್ದಾರೆ. ಕೆಲವರು 'ಉರ್ಫುದ್ದೀನ್ ಚಿಲ್ಜಿ' ಎಂದು ಕಮೆಂಟ್ ಮಾಡಿದ್ದಾರೆ. ಉರ್ಫಿ ಪರವಾಗಿ ಹಲವರು ಕಮೆಂಟ್ ಮಾಡಿದ್ದಾರೆ. ಸಾಮಾನ್ಯವಾಗಿ ಉರ್ಫಿ ಫೋಟೋಗಳಿಗೆ ಪರ ವಿರೋಧ ಎರಡೂ ಇರುತ್ತದೆ.

ಒಬ್ಬ ಬಳಕೆದಾರ 'ಔರಂಗಜೇಬ್‌ನ ಹೆಣ್ಣು ಆವೃತ್ತಿ' ಎಂದು ಕಾಮೆಂಟ್ ಮಾಡಿದ್ದಾರೆ. ಕೆಲವರು ವಿರೋಧ ವ್ಯಕ್ತಪಡಿಸಿದ್ದಾರೆ. ಉರ್ಫಿಗೆ ಎಂದಿನ ಫ್ಯಾಶನ್ ಒಪ್ಪುತ್ತೆ ಎಂದಿದ್ದಾರೆ. ಉರ್ಫಿಯಿಂದ ನಾವು ಭಿನ್ನ ಫ್ಯಾಶನ್ ನಿರೀಕ್ಷಿಸುತ್ತಿದ್ದೇವೆ ಎಂದಿದ್ದಾರೆ. 27 ವರ್ಷದ ಊರ್ಫಿ ಜಾವೇದ್ ನಟಿ ಮತ್ತು ಮಾಡೆಲ್. 'ಬಡೆ ಭಯ್ಯಾ ಕಿ ದುಲ್ಹನಿಯಾ'ದಲ್ಲಿ ಕಾಣಿಸಿಕೊಂಡಿದ್ದಾರೆ. ಮಾಡೆಲ್ ಕಮ್ ನಟಿಯಾಗಿರುವ ಉರ್ಫಿ ಸದಾ ಒಂದಲ್ಲ ಒಂದು ಫ್ಯಾಶನ್ ಮೂಲಕ ಸುದ್ದಿಯಾಗುತ್ತಾರೆ.



# ಚೊಚ್ಚಲ ಪಂದ್ಯದಲ್ಲೇ ಗೆಲುವಿನ ಶತಕ

2025 ರ ಚಾಂಪಿಯನ್ಸ್ ಟ್ರೋಫಿಯಲ್ಲಿ ಟೀಂ ಇಂಡಿಯಾ ಗೆಲುವಿನೊಂದಿಗೆ ಟೂರ್ನಿಯನ್ನು ಆರಂಭಿಸಿದೆ. ದುಬೈನಲ್ಲಿ ನಡೆದ ಪಂದ್ಯದಲ್ಲಿ ಭಾರತ, ಬಾಂಗ್ಲಾದೇಶವನ್ನು 6 ವಿಕೆಟ್‌ಗಳಿಂದ ಸೋಲಿಸಿತು. ಈ ಮಹತ್ವದ ಗೆಲುವಿನಲ್ಲಿ ಶುಭ್‌ಮನ್ ಗಿಲ್ ಅವರ ಪಾತ್ರ ಅಪಾರವಾಗಿತ್ತು. ದಿಢೀರ್ ಕುಸಿತದ ನಡುವೆ ತಾಳ್ಮೆಯ ಇನ್ನಿಂಗ್ಸ್ ಕಟ್ಟಿದ ಗಿಲ್ ಅಜೇಯ 101 ರನ್‌ಗಳ ಇನ್ನಿಂಗ್ಸ್ ಆಡಿ ತಂಡವನ್ನು ಸೋಲಿನಿಂದ ಪಾರು ಮಾಡಿದರು. ಇದರ ಜೊತೆಗೆ ಚೊಚ್ಚಲ ಚಾಂಪಿಯನ್ಸ್ ಟ್ರೋಫಿಯ ಮೊದಲ ಪಂದ್ಯದಲ್ಲೇ ಶತಕ ಬಾರಿಸಿದ ಸಾಧನೆ ಮಾಡಿದಲ್ಲದೆ, ಐಸಿಸಿ ಟೂರ್ನಿಯಲ್ಲಿ ಮೊದಲ ಶತಕ ಬಾರಿಸಿದ ದಾಖಲೆಯನ್ನು ನಿರ್ಮಿಸಿದರು.

ತಮ್ಮ ಶತಕದ ಇನ್ನಿಂಗ್ಸ್‌ನಲ್ಲಿ 125 ಎಸೆತಗಳನ್ನು ಎದುರಿಸಿದ ಗಿಲ್ 100 ರನ್ ಪೂರ್ಣಗೊಳಿಸಿದರು. ಇದರಲ್ಲಿ 9 ಬೌಂಡರಿ ಮತ್ತು 2 ಸಿಕ್ಸರ್‌ಗಳು ಸೇರಿದ್ದವು. ಈ ಶತಕದೊಂದಿಗೆ ಗಿಲ್ ಐಸಿಸಿ ಈವೆಂಟ್‌ನಲ್ಲಿ ಮೊದಲ ಬಾರಿಗೆ ಶತಕ ಬಾರಿಸಿದ ಸಾಧನೆಯನ್ನು ಮಾಡಿದರು. ಇದಲ್ಲದೆ, ಇದು ಅವರ ಏಕದಿನ ವೃತ್ತಿಜೀವನದ 8 ನೇ ಶತಕವಾಗಿದ್ದು, ಇದಕ್ಕೂ ಮುನ್ನ ಅವರು ತಮ್ಮ ಕೊನೆಯ ಏಕದಿನ ಪಂದ್ಯದಲ್ಲಿಯೂ ಇಂಗ್ಲೆಂಡ್ ವಿರುದ್ಧ ಶತಕ ಸಿಡಿಸಿದ್ದರು. ಇಷ್ಟೇ ಅಲ್ಲ, ಗಿಲ್ ಕಳೆದ 4 ಏಕದಿನ ಇನ್ನಿಂಗ್ಸ್‌ಗಳಲ್ಲಿ 50+ ರನ್‌ಗಳ ಗಡಿಯನ್ನು ದಾಟಿದ್ದಾರೆ, ಇದು ಪ್ರಸ್ತುತ ಅವರು ಎಷ್ಟು ಉತ್ತಮ ಫಾರ್ಮ್‌ನಲ್ಲಿದ್ದಾರೆ ಎಂಬುದನ್ನು ತೋರಿಸುತ್ತದೆ.




**ಧವನ್ ದಾಖಲೆ ಮುರಿದ ಗಿಲ್:** ಈ ಪಂದ್ಯದಲ್ಲಿ ಶುಭ್‌ಮನ್ ಗಿಲ್ 129 ಎಸೆತಗಳಲ್ಲಿ ಅಜೇಯ 101 ರನ್ ಗಳಿಸಿ ಟೀಂ ಇಂಡಿಯಾವನ್ನು ಗೆಲುವಿನತ್ತ ಕೊಂಡೊಯ್ದರು. ಈ ಗೆಲುವಿನ ಇನ್ನಿಂಗ್ಸ್‌ನೊಂದಿಗೆ ಗಿಲ್ ತಮ್ಮ ಹೆಸರಿನಲ್ಲಿ ಒಂದು ದೊಡ್ಡ ದಾಖಲೆಯನ್ನೂ ನಿರ್ಮಿಸಿದರು. ಅದೇನೆಂದರೆ, ಭಾರತ ಪರ ಏಕದಿನ ಪಂದ್ಯಗಳಲ್ಲಿ ಕಡಿಮೆ ಇನ್ನಿಂಗ್ಸ್‌ಗಳಲ್ಲಿ 8 ಶತಕಗಳನ್ನು ಬಾರಿಸಿದ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ಗಿಲ್ ಪಾತ್ರರಾಗಿದ್ದಾರೆ. ಗಿಲ್ 51 ಏಕದಿನ ಇನ್ನಿಂಗ್ಸ್‌ಗಳಲ್ಲಿ ಈ ಸಾಧನೆ ಮಾಡಿದ್ದರೆ, ಇದಕ್ಕೂ ಮೊದಲು 57 ಏಕದಿನ ಇನ್ನಿಂಗ್ಸ್‌ಗಳಲ್ಲಿ 8 ಶತಕಗಳನ್ನು ಬಾರಿಸಿದ್ದ ಶಿಖರ್ ಧವನ್ ಅವರ ಹೆಸರಿನಲ್ಲಿ ಈ ದಾಖಲೆ ಇತ್ತು.

**ವಿಶೇಷ ಪಟ್ಟಿಯಲ್ಲಿ ಗಿಲ್ ಸೇರ್ಪಡೆ:** ಈ ಶತಕದೊಂದಿಗೆ ಶುಭ್‌ಮನ್ ಗಿಲ್ ಕೂಡ ಸಚಿನ್ ತೆಂಡೂಲ್ಕರ್ ಅವರ ವಿಶೇಷ ಪಟ್ಟಿಗೆ ಸೇರಿಕೊಂಡಿದ್ದಾರೆ. ವಾಸ್ತವವಾಗಿ, ಅವರು ಚಾಂಪಿಯನ್ಸ್ ಟ್ರೋಫಿಯ ಚೊಚ್ಚಲ ಪಂದ್ಯದಲ್ಲೇ ಶತಕ ಗಳಿಸಿದ ನಾಲ್ಕನೇ ಭಾರತೀಯ ಎನಿಸಿಕೊಂಡಿದ್ದಾರೆ. ಇದಕ್ಕೂ ಮೊದಲು ಸಚಿನ್ ತೆಂಡೂಲ್ಕರ್, ಮೊಹಮ್ಮದ್ ಕೈಫ್ ಮತ್ತು ಶಿಖರ್ ಧವನ್ ಈ ಸಾಧನೆ ಮಾಡಿದ್ದರು. 1998 ರಲ್ಲಿ ಚಾಂಪಿಯನ್ಸ್ ಟ್ರೋಫಿಯಲ್ಲಿ ಚೊಚ್ಚಲ ಪಂದ್ಯದಲ್ಲೇ ಸಚಿನ್ ತೆಂಡೂಲ್ಕರ್, 2002 ರಲ್ಲಿ ಮೊಹಮ್ಮದ್ ಕೈಫ್ ಮತ್ತು 2013 ರಲ್ಲಿ ಶಿಖರ್ ಧವನ್ ಶತಕ ಸಿಡಿಸಿದ್ದರು.



# ಹೊಸ ಲುಕ್‌ಗೆ ಬದಲಾದ ಚಂದನ್

ಕನ್ನಡ ಚಿತ್ರರಂಗದ ಅದ್ಭುತ ಸಂಗೀತ ನಿರ್ದೇಶಕ, ರಾಪರ್, ನಟ ಹಾಗೂ ಬಿಗ್ ಬಾಸ್ ಸ್ಪರ್ಧಿ ಚಂದನ್ ಶೆಟ್ಟಿ ಇದೀಗ ಹೊಸ ಲುಕ್‌ಗೆ ಬದಲಾಗಿದ್ದಾರೆ. ಸೋಷಿಯಲ್ ಮೀಡಿಯಾದಲ್ಲಿ ಆಕ್ಟಿವ್ ಆಗಿರುವ ಚಂದನ್ ಶೆಟ್ಟಿ ತಮ್ಮ ಹೊಸ ಲುಕ್ ಫೋಟೋ ಅಪ್ಲೋಡ್ ಮಾಡಿದ್ದಾರೆ. ಮಜಾ ಏನೆಂದರೆ ಚಂದು ಕೊಟ್ಟಿರುವ ಕ್ಯಾಪ್ಶನ್. 'ಜೀವನದಲ್ಲಿ ಬೇರೆ ಏನೂ ಬದಲಾಯಿಸಲು ಆಗದೇ ಇದ್ದಾಗ ಹೊಸ ಲುಕ್‌ಗೆ ಬದಲಾಗಿ' ಎಂದು ಬರೆದುಕೊಂಡಿದ್ದಾರೆ. ನೆಟ್ಟಿಗರು ಇದಕ್ಕೆ ಬೇರೆ ಬೇರೆ ಅರ್ಥ ಕೊಡುತ್ತಿದ್ದಾರೆ. ಅಯ್ಯೋ ಬಿಡಿ ಸರ್ ನಿವೇದಿತಾ ಗೌಡ ಜೊತೆ ಸಂಸಾರ ಮಾಡ್ಕೊಂಡು ಬದಲಾಯಿಸುವುದು ಅಷ್ಟರಲ್ಲೇ ಇತ್ತು ಅದರ ಬದಲು ನೀವು ಲುಕ್ ಬದಲಾಯಿಸಿಕೊಂಡಿದ್ದೇ ವಾಸಿ... ಎಂದು ನೆಟ್ಟಿಗರು ಕಾಮೆಂಟ್ ಮಾಡಿದ್ದಾರೆ.ಅಷ್ಟಕ್ಕೂ ಚಂದನ್ ಶೆಟ್ಟಿ ಇದ್ದಕ್ಕಿದ್ದಂತೆ ಲುಕ್ ಬದಲಾಯಿಸಿದ್ದು ಯಾಕೆ? ಹೊಸ ಸಿನಿಮಾ ಪ್ರಾಜೆಕ್ಟ್ ಬಂದಿದ್ಯಾ ಅಥವಾ ಜೀವನದಲ್ಲಿ ಹೊಸ ಹುಡುಗಿ ಎಂಟ್ರಿ ಕೊಟ್ಟಿದ್ದಾಳಾ ಗೊತ್ತಿಲ್ಲ. ಸದ್ಯ ಹೊಸ ಹಾಡುಗಳನ್ನು ಕ್ರಿಯೇಟ್ ಮಾಡಿ ಬೇರೆ ಬೇರೆ ಊರುಗಳನ್ನು ಸುತ್ತಿ ಕಾರ್ಯಕ್ರಮಗಳನ್ನು ನೀಡುವುದರಲ್ಲಿ ಚಂದನ್ ಶೆಟ್ಟಿ ಬ್ಯುಸಿಯಾಗಿದ್ದಾರೆ.



# ವಧುವಿನಂತೆ ರೆಡಿಯಾದ ರಜಿನಿ

ಕನ್ನಡ ಕಿರುತೆರೆಯಲ್ಲಿ ನಾಯಕ ನಟಿಯಾಗಿ, ವಿಲನ್ ಆಗಿ ಗುರುತಿಸಿಕೊಂಡ ನಟಿ ರಜಿನಿ. ಹಿಟ್ಲರ್ ಕಲ್ಯಾಣ ಸೀರಿಯಲ್ ನಟಿ ರಜಿನಿ ಸೋಶಿಯಲ್ ಮೀಡಿಯಾದಲ್ಲಿ ಆಕ್ಟೀವ್ ಆಗಿರುವ ಇವರು ಹೊಸ ಹೊಸ ಫೋಟೊ ಶೂಟ್ ಮೂಲಕವೇ ಸುದ್ದಿಯಲ್ಲಿರುತ್ತಾರೆ.

ಇದೀಗ ನಟಿ ತಮ್ಮ ಇನ್'ಸ್ಟಾಗ್ರಾಂ ನಲ್ಲಿ ಸಾಂಪ್ರದಾಯಿಕ ಉಡುಗೆಯುಟ್ಟು ಪೋಸ್ ಕೊಟ್ಟಿರುವ ಫೋಟೊಗಳನ್ನು ಶೇರ್ ಮಾಡಿದ್ದು, ರಜಿನಿಯನ್ನು ನೋಡಿದ್ರೆ, ಥೇಟ್ ಮದುಮಗಳಂತೆ ಕಾಣಿಸ್ತಿದ್ದಾರೆ. ತುಂಬಾನೆ ಸುಂದರವಾಗಿಯೂ ಕಾಣಿಸುತ್ತಿದ್ದಾರೆ.

ಗೋಲ್ಡನ್ ಬಣ್ಣದ ಸೀರೆಯುಟ್ಟಿರುವ ರಜಿನಿ, ಉದ್ದವಾದ ಜಡೆ ಕಟ್ಟಿ, ಅದರ ಮೇಲೆ ಉದ್ದಕ್ಕೆ ಜ್ಯುವೆಲ್ಲರಿ ಹಾಕಿದ್ದಾರೆ. ಜೊತೆಗೆ ಮೈತುಂಬಾ ಒಡವೆಗಳನ್ನು ಹಾಕಿ, ಹಣೆಯಲ್ಲಿ ಮುಂದಾಲೆ, ಮೂಗಿನಲ್ಲಿ ದೊಡ್ಡದಾದ ನತ್ತು, ಕಿವಿಯಲ್ಲಿ ಜುಮುಕಿ ಧರಿಸಿ ವಧುವಿನಂತೆ ಸಿಂಗರಿಸಿಕೊಂಡಿದ್ದಾರೆ.

ರಜಿನಿ ತಮ್ಮ ಫೋಟೊಗಳ ಜೊತೆಗೆ ವಿಡಿಯೋ ಕೂಡ ಪೋಸ್ಟ್ ಮಾಡಿದ್ದಾರೆ. ಇದರ ಜೊತೆಗೆ ಮನಸ್ಸೇ ಸರ್ವಸ್ವ, ನೀವು ಏನನ್ನು ಆಲೋಚಿಸುತ್ತೀರೋ ಅದಾಗುತ್ತೀರಿ. ಮನಸ್ಸಿಗಿರುವ ಅದ್ಭುತ ಮತ್ತು ಪವಾಡ ಶಕ್ತಿಯೇ ಅದು.. 'ಗೌತಮ ಬುದ್ಧ ' ಶುಭ ದಿನ ಎಂದು ಬರೆದುಕೊಳ್ಳುವ ಮೂಲಕ ಈ ದಿನಕ್ಕೊಂದು ಶುಭಾಷಿತವನ್ನು ಸಹ ನೀಡಿದ್ದಾರೆ.

ರಜಿನಿಯ ಈ ಸುಂದರವಾದ ಬ್ರೈಡಲ್ ಲುಕ್ ನೋಡಿ ಅಭಿಮಾನಿಗಳು ಮನಸೋತಿದ್ದಾರೆ, ಅಮೋಘ, ನೀವು ಮೈಸೂರು ಮಹಾರಾಣಿ ಥರ ಕಾಣಿಸ್ತೀರಿ, ಧರೆಗಿಳಿದ ದೇವತೆ, ಮತ್ತೆ ಅಮೃತಾಳನ್ನು ನೋಡಿದ ಹಾಗಾಯ್ತು ಎಂದು ಕಾಮೆಂಟ್ ಮಾಡುವ ಮೂಲಕ ತಮ್ಮ ಮೆಚ್ಚುಗೆ ಸೂಚಿಸಿದ್ದಾರೆ ರಜಿನಿ.

ಈ ಫೋಟೊ ನೋಡಿದ್ರೆ ರಜಿನಿ ಮದುವೆಯಾಗುತ್ತಿದ್ದಾರ ಎನ್ನುವ ಪ್ರಶ್ನೆ ಮೂಡದೇ ಇರದು. ಆದರೆ ರಜನಿ ಮಾತ್ರ ಇತ್ತೀಚೆಗೆ ಸಂದರ್ಶನವೊಂದರಲ್ಲಿ ತಾವು ಸದ್ಯಕ್ಕೆ ಮದುವೆಯಾಗೋದಿಲ್ಲ. ಮದುವೆಯಾಗೋದಾದರೆ ಜನರಿಗೆ ಹೇಳಿಯೇ ಆಗುತ್ತೇನೆ ಎಂದಿದ್ದರು. ಅಲ್ಲದೇ ತಾವು ಜೊತೆಯಾಗಿ ರೀಲ್ಸ್ ಮಾಡುವ ಅರುಣ್ ಗೌಡ, ನನ್ನ ಸ್ನೇಹಿತ ಅಷ್ಟೇ ಅಂತಾನೂ ಹೇಳಿದ್ದರು.

ಪ್ರಕಾಶಕ- ಸಂಪಾದಕ ಹಾಗೂ ಮಾಲೀಕ ಲಕ್ಷ್ಮೀಪ್ರಸನ್ನ ಆರ್.ಹೆಚ್. ಅವರಿಂದ #1652/6, 20ನೇ ತಿರುವು, 8ನೇ ಮುಖ್ಯರಸ್ತೆ, ಸಿ ಬ್ಲಾಕ್, ಸಹಕಾರ ನಗರ, ಬೆಂಗಳೂರು-560092 ಇಲ್ಲಿ ಪ್ರಕಟಗೊಂಡು, ಮುದ್ರಣ: ಪಿ.ಎನ್.ಪ್ರಿಂಟರ್ಸ್, ನರಸಿಪಾಳ್ಯ, ಅರಿಶಿಣಕುಂಟೆ(ಪೋ.), ನೆಲಮಂಗಲ, ಬೆಂಗಳೂರು-562123 ಇಲ್ಲಿ ಮುದ್ರಿಸಲ್ಪಟ್ಟಿದೆ. **RNI.KAR/KAN/2009/31934,** ದೂರವಾಣಿ: **9448074878**
Edited, Published and Owned by Laxmiprasanna R.H, #1652/6, 20th Cross, 8th Main, C Block, SahakarNagar, Bangalore-560092. Printed by P N Printers, Narasipalya, Arishinakunte(Post), Kasaba(hobali), Nelamangala, Bengaluru-562123
Email-mussanje2010@gmail.com, Phone: **944807487**